
ಸಂಪುಟ 24 ಸಂಚಿಕೆ 49
ಡಿಸೆಂಬರ್ 8, 2002 ಬೆಲೆ ರೂ. 3.00

ಐಕ್ಯರಂಗ

ದುಡಿಯುವ ಜನರ ಪ್ರಾಣ ಮಿತ್ರ



DYFI ರಾಜ್ಯ ಸಮ್ಮೇಳನ
ಯುವ ಭವಿಷ್ಯದ ರಕ್ಷಣೆಗಾಗಿ ಆಂದೋಲನ




ಸಿಪಿಸಿ ಮಹಾಧಿವೇಶನ
ಚೀನಾ : ಸರ್ವಾಂಗೀಣ, ಸಮೃದ್ಧ ಸಮಾಜದತ್ತ

'ತೆಹಲ್ಕಾ' ತನಿಖೆಯಲ್ಲಿ ಕರಾಳ ಹಸ್ತ

ಗುಲ್ಬರ್ಗಾ ಪಟ್ಟಣ ಸಹಕಾರಿ ಬ್ಯಾಂಕ್ ಗುಳುಂ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 6

ಹಿಂದಿನ ಸಂಚಿಕೆಯಲ್ಲಿ ಸಾಮ್ರಾಜ್ಯಶಾಹಿಗಳ ವಿರುದ್ಧ ದೂರದ ತೀರದಲ್ಲಿ ಬಂಡಾಯವೆದ್ದು ಮೌನವಾಗಿ ಪ್ರಾಣತ್ಯಾಗ ಮಾಡಿದ ಆ ಭಾರತೀಯ ಸೈನಿಕರ ಹಾಗೂ ಅಧಿಕಾರಿಗಳ ರಕ್ತ ಪ್ರತಿ ನಿಧಿಸುವ ಬಗ್ಗೆ, ಸಾಮ್ರಾಜ್ಯಶಾಹಿಯ ಅತ್ಯಂತ ಕೆಟ್ಟ ಗುಣ ಕಂಡ ಜಯಪಾಲ್ ಸಿಂಗ್ ಪಿಸುಮಾತಿನಲ್ಲಿ ಹೂಡಿದ ಪಿತೂರಿ, ಬಿಲಿ ಮೂತಿಯವರ ಪಾಠ ಮತ್ತುಯಾವಾಗಲೂ ಬ್ರಿಟಿಷರ ಜತೆಗಿನ ಸಂಘರ್ಷ ಈ ಬಗ್ಗೆ ಓದಿರುವಿರಿ. ಮುಂದೆ ಓದಿ....



ಕನ್ನಡಕ್ಕೆ: ವಿಶ್ವ ಕುಂದಾಪುರ

ಆಂತರಿಕ ತುಮುಲಗಳು.....

ಮೊದಲ ಪ್ರಯತ್ನ

ಭಾರತೀಯ ಅಧಿಕಾರಗಳಲ್ಲಿದ್ದ ಅತೃಪ್ತಿಗೆ ಸಂಘಟಿತ ರೂಪ ಕೊಡಲು ನಾನು ನಡೆಸಿದ ಮೊದಲ ಪ್ರಯತ್ನವಿದು. ನನ್ನ ಕೊಠಡಿಯ ಬೆಂಕಿಯ ಕಾವಿನ ಮುಂದೆ ಕೂತು ನಾವು ರಹಸ್ಯವಾಗಿ ಚರ್ಚಿಸಿದೆವು. ಸೈನ್ಯದಲ್ಲಿದ್ದು ಈ ರೀತಿ ಮಾಡುವುದರ ಪರಿಣಾಮ ಏನೆಂಬುದು ನಮಗೆ ಚೆನ್ನಾಗಿ ಗೊತ್ತಿತ್ತು. ಅಧಿಕಾರಿಗಳ ಜತೆ ಸಾಮೂಹಿಕವಾಗಿ ಚೌಕಾಸಿ ಮಾಡುವುದನ್ನು ಕೂಡ ಬಂಡಾಯವೆಂದು ಪರಿಗಣಿಸಲಾಗುತ್ತಿತ್ತು. ಬಂಡಾಯದ ಪಿತೂರಿ ಹೂಡುವುದು ಹಾಗೂ ಆ ಗುರಿಸಾಧನೆಗಾಗಿ ಸಂಘಟನೆ ರೂಪಿಸುವುದು ಮರಣದಂಡನೆಗೆ ಅರ್ಹವಾದ ಅಪರಾಧ. ನಾವು ಎಲ್ಲದಕ್ಕೂ ಸಿದ್ಧವಾಗಿದ್ದೆವು.

ನಾವು ಪಿಸುಗುಡುತ್ತಾ ಚರ್ಚಿಸಿದೆವು. ಭಾರತೀಯ ಅಧಿಕಾರಿಗಳಿಗೆ ರಾಜಕೀಯ ಶಿಕ್ಷಣ ನೀಡುವುದು, ಹೊಗೆಯಾಡುತ್ತಿರುವ ಅತೃಪ್ತಿಗೆ ಪ್ರಜ್ಞಾಪೂರ್ವಕ ಸಂಘಟಿತ ಸ್ವರೂಪ ಹಾಗೂ ನಿರ್ದೇಶನ ಕೊಡುವುದು - ನಮ್ಮ ಸಮಾಲೋಚನೆಯ ಮುಖ್ಯ ವಿಷಯ, ಮುಖ್ಯ ಅಜೆಂಡಾ ಆಗಿತ್ತು. ಮಧ್ಯರಾತ್ರಿ ಬಹುಹೊತ್ತಿನವರೆಗೆ ನಮ್ಮ ಸಮಾಲೋಚನೆ ಸಾಗಿತು. ಅಬ್ದುಲ್ ಹೊರಗಡೆ ಕಾವಲಿದ್ದ.

ಈ ರಹಸ್ಯ ಸಭೆ ನಡೆಸಿದ್ದು 1942 ಫೆಬ್ರವರಿ 10 ರಂದು. ಅಂದರೆ ಸಿಂಗಾಪುರ ಜಪಾನ್‌ಗೆ ಶರಣಾಗುವ ಕೇವಲ ಐದು ದಿನಗಳ ಮುಂಚೆ.

ಸುಭಾಸ್‌ಚಂದ್ರ ಬೋಸ್ ಭಾರತದಿಂದ ಕಾಣೆಯಾಗಿದ್ದರು. ದೇಶದ ಉದ್ದಗಲದಲ್ಲಿ ಅತೃಪ್ತಿಯ ಜ್ವಾಲೆ ಭುಗಿಲೆದ್ದಿತ್ತು. ನಮಗೆ ಇದರ ಅರಿವು ಚೆನ್ನಾಗಿತ್ತು. "ಇದೊಂದು ಸುವರ್ಣಾವಕಾಶ. ಇದನ್ನು ನಾವು ಕಳೆದುಕೊಳ್ಳಬಾರದು" ಎಂಬ ಒಂದು ಮೂಕ, ಸ್ವಯಂಸ್ಫೂರ್ತಿಯ ಮಾತು ದೇಶದೆಲ್ಲೆಡೆ ಹರಡಿತು.

ಗಾಂಧೀಜಿ ನಿಧಾನವಾಗಿ ಆದರೆ ದೃಢವಾಗಿ ತಮ್ಮ ಅಹಿಂಸಾ ಹೋರಾಟದ ದಾರಿಯತ್ತ ಬರುತ್ತಿದ್ದರು. ರಾಷ್ಟ್ರೀಯ ಪರಿಸ್ಥಿತಿ ಸ್ಫೋಟಕವಾಗಿತ್ತು. ಆದರೆ ಅಹಿಂಸಾ ಬಂಡಾಯದ ಗಾಂಧಿ ಯೋಚನಾ ಲಹರಿಗೆ ನಾವು ಹೊಂದಿಕೊಳ್ಳುತ್ತೇವೆಯೋ ಇಲ್ಲವೋ ನಮಗೆ ಗೊತ್ತಿರಲಿಲ್ಲ. ಯಾವುದೇ ರಾಜಕೀಯ ಪಕ್ಷ ಸಶಸ್ತ್ರ ಪಡೆಗಳ ಒಳಗಡೆ ಯಾವುದೇ ಕೆಲಸ ಮಾಡಿರಲಿಲ್ಲ. ಈ ಬಗ್ಗೆ ಗಾಂಧೀಜಿಯ ನಿಲುವು ಏನೆಂಬುದು ನಮಗೆ ಗೊತ್ತಿತ್ತು. 1930 ರಲ್ಲಿ ಚಂದರ್‌ಸಿಂಗ್ ಗಢವಾಲೆ ಮತ್ತವರ ಸಹೋದ್ಯೋಗಿಗಳು ಎಬ್ಬಿಸಿದ ಮೊದಲ ಬಂಡಾಯದ ಗೊಣಗಾಟವನ್ನು ಯಾರೂ ಗಮನಿಸಿರಲಿಲ್ಲ! ಬ್ರಿಟೀಷ್ ಭಾರತೀಯ ಸೇನೆಯ ಒಳಗಡೆ ರಾಜಕೀಯ ಕಾರ್ಯನಿರ್ವಹಿಸಲು ಕಮ್ಯುನಿಸ್ಟ್ ಪಕ್ಷ ಸಹಿತ ಯಾವುದೇ ರಾಜಕೀಯ ಪಕ್ಷ ಗಮನ ನೀಡಿರಲಿಲ್ಲ.

ನಾವು ರಾಜಕೀಯವಾಗಿ ಏಕಾಂಗಿಯಾಗಿದ್ದೆವು; ಸ್ವತಃ ನಮ್ಮ ಜನರು ನಮ್ಮನ್ನು ಬಾಡಿಗೆ ಬಂಟರೆಂದು ಕರೆಯುತ್ತಿದ್ದರು. ಭಾರತೀಯ ಹುಡುಗಿಯರು ನಮ್ಮನ್ನು ದ್ವೇಷಿಸುತ್ತಿದ್ದರು. ನಮ್ಮ ಬಗ್ಗೆ ಹೆದರಿಕೆಯಿತ್ತು. ನಾವು ಕುಡುಕರು ಹಾಗೂ ಅತ್ಯಾಚಾರಿಗಳು ಎಂಬ ಭಾವನೆಯಿತ್ತು.

ಸಾಮ್ರಾಜ್ಯಶಾಹಿ ದೇಶವೊಂದರ ಅಧಿಕಾರದ ಈ ಪ್ರಧಾನ ಅಂಗ ಅತೃಪ್ತಿಯಿಂದ ಕುದಿಯುತ್ತಿತ್ತು. ಹೊರಸೂಸುತ್ತಿದ್ದ ಹೊಗೆಯ ಒಂದು ತೆಳ್ಳಗಿನ ರೇಖೆ ಒಳಗಿನ ಬೆಂಕಿಯ ಅಗಾಧತೆಗೆ ಸಾಕ್ಷಿಯಾಗಿತ್ತು. ಸರಿಯಾದ ಮಾರ್ಗದರ್ಶನ ನೀಡಿದರೆ, ಆ ಅತೃಪ್ತಿ ಭಾರತದ ಛಿದ್ರತೆ ಹಾಗೂ ವಿಭಜನೆಗೆ ಕಾರಣವಾದ ಆ ಇಡೀ ಬ್ರಿಟೀಷ್ ವ್ಯವಸ್ಥೆಯನ್ನೇ ವ್ಯಾಪಿಸಬಹುದಾಗಿತ್ತು. ಆದರೆ ಈ ಅತೃಪ್ತಿಯ ರೇಖೆಯನ್ನು ಯಾರೂ ಗಮನಿಸಲಿಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ನಮ್ಮ ಬಗ್ಗೆ ಇದ್ದ ಅಸಹನೆ ನಮಗೆ ಗೊತ್ತಿತ್ತು. ನಾವು ಏಕಾಂಗಿಯಾಗಿದ್ದೇವೆ ಎಂಬ ಭಾವನೆ ಬಲವಾಗಿ ಕಾಡಿತು. ಹಾಗೂ ಭವಿಷ್ಯ ಕರಾಳವಾಗಿದೆ ಎನಿಸಿತ್ತು. ಆದರೂ ಸೈನ್ಯದ ಲಕ್ಷಾಂತರ ಜನರು ಈ ಕತ್ತಲೆ ಅಳಿಸಿ ಬೆಳಕು ತರಬಲ್ಲರು ಎಂಬ ಆಶಾವಾದ ನಮ್ಮಲ್ಲಿತ್ತು.

> **ಸಾಮ್ರಾಜ್ಯಶಾಹಿ ದೇಶವೊಂದರ ಅಧಿಕಾರದ ಈ ಪ್ರಧಾನ ಅಂಗ ಅತೃಪ್ತಿಯಿಂದ ಕುದಿಯುತ್ತಿತ್ತು. ಹೊರಸೂಸುತ್ತಿದ್ದ ಹೊಗೆಯ ಒಂದು ತೆಳ್ಳಗಿನ ರೇಖೆ ಒಳಗಿನ ಬೆಂಕಿಯ ಅಗಾಧತೆಗೆ ಸಾಕ್ಷಿಯಾಗಿತ್ತು. ಸರಿಯಾದ ಮಾರ್ಗದರ್ಶನ ನೀಡಿದರೆ, ಆ ಅತೃಪ್ತಿ ಭಾರತದ ಛಿದ್ರತೆ ಹಾಗೂ ವಿಭಜನೆಗೆ ಕಾರಣವಾದ ಆ ಇಡೀ ಬ್ರಿಟೀಷ್ ವ್ಯವಸ್ಥೆಯನ್ನೇ ವ್ಯಾಪಿಸಬಹುದಾಗಿತ್ತು.**

ಆ ರೂಮಿನಲ್ಲಿ ಸೇರಿದಾಗ ಮತ್ತೆ ಏಕಾಂಗಿತನ ಕಾಡುತ್ತಿತ್ತು. ಹೊರಗಡೆ ಭಾರಿ ಹಿಮಪಾತ. ತಲುಪಲಸಾಧ್ಯವಾದಂಥ ಪರ್ವತ ಶಿಖರಗಳ ಆ ಸನ್ನಿವೇಶ ನಮ್ಮ ಏಕಾಂಗಿತನದ ಭಾವನೆಯನ್ನು ಇಮ್ಮಡಿಗೊಳಿಸುತ್ತಿತ್ತು. ನಮ್ಮ ನಡುವೆ ನೀರವ ಮೌನ ನೆಲೆಸಿತ್ತು. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಆ ಭಯಾನಕ ಮೌನವನ್ನು ಭೇದಿಸಿದ್ದು ಅಬ್ದುಲ್ಲಾರ ಗೊರಲು ಕೆಮ್ಮು ಮಾತ್ರ.

ಖರಿಯುವರನ್ನು ರಕ್ಷಿಸಲಿಕ್ಕಾಗಿ ಒಂದು ರಹಸ್ಯ ರಕ್ಷಣಾ ಸಮಿತಿಯನ್ನು ರಚಿಸಲು ನಾವು ನಿರ್ಧರಿಸಿದೆವು. ನಮಗೆ ತೊಂದರೆಯಾಗದ ರೀತಿಯಲ್ಲಿ ಶಾಲೆಗೆ ಗೊತ್ತಾಗದ ರೀತಿಯಲ್ಲಿ ಬ್ರಿಟಿಷರ ವಿರುದ್ಧ ಸೈನಿಕರನ್ನು ಸಂಘಟಿಸಲು ನಮ್ಮ ಯುನಿಟ್‌ಗಳಿಗೆ, ನಮ್ಮ ಸೈನಿಕರಿದ್ದಲ್ಲಿಗೆ ತೆರಳಲು ನಾವು ಯೋಚಿಸಿದೆವು.

ರಾಷ್ಟ್ರೀಯ ಆಂದೋಲನವೊಂದು ನಿಶ್ಚಯವಾಗಿಯೂ ಮೇಲೆದ್ದು ಬರುತ್ತದೆ. ನಾವು ಅದರೊಂದಿಗೆ ಸೇರಿಕೊಳ್ಳಲು ಸಿದ್ಧರಾಗೋಣ. ಪ್ರತ್ಯೇಕಗೊಂಡ ಹಾಗೂ ಶತ್ರುಜತೆ ಸಣ್ಣಪುಟ್ಟ ಘರ್ಷಣೆಯಲ್ಲಿ ನಮ್ಮ ಶಕ್ತಿಯನ್ನು ಹ್ರಾಸ ಮಾಡಿಕೊಳ್ಳುವುದು ಮೂರ್ಖತನ. ನಮ್ಮ ಶಕ್ತಿಯನ್ನು ಕಾಯ್ದುಕೊಂಡು ವೃದ್ಧಿಸಿಕೊಳ್ಳೋಣ ಎಂದು ಚಿಂತಿಸಿದೆವು.

ಸಂಚಾಲಕ

ನಾವು ನಾಲ್ವರು ಸಮಿತಿಯಲ್ಲಿರಬೇಕು ಹಾಗೂ ನಾನು (ಜೈಪಾಲ್ ಸಿಂಗ್) ಸಂಚಾಲಕರಾಗಿರಬೇಕೆಂದು ನಿರ್ಧಾರವಾಯಿತು. ನಮ್ಮ ಘಟಕಗಳಿಗೆ (ಯುನಿಟ್) ನಮ್ಮನ್ನು ನಿಯೋಜಿಸಿದ ನಂತರ ಪರಿಸ್ಥಿತಿಯ ಪರಾಮರ್ಶೆಗೆ ನಾವು ಸೇರಬೇಕು ಎಂದ ನಿರ್ಣಯಿಸಿದೆವು. ದೂರದೂರದ ಪ್ರದೇಶಗಳ ಪ್ರತ್ಯೇಕ ಯೂನಿಟ್‌ಗಳಿಗೆ ನಾವು ನಾಲ್ವರು ನಿಯೋಜನೆಗೊಂಡರೆ ನಮ್ಮ ನಡುವೆ ಮಾಹಿತಿ ವಿನಿಮಯ ಹೇಗೆ ನಡೆಸಬಹುದು ಎಂಬುದನ್ನು ನಿರ್ಧರಿಸುವಂತೆ ನನಗೆ ಸೂಚಿಸಲಾಯಿತು. ಒಂದು ಸಂಕೇತ(ಕೋಡ್) ರೂಪಿಸಲಾಯಿತು. ಗುರಿಸಾಧನೆಗಾಗಿ ಗೋಪ್ಯತೆ ಹಾಗೂ ಸಮರ್ಪಣೆಯ ಪ್ರತಿಜ್ಞೆಯನ್ನು ಸ್ವೀಕರಿಸಿದೆವು. ಮಧ್ಯರಾತ್ರಿ ಕಳೆದ ನಂತರ ನಾವು ಚದುರಿದೆವು. ಅಬ್ದುಲ್ಲಾ ವರಂಡಾದಲ್ಲಿ ಮಲಗಿದ್ದ.

ಅತ್ತ, ದೂರದಲ್ಲಿ ಬೆಟ್ಟದ ಮೇಲೆ ಅಧಿಕಾರಿಗಳ ಮೆಸ್‌ನಲ್ಲಿ ಬ್ರಿಟಿಷ್ ಅಧಿಕಾರಿಗಳು ಹಾಡುತ್ತಿದ್ದು. 'ಸದಾ ಇದ್ದೇ ಇರುತ್ತದೆ ಒಂದು ಇಂಗ್ಲೆಂಡ್'. ನನ್ನದೇ ಮಾತೃಭೂಮಿಯ ಬಗೆಗೆ ನನಗ ಕೆಡುಕೆನಿಸಿತು.

ಅತ್ತ ಬದಲಾದ ಹಾಡು ಕೇಳಿಬಂತು "ಯಾವತ್ತೂ ಲಂಡನ್ ದೀಪಗಳು ಮತ್ತೆ ಬೆಳಗುವವೋ" ಒಂದು ರೀತಿಯ ವಿಷಣ್ಣ ಭಾವ ನನ್ನ ಹೃದಯವನ್ನು ಕಲಕಿತು. ಉಸಿರಾಟ ಸ್ವಲ್ಪ ಕಷ್ಟವೆನಿಸಿತು.

"ಗುಲಾಮರಾಗಿ ಯುದ್ಧ ಮುಗಿದ ನಂತರ ನಾವು ದೆಹಲಿಗೆ ಮತ್ತು ನಮ್ಮ ಮನೆಗಳಿಗೆ ಮರಳೋಣವೆ"?

ಅಂದಿನ ದಿನಗಳಲ್ಲಿ ಈ ಪ್ರಶ್ನೆ ಕೇಳುವಲ್ಲಿ ನಾನು ಏಕಾಂಗಿ ಆಗಿರಲಿಲ್ಲ. ಸಾವಿರಾರು ಜನರು ಈ ಪ್ರಶ್ನೆಯನ್ನು ಸ್ವಗತದಲ್ಲಿ ಕೇಳಿಕೊಳ್ಳುತ್ತಿದ್ದರು. ದೇಶಪ್ರೇಮಿ ಬ್ರಿಟಿಷ್ ಸಮುದಾಯದವರ ಹಾಡು, ತಮ್ಮ ಮಾತೃಭೂಮಿಗಾಗಿನ ಅವರ ತಹತಹಿಕೆ ನಮ್ಮಲ್ಲಿ ನಮ್ಮ ಮಾತೃದೇಶದ ನೆನಪನ್ನು ಉದ್ದೀಪಿಸಿತು. ನಮ್ಮ ಹೃದಯಗಳಲ್ಲಿ ದೇಶಪ್ರೇಮದ ಹಂಬಲವನ್ನು ಚಿಗುರಿಸಿತು.

ದಿನಗಳು ಕಳೆದಂತೆ ಹಾಗೂ ಯುದ್ಧ ತೀವ್ರಗೊಂಡಂತೆ ನಮ್ಮ ಮತ್ತು ಬ್ರಿಟಿಷ್ ಅಧಿಕಾರಿಗಳ ನಡುವಿನ ಇಂಥ ಘಟನೆಗಳು ಹೆಚ್ಚುಹೆಚ್ಚಾಗಿ ನಡೆದವು. ದೇಶಾದ್ಯಂತ ಎಲ್ಲಾ ಅಧಿಕಾರಿಗಳ ಮೆಸ್‌ಗಳಲ್ಲಿ ಈ ಮೂಕ ಸಂಘರ್ಷ ಬೆಳೆಯಿತು. ಸೇನೆಯ ಒಗ್ಗಟ್ಟು ಎನ್ನುವುದು ಒಂದು ಔಪಚಾರಿಕ ಪ್ರಕ್ರಿಯೆಯಾಗಿತ್ತು ಅಷ್ಟೇ. ದಿನಗಳೆದಂತೆ ಆಂತರಿಕ ತುಮುಲ ಸ್ಫೋಟಗೊಂಡು ಬಹಿರಂಗಕ್ಕೆ ಬಂತು. ಭಾರತೀಯ ಮತ್ತು ಬ್ರಿಟಿಷ್ ಅಧಿಕಾರಿಗಳು ಪ್ರತ್ಯೇಕವಾಗಿ ಕುಳಿತು ತಿಂದು ಕುಡಿಯುವ ಹಾಗೂ ಪರಸ್ಪರರನ್ನು ದೂಷಿಸುವ ದಿನವೂ ಬಂತು. ಇದು ಭಾರತದ ಕಮಾಂಡರ್ ಇನ್ ಚೀಫ್ ವವೆಲ್‌ನ ಗಮನವನ್ನು ಬೇಗನೆ ಸೆಳೆಯಿತು. ಸ್ವಾಭಿಮಾನಿ ಹಾಗೂ ಸಂವೇದನಾಶೀಲ ಭಾರತೀಯರನ್ನು ಚೆನ್ನಾಗಿ ನಡೆಸಿಕೊಳ್ಳಿ ಎಂದು ವವೆಲ್ ಬ್ರಿಟಿಷ್ ಅಧಿಕಾರಿಗಳಿಗೆ ಸಲಹೆ ಮಾಡಿದರು. ಇದು ಪ್ರಾಮಾಣಿಕ ಸಲಹೆ ಆಗಿರಲಿಲ್ಲವೆಂಬುದು ನಮಗೆ ಗೊತ್ತು. ಕಣ್ಣೊರೆಸುವ ತಂತ್ರವಷ್ಟೆ. ಇದರಿಂದ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ. ನೋವು ಇನ್ನೂ ಆಳಕ್ಕಿಳಿಯಿತು.

1942 ಮಾರ್ಚ್‌ನಲ್ಲಿ ಕೋರ್ಸ್ ಮುಕ್ತಾಯವಾಯಿತು. ಎಲ್ಲಾ ಭಾರತೀಯ ಅಧಿಕಾರಿಗಳಿಗೆ ಕೆಟ್ಟ ಫಲಿತಾಂಶ ನೀಡಲಾಯಿತು. ಯಾವುದೇ ಕೆಲಸವನ್ನು ನಾವಾಗಿಯೇ ಆರಂಭಿಸುವ ಮನೋಭಾವ ನನ್ನಲ್ಲಿಲ್ಲ ಎಂದು ನನ್ನ ವರದಿಯಲ್ಲಿ ಬರೆಯಲಾಗಿತ್ತು. ನನ್ನನ್ನು ಅಂಬಾಲಾದಲ್ಲಿನ 323 ಸಪ್ಲೈ ಸೆಕ್ಷನ್‌ನ ಕಮಾಂಡಿಂಗ್ ಆಫೀಸರ್ ಆಗಿ ನಿಯುಕ್ತಿಗೊಳಿಸಲಾಯಿತು. ನಾನೀಗ ಪೂರ್ಣ ಲೆಫ್ಟಿನೆಂಟ್ ಆಗಿದ್ದೆ.

(ಮುಂದುವರಿಯುವುದು)

ಇಂದಿಗಾಗಿ ನಾಳೆಗಳ ಕಾರ್ಯಕ್ರಮಗಳು

● *ಡಿಸೆಂಬರ್ 6, 2002 ಬೆಂಗಳೂರು ಹಾಗೂ ರಾಜ್ಯದ ಇತರೆಡೆ*

ಬಾಬ್ರಿ ಮಸೀದಿ ಧ್ವಂಸ - 10 ವರ್ಷಗಳ ಕಹಿ ನೆನಪು. ಜಾತ್ಯಾತೀತತೆ, ಕೋಮು ಸೌಹಾರ್ದತೆಯ ರಕ್ಷಣೆಗಾಗಿ ಆರ್‌ಎಸ್‌ಎಸ್ - ಬಿಜೆಪಿ ಕೂಟದ ಕುತಂತ್ರವನ್ನು ಸೋಲಿಸುವುದಕ್ಕಾಗಿ ಕರೆ

ಗಾಂಧಿ ಪ್ರತಿಮೆ ಬಳಿ ಧರಣಿ

● *ಡಿಸೆಂಬರ್ 10*

ವಿನಾಶಕಾರಿ ರೇಷ್ಮೆ ಆಮದು ನೀತಿಯನ್ನು ವಿರೋಧಿಸಿ ರೇಷ್ಮೆ ಕೃಷಿಕರ ಅಖಿಲ ಭಾರತ ಪ್ರತಿಭಟನಾ ಪ್ರದರ್ಶನ. ಕೇಂದ್ರ ರೇಷ್ಮೆ ಮಂಡಳಿ ಎದುರು, ಮಡಿವಾಳ, ಬೆಂಗಳೂರು.

ಮಧ್ಯಾಹ್ನ 12 ಗಂಟೆಗೆ ಮಡಿವಾಳ ಪೋಲೀಸ್ ಸ್ಟೇಷನ್ ಹಿಂಭಾಗದ ಮಾರುಕಟ್ಟೆ, ಹೊಸೂರು ರಸ್ತೆಯಿಂದ ಮೆರವಣಿಗೆ

● *ಡಿಸೆಂಬರ್ 22, 23, 24-2002*

ಗ್ರಾಮ ಪಂಚಾಯತ್ ನೌಕರರ ರಾಜ್ಯಮಟ್ಟದ ತರಬೇತಿ ಶಿಬಿರ. ಮುರುಡೇಶ್ವರ - ಉ.ಕ. ಜಿಲ್ಲೆ,

ಉದ್ಘಾಟನೆ 22 ರಂದು ಡಾ. ಥಾಮಸ್ ಐಸಾಕ್, ಶಾಸಕರು, ಕೇರಳ ಇವರಿಂದ

● *ಡಿಸೆಂಬರ್ 26, 27, 28-2002*

ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಸಮ್ಮೇಳನ, ಚಿಕ್ಕಮಗಳೂರು

ಗುಲ್ಬರ್ಗಾ : ಸಹಕಾರ ಬ್ಯಾಂಕಿನ ಹಣ ಗುಳುಂ

ಗುಲ್ಬರ್ಗಾದ ಸಹಕಾರ ಬ್ಯಾಂಕ್‌ನ ಇಡೀ 5 ಕೋಟಿ ಹಣವನ್ನು ನುಂಗಿ ನೀರು ಕುಡಿದಿದ್ದಾರೆ ಆಡಳಿ ಮಂಡಳಿಯವರು. ಬೀದಿಗೆ ಬಿದ್ದಿರುವ ಠೇವಣಿದಾರರ ಆರ್ತನಾದ ಸರ್ಕಾರಕ್ಕೂ ಕೇಳಿಸುತ್ತಿಲ್ಲ

ಗುಲಬರ್ಗಾ ಪಟ್ಟಣ ಸಹಕಾರ ಬ್ಯಾಂಕ್ 1932 ರಲ್ಲಿ ಅಣ್ಣಾರಾವ್ ಗಣಮುಖಿ ಸ್ವತಂತ್ರ ಹೋರಾಟಗಾರರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿತ್ತು. 70 ವರ್ಷ ಇತಿಹಾಸವುಳ್ಳ ಈ ಬ್ಯಾಂಕ್, ಗುಲಬರ್ಗಾ ನಗರದ ಸಣ್ಣ ಸಣ್ಣ ವ್ಯಾಪಾರಸ್ಥರಿಗೆ ಬ್ಯಾಂಕ್ ಸ್ಥಾಪಿಸಲ್ಪಟ್ಟಿತು. ಸುಮಾರು ನಾಲ್ಕು ಸಾವಿರ ಜನ ಸದಸ್ಯರು, ಸಾವಿರಾರು ಜನ ನಿವೃತ್ತ ನೌಕರದಾರರು, ಮಾಜಿ, ಎಂ.ಎಸ್.ಕೆ.ಎಂ.ಎಲ್, ವಿ.ಆರ್.ಎಸ್ ಪಡೆದ ಕಾರ್ಮಿಕರು ಠೇವಣಿದಾರರು, ಈ ಮೂಲಕ ಠೇವಣಿಯಾಗಿ 5.16 ಕೋಟಿ ಹಣ ಗುಲಬರ್ಗಾ ನಗರದ ಮಧ್ಯಮ ವರ್ಗದ ಜನವೂ ಸೇರಿ ಇಟ್ಟಿದ್ದಾಗಿದೆ. 26.05 ಲಕ್ಷ ಷೇರು ಹಣ ಈ ಬ್ಯಾಂಕ್ ಹೊಂದಿದೆ.

ಪಂಗನಾಮ ಹಾಕಿದ ಅಧ್ಯಕ್ಷ

ಈ ರೀತಿ ಬಡ ಮತ್ತು ಮಧ್ಯಮ ವರ್ಗದ ಜನರಿಂದ ಠೇವಣಿ ಇಡಲ್ಪಟ್ಟ ಹಣವನ್ನು ಬ್ಯಾಂಕಿನ ಅಧ್ಯಕ್ಷರಾದ ಸುಧೀರ ಪಾಟೀಲ್ ರಾಯಕೋಡ ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರು ತಲಾ ಹತ್ತು, ಇಪ್ಪತ್ತು ಲಕ್ಷ ಸಾಲ ಎತ್ತಿ ಕೋಟ್ಯಾಂತರ ರೂಪಾಯಿಗಳನ್ನು ನುಂಗಿ ಜೀರ್ಣಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಸಿಲ್ವರ್ ಪ್ಲೇಟ್ ಮತ್ತು ಕೃಷ್ಣಾ ರೆಸ್ಟೋರೆಂಟ್ ನಡೆಸುವ ಸತೀಶ್ ಖನ್ನಾಗೆ 1.2 ಕೋಟಿ ಸಾಲ ನೀಡಿದರು. ಕಾರ್ತಿಕ ಎಲೆಕ್ಟ್ರಾನಿಕ್ಸ್ 58 ಲಕ್ಷ ಹಾಗೂ ಸತೀಶ ಗುತ್ತಿಗೆದಾರ 5 ಲಕ್ಷ, ಠಾಕೋರ ಫ್ಯಾಬ್ರಿಕೇಶನ್ ಭಿಮಲಾಲ ಎನ್ನುವವನಿಗೆ 1 ಕೋಟಿ ರೂ.ಗಳು ಹೀಗೆ ಮನಬಂದಂತೆ ಸಾಲ ಕೊಟ್ಟಿದ್ದಾರೆ. ತಮ್ಮ ಇತಿಮಿತಿ ಮೀರಿ ಸಾಲ ಮಂಜೂರು ಮಾಡುವ ಮೂಲಕ ಬ್ಯಾಂಕಿನ ನಿರ್ದೇಶನಗಳನ್ನು ಗಾಳಿಗೆ ತೂರಿ ಸಾಲಗಳನ್ನು ಬೇನಾಮಿ ಹೆಸರಿನಲ್ಲಿಯೂ ಮಂಜೂರು ಮಾಡಿಕೊಂಡು ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಮತ್ತು ಅಧ್ಯಕ್ಷರು ಜನಸಾಮಾನ್ಯರ ಹಣವನ್ನು ಎತ್ತಿಹಾಕಿದ್ದಾರೆ, ಪಂಗನಾಮ ಇಟ್ಟಿದ್ದಾರೆ.

ಠೇವಣಿದಾರರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಬಡ್ಡಿ ಕೇವಲ ಶೆ.6 ಇದ್ದು, ಪಟ್ಟಣಸಹಕಾರ ಬ್ಯಾಂಕಿನಲ್ಲಿ ಬಡ್ಡಿ 14.5 ಶೇ.ಇದ್ದುದರಿಂದ ಹೆಚ್ಚಿನ ಕಾರ್ಮಿಕರು, ನೌಕರದಾರರು ಹಣವನ್ನು ಬ್ಯಾಂಕಿನಲ್ಲಿ ತೊಡಗಿಸಿದ್ದಾರೆ. ಜಿಲ್ಲೆಯ ಸಚಿವರುಗಳ ಹುಟ್ಟು ಹಬ್ಬಗಳ ಸಂದರ್ಭಗಳಲ್ಲಿ ಶುಭಾಶಯಗಳನ್ನು ನೀಡಿ ಜಿಲ್ಲೆಯ ಮಂತ್ರಿಗಳ ಉತ್ತಮ ಬಾಂಧವ್ಯ ಹೊಂದಿದ ಕಾಂಗ್ರೆಸ್(ಐ) ಮುಖಂಡನೆಂದು ಪ್ರತೀತಿ ಹೊಂದಿದ ಅಧ್ಯಕ್ಷ ಸುಧೀರ ಪಾಟೀಲ್ ರಾಯಕೋಡ ಬ್ಯಾಂಕನ್ನು ಮುಳುಗಿಸಿದ್ದಾನೆ. ಕಳೆದ ಒಂದೂವರೆ ವರ್ಷದಿಂದ ಮಾಸಿಕ ಸಭೆಯನ್ನು ನಡೆಸದೇ ದುರಾಡಳಿತದಿಂದ ಬ್ಯಾಂಕನ್ನು ಮುಳುಗಿಸಿದ್ದಾನೆ.

ಠೇವಣಿದಾರರಾದ ಎಂ.ಎಸ್.ಕೆ.ಮಿಲ್ ಕಾರ್ಮಿಕರು, ನಿವೃತ್ತ ನೌಕರದಾರರು, ಬ್ಯಾಂಕ್ ದಿವಾಳಿ ಎದ್ದಿದ್ದರಿಂದ ತೀವ್ರ ತೊಂದರೆಗೆ ಒಳಗಾಗಿದ್ದಾರೆ. ತೊಂದರೆಗೆ ಒಳಗಾದ ಠೇವಣಿದಾರರು ಬ್ಯಾಂಕಿನ ಪುನರುಜ್ಜೀವನಕ್ಕಾಗಿ ಕರ್ನಾಟಕ ಸರ್ಕಾರ ಮುಂದಾಗಬೇಕೆಂದು ಹಾಗೂ ಠೇವಣಿದಾರರ ಹಣ ಹಿಂದಿರುಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಠೇವಣಿದಾರರ ಹಿತರಕ್ಷಣಾ ಸಮಿತಿ, ಗೃಹ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಹಾಗೂ ಲೋಕೋಪಯೋಗಿ ಸಚಿವ ಧರಂಸಿಂಗ್‌ರವರಿಗೆ ಭೇಟಿಯಾಗಿ ವಿನಂತಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್, ಅರ್ಬನ್ ಬ್ಯಾಂಕಿನ ಜನರಲ್ ಮ್ಯಾನೇಜರ್‌ರವರನ್ನು ಭೇಟಿ ಮಾಡಿ ಅರ್ಬನ್ ಬ್ಯಾಂಕಿನ ಲೈಸೆನ್ಸ್ ಹಿಂತೆಗೆದುಕೊಳ್ಳಬಾರದು, ಠೇವಣಿದಾರರ ಹಿತರಕ್ಷಣೆಗೆ ಸಹಾಯ ಮಾಡಬೇಕೆಂದು ಒತ್ತಾಯಿಸಲಾಗಿದೆ.

ಸಹಕಾರ ಇಲಾಖೆ, ಹಿರಿಯ ಅಧಿಕಾರಿಗಳು ಸಾಲ ವಸೂಲಾತಿಗೆ ನೇಮಿಸಬೇಕೆಂದು ಠೇವಣಿದಾರರ ಹಿತರಕ್ಷಣಾ ಸಮಿತಿ ಒತ್ತಾಯಿಸಿದೆ. ದೊಡ್ಡ ದೊಡ್ಡ ಮೊತ್ತದ ಸಾಲ ಪಡೆದ ಸುಸ್ತಿ ಸಾಲದಾರರ ಮನೆ ಮುಂದೆ ಹಾಗೂ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ಮಂಡಳಿಯವರ ಮನೆ ಮುಂದೆ ಧರಣಿ ನಡೆಸಲು ನಿರ್ಧರಿಸಲಾಗಿದೆ ಎಂದು ಠೇವಣಿದಾರರ ಹಿತರಕ್ಷಣಾ ಸಮಿತಿ ನಿರ್ಧರಿಸಿದೆ.

ಬ್ಯಾಂಕನ್ನು ದಿವಾಳಿ ಎಬ್ಬಿಸಲು ಕಾರಣಿಭೂತರಾದ ಅಧ್ಯಕ್ಷ ಹಾಗೂ ಆಡಳಿತ ಮಂಡಳಿಯ ಸದಸ್ಯರ ಮೇಲೆ ಕ್ರಿಮಿನಲ್ ದಾವೆಯನ್ನು ಹೂಡಬೇಕೆಂದು ಕರ್ನಾಟಕ ಪ್ರಾಂತ ರೈತಸ ಸಂಘದ ರಾಜ್ಯ ಅದ್ಯಕ್ಷರಾದ ಮಾರುತಿ ಮಾನ್ಪಡೆ ಮಾನ್ಯ ಗೃಹ ಸಚಿವರನ್ನು ಆಗ್ರಹಿಸಿದ್ದಾರೆ

ಅರಣ್ಯದೊಳಗಿನ ಗಿರಿಜನರು ದ್ವಿತೀಯ ದರ್ಜೆ ಪ್ರಜೆಗಳೇ?

ನಾಗರಹೊಳೆ ಅಭಯಾರಣ್ಯ ಸೇರಿದಂತೆ ಹಲವಾರು ಅರಣ್ಯ ಪ್ರದೇಶದಲ್ಲಿ ಗಿರಿಜನರು ತಲ ತಲಾಂತರದಿಂದ ವಾಸಿಸುತ್ತಿದ್ದಾರೆ. ಈ ಗಿರಿಜನರನ್ನು ಇಲ್ಲಿಂದ ಸ್ಥಳಾಂತರ ಮಾಡಲು ಹುನ್ನಾರಗಳು ನಡೆಯುತ್ತಿವೆ.

ಈ ಮಧ್ಯೆ ಚುನಾವಣಾ ಆಯೋಗವು ಈಗ ತಯಾರಿಸುತ್ತಿರುವ ಮತದಾರರ ಪಟ್ಟಿಯ ಪರಿಷ್ಕರಣೆಗೆ ಅರಣ್ಯ ಇಲಾಖೆ ತಡೆ ಒಡ್ಡುತ್ತಿದೆ ಎಂಬ ವರದಿಗಳು ಬರತೊಡಗಿದ್ದು, ಈ ಕ್ಷೇತ್ರದ ಪ್ರತಿನಿಧಿ ಹಾಗೂ ಸಚಿವೆ ಸುಮಾ ವಸಂತ ಸ್ವತಃ ಈ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪುಕಾರು ಮಾಡಿದ್ದಾರೆ.

ನಾಗರಹೊಳೆ ಅಭಯಾರಣ್ಯದಿಂದ ಹೇಗಾದರೂ ಮಾಡಿ ಗಿರಿಜನರನ್ನು ಸ್ಥಳಾಂತರಿಸ ಬೇಕು ಎಂಬುದು ಅರಣ್ಯ ಇಲಾಖೆಯ ಯೋಜನೆ. ಈಗಾಗಲೇ ಸಾಕಷ್ಟು ಗಿರಿಜನರನ್ನು ಇಲ್ಲಿಂದ ಸ್ಥಳಾಂತರ ಮಾಡಿ ವೀರಹೊಸಳ್ಳಿ ಪ್ರದೇಶಕ್ಕೆ ಕರೆದು ಕೊಂಡು ಹೋಗಲಾಗಿದೆ. ಅಲ್ಲಿಗೆ ಸ್ಥಳಾಂತರಿಸಲ್ಪಟ್ಟ ಗಿರಿಜನರು ಅಲ್ಲಿ ಸರಿಯಾದ ಮೂಲಭೂತ ಸೌಕರ್ಯ ದೊರೆಯದೆ ಈಗ ಮತ್ತೆ ಮರಳಿ ನಾಗರ ಹೊಳೆ ಪ್ರದೇಶಕ್ಕೆ ಬಂದು ವಾಸಿಸಲು ತೊಡಗಿದ್ದಾರೆ.

ಈಗ ಅಂದರೆ 2002ನೇ ಇಸವಿಗೆ ನಾಗರಹೊಳೆ ಯಲ್ಲಿ ಮತದಾರರ ಸಂಖ್ಯೆ ಕೇವಲ 169 ಇತ್ತು. ಆ ಪ್ರದೇಶದ ಅರಣ್ಯದಲ್ಲಿ ಅಂದರೆ ಬಾಳೆಕೋವ ಪ್ರದೇಶದಲ್ಲಿ 645, ಲಕ್ಕಳದಲ್ಲಿ 133 ಹಾಗೂ ಮೂರ್ಕಲ್ ಪ್ರದೇಶದಲ್ಲಿ 148 ಮತದಾರರು ಇದ್ದರು. ಆದರೆ ಇಲ್ಲಿ ಆ ಸಂದರ್ಭದಲ್ಲಿ ಕೂಡ ಮತದಾರರ ಸಂಖ್ಯೆ ಸರಕಾರಿ ದಾಖಲೆಗೆ ದುಪ್ಪಟ್ಟು ಇತ್ತು. ಅದರೆ ಆ ಮತದಾರರೆಲ್ಲರೂ ತಮ್ಮ ಹೆಸರುಗಳು ಬಿಟ್ಟು ಹೋಗಿ ಮತದಾನದಿಂದ ವಂಚಿತರಾಗಿದ್ದರು.

ಈಗ ಮತ್ತೆ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಗೊಳ್ಳುವ ಈ ಅವಕಾಶವನ್ನು ಬಳಸಿಕೊಳ್ಳಲು ಅರಣ್ಯ ಇಲಾಖೆ ತಡೆಯೊಡ್ಡುತ್ತಿದೆ. ಅರಣ್ಯ ಇಲಾಖೆ ಯಾವುದೆಲ್ಲ ರೀತಿಯನ್ನು ಬಳಸಿ ಅಲ್ಲಿನ ಗಿರಿಜನರಿಗೆ ಕಿರುಕುಳ ನೀಡಲು ಸಾಧ್ಯವೋ, ಅವುಗಳೆಲ್ಲವನ್ನು ನೀಡಿ ಅಲ್ಲಿನ ಗಿರಿಜನರನ್ನು ಸ್ಥಳಾಂತರಿಸಲು ಪ್ರಯತ್ನಿಸುತ್ತಿದೆ. ಆದರೆ ಮತದಾರರ ಪಟ್ಟಿಯ ಪರಿಷ್ಕರಣೆಗೆ ಅಡಚಣೆ ಉಂಟುಮಾಡುವುದು ಜನ ಪ್ರತಿನಿಧಿ ಕಾಯ್ದೆಯ ಸೆಕ್ಷನ್ 130 ಹಾಗೂ 130 ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು ಈ ರೀತಿ ಅರಣ್ಯ ಇಲಾಖೆ ಪರಿಷ್ಕರಣೆಗೆ ಅಡ್ಡಿ ಮಾಡುವಂತಿಲ್ಲ. ಇಲ್ಲಿನ ಗಿರಿಜನರ ಪ್ರಕಾರ ಅರಣ್ಯ ಇಲಾಖೆ ಈ ರೀತಿ ತಮಗೆ ಕಿರುಕುಳ ನೀಡಿ ತಮ್ಮ ಮತದಾರರ ಹಕ್ಕನ್ನು ಕಸಿದುಕೊಳ್ಳುವ ಮೂಲಕ ತಮ್ಮನ್ನು ಈ ದೇಶದ ದ್ವಿತೀಯ ದರ್ಜೆಯ ಪ್ರಜೆಗಳನ್ನಾಗಿಸಲು ಹೊರಟಿದೆ. ಅರಣ್ಯ ಇಲಾಖೆಯ ಈ ರೀತಿ ಕುತಂತ್ರವನ್ನು ತಡೆಗಟ್ಟುವುದು ಈಗ ಜನ ಪ್ರತಿನಿಧಿಗಳ ಕೆಲಸವಾಗಿದೆ.

(ಕೊಡಗು ಸಮಾಚಾರ)

ನಿಷೇದಾಜ್ಞೆಯ ಗೆಳೆಯರು

ಕಾವೇರಿ ನೀರಿನ ವಿವಾದದಲ್ಲಿ ತೆಗೆದುಕೊಂಡ ಅವರ ನಿಲುವಿನ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ನಮ್ಮ ಪತ್ರಿಕೆಯ ಬಗ್ಗೆ ಕೆರಳಿ ಜಗಳಕ್ಕೆ ಇಳಿದಿದ್ದಾರೆ ಸಿಪಿಐ ಗೆಳೆಯರು. ರಾಜಕೀಯ ಪಕ್ಷವೊಂದರ ನಿಲುವನ್ನು ವಿಮರ್ಶಿಸಲು ನಮಗೆ ಹಕ್ಕೇ ಇಲ್ಲವೆಂದು ನಿಷೇದಾಜ್ಞೆ ಹೇರುವ ಈ ಗೆಳೆಯರಲ್ಲಿ ಯಾಕಿಷ್ಟು ವ್ಯಾಕುಲತೆ?!

ಚರ್ಚೆ, ವಾದ-ಸಂವಾದಗಳಿಂದ ಏನಾದರೂ ಹೊಸತು ಹುಟ್ಟಬಹುದು. ಜಗಳಕಾಯುವುದರಿಂದ ಏನಾದರೂ ದೊರೆತೀತೆ? ಅಲ್ಲಿ ಬೆಳಕಿರಲಿ ಬೂದಿಯೂ ಸಿಗಲಾರದು. ಸಿಪಿಐನ ರಾಜ್ಯ ಕಾರ್ಯದರ್ಶಿಯವರ ಬರಹ ಕೆಂಬಾವುಟದಲ್ಲಿ ಓದಿದ ನಂತರ ಹೀಗೆ ಅನ್ನಿಸಿದ್ದು ಸಹಜ.

ಕಾವೇರಿ ನದಿವಿವಾದವನ್ನು ಕೇಂದ್ರವಾಗಿರಿಸಿ ಮುಖ್ಯಮಂತ್ರಿ ಕೃಷ್ಣರವರು ದಿಢೀರನೇ ಆರಂಭಿಸಿದ ಪಾದಯಾತ್ರೆಯ ರಾಜಕಾರಣವನ್ನು ತೆರೆದಿಟ್ಟ ನಮ್ಮ "ಕೃಷ್ಣನ ಕಸರತ್ತು ಕುರ್ಚಿಯದ್ದೇ ಮಸಲತ್ತು" ಲೇಖನದ ಒಂದು ಪ್ಯಾರದಲ್ಲಿನ ಕೆಲ ಅಭಿಪ್ರಾಯಗಳ ಬಗ್ಗೆ ತುಂಬಾ ಮನಸ್ಸಿಗೆ ಹಚ್ಚಿಕೊಂಡುಬಿಟ್ಟಿದ್ದಾರೆ ನಮ್ಮ ಸಿಪಿಐನ ಗೆಳೆಯರು. ಆ ವ್ಯಾಕುಲತೆ ಎಷ್ಟಿದೆಯೆಂದರೆ ಕಮ್ಯುನಿಸ್ಟ್ ಅಥವಾ ಯಾವುದೇ ಪಕ್ಷವೊಂದು ಒಂದು ಸಂದರ್ಭದಲ್ಲಿ ತಾಳುವ ನಿಲುವು ಸರಿಯಲ್ಲವೆಂದು ಹೇಳುವ ನಮ್ಮ ಪ್ರಾಥಮಿಕ ಹಕ್ಕು ಮತ್ತು ಸಹಜ ಅಭಿಪ್ರಾಯ ಹೇಳಕೂಡದೆಂದು ನಿಷೇದಾಜ್ಞೆ ಜಾರಿ ಮಾಡಲು ಮುಂದಾಗಿದ್ದಾರೆ. ಅದೂ ಸಿಪಿಐನ ರಾಜ್ಯಕಾರ್ಯದರ್ಶಿ ಸಿದ್ದನಗೌಡ ಪಾಟೀಲರು. ನಾವು ಬರೆದಿದ್ದು ಒಂದು ಪ್ಯಾರ ಅಷ್ಟೇ. ಅದಕ್ಕೆ ಪ್ರತಿಕ್ರಿಯೆಯಾಗಿ ಶಬ್ದ ರೋಧನ ಹರಿದಿರುವುದು ಒಂದು ಪುಟ. ಅದೂ ನಮ್ಮ ಲೇಖನದ ಒಂದು ಪ್ಯಾರವನ್ನು ಸರಿಯಾಗಿ ಓದದೆ, ಗ್ರಹಿಸದ ಅವಸರ, ಮರುಮುದ್ರಣ ಮಾಡುವಾಗಲೂ ಪೂರ್ತಿಹಾಕದ ತರಾತುರಿ (ಪ್ರಜ್ಞಾಪೂರ್ವಕ ಇರಲಿಕ್ಕಿಲ್ಲವೆಂದೇ ಭಾವಿಸೋಣ) ಬಂಡಿ ತುಂಬುವಷ್ಟು ಅವರ ಬರಹ ಹಿಂಡಿದರೆ ಗಿಂಡಿ ಸಾರವೂ ಹೊರಡುವುದಿಲ್ಲ ಎಂಬುದು ಬೇರೆ ಸಂಗತಿ. ಬಳಸಿರುವ ಪದಪುಂಜಗಳೋ, ತಳೆದ ನಿಲುವುಗಳೋ ಅವರೇ ಕರೆದ ಸಿಪಿಐ(ಎಂ) ಬಗೆಗಿನ ಸಹೋದರ ಭಾವನೆಗಳು ಅಲ್ಲೆಲ್ಲಾ ಮಟಾಮಾಯ!

ಅವರ ಪ್ರತಿಕ್ರಿಯೆಯ ವಾದಸರಣಿಯಲ್ಲಿನ ಅನೇಕ ಅಂಶಗಳು, ನಾವು ಬರೆದವುಗಳೇನಲ್ಲ. ವಾದ ಸಮರ್ಥನೆಗೆ ಅವರೇ ಸೃಷ್ಟಿಸಿಕೊಂಡ ವ್ಯಾಧಿಗಳು (ಉದಾ: ಕಾವೇರಿ ರೈತರ ಹೋರಾಟ ಭೂಮಾಲೀಕರ ಹೋರಾಟವೆಂದು, ಬೂರ್ಜ್ವಾ ಪಕ್ಷಗಳು ಬೆಂಬಲಿಸಿದ ಕೂಡಲೇ ಬೂರ್ಜ್ವಾ ಎನ್ನುವುದು ಇತ್ಯಾದಿ).. ಯಾಕಿಷ್ಟುಗಲಿಬಿಲಿ. ಯಾಕಿಂಥ 'ತಪ್ಪಿತಸ್ಥ' ಭಾವನೆಯ ಕಾಟ ಈ ಸತ್ಯ ಹರಿಶ್ಚಂದ್ರರಿಗೆ?! ಅವರ ಲೇಖನದಲ್ಲಿನ ರಾಜಕೀಯ, ಸೈದ್ಧಾಂತಿಕ ಅಂಶಗಳ ಬಗ್ಗೆ ಸದ್ಯ ಹೇಳದಿರುವುದೇ ಒಳ್ಳೆಯದು.

ನಮ್ಮ ಅಭಿಪ್ರಾಯವಿರುವುದು ಇಷ್ಟೇ! ಒಂದು ನಿರ್ದಿಷ್ಟ ಹಂತದಲ್ಲಿ ಮುಖ್ಯಮಂತ್ರಿ ಕೃಷ್ಣರವರು, ಒಂದು ಹನಿ ನೀರನ್ನು ಬಿಡಲಾಗುವುದಿಲ್ಲವೆಂಬ ನಿರ್ಧಾರವನ್ನು ಸಚಿವ ಸಂಪುಟದ ಬಳಿಕ ಮತ್ತು ಸರ್ವಪಕ್ಷಗಳ ಸಭೆಯಲ್ಲಿಯೇ ಪ್ರಕಟಿಸಿದರು. (ಈ ಅಭಿಪ್ರಾಯವನ್ನು ನಾವು ಸತತವಾಗಿ ಆಕ್ಷೇಪಿಸಿ, ಸಂವಿಧಾನಾತ್ಮಕ ಸಂಸ್ಥೆಗಳ ಪಾತ್ರ, ದೀರ್ಘಾವಧಿ ಪರಿಣಾಮಗಳು, ಒಕ್ಕೂಟ ಸ್ವರೂಪ ಕಾಯುವ ಅಂಶ ಗಮನದಲ್ಲಿರಿಸಿ ಸಂಕಟದ ಸ್ಥಿತಿಯಲ್ಲಿ ರೈತರ ಹಿತ ಕಾಯುವ ಹಲವು ಪ್ರಾಯೋಗಿಕ ಮಾರ್ಗಗಳನ್ನು ಸೂಚಿಸಿದೆವು). ನೀರು ಬಿಡಲಾಗದೆಂಬ ನಿಲುವನ್ನು ಸರ್ವಪಕ್ಷಗಳ ಸಭೆಯಲ್ಲಿ ಕೆಲವು ಬಂಡವಾಳಶಾಹಿ ಪಕ್ಷಗಳು ನಾಯಕರು ಸ್ವಾಗತಿಸಿ, ನೀವು ಇತಿಹಾಸ ಪುರುಷರಾಗುತ್ತಿದ್ದೀರಿ ಇತ್ಯಾದಿ ಬಣ್ಣಿಸಿದರು. ಅದೇ ಸಭೆಯಲ್ಲಿ ಹಾಜರಿದ್ದ ಸಿಪಿಐನ ಪ್ರತಿನಿಧಿಗಳು ಏನೆಲ್ಲಾ ಮಾತನಾಡಿ ಸ್ವಾಗತಿಸಿದರು ಎಂದು ವರದಿಯನ್ನು ರಾಜ್ಯ ಕಾರ್ಯದರ್ಶಿಗಳು ಕೇಳಿಕೊಳ್ಳಲಿ. ಇಂತಹ ನಿಲುವನ್ನು ಅವರು ಸ್ವಾಗತಿಸಿದ್ದು ಆಕಸ್ಮಿಕವೇನಲ್ಲ. ಬದಲಾಗಿ ಸಿಪಿಐ ಪಕ್ಷ ಕಾವೇರಿ ನೀರಿನ ಈ ಹಂತದ ಸಮಸ್ಯೆ ಬಗ್ಗೆ ತಳೆದ ನಿಲುವನ್ನೇ ಆಧರಿಸಿತ್ತು ಎಂಬುದು ನಮ್ಮ ಅಭಿಪ್ರಾಯ. ಸಿಪಿಐನ ತಮಿಳುನಾಡು ಘಟಕ ಮತ್ತುಕೇಂದ್ರ ಸಮಿತಿ ತೆಗೆದುಕೊಂಡ ನಿಲುವುಗಳಿಗೆ ಕರ್ನಾಟಕ ಘಟಕದ ನಿಲುವು ಭಿನ್ನವಿದೆ ಎಂಬುದು ಈಗಲೂ ಸ್ಪಷ್ಟವಾದ ಅಭಿಪ್ರಾಯ ನಮ್ಮದು.

ನಮ್ಮ ಲೇಖನದುದ್ದಕ್ಕೂ ಕಮ್ಯುನಿಸ್ಟ್ ಪಕ್ಷದ ನಿಲುವಿನಲ್ಲಿ ಇಂತಹ ವ್ಯತ್ಯಾಸಗಳು ಆಗಬಾರದಿತ್ತು. ಊರಿಗೊಂದು-ಕೇರಿಗೊಂದು ನಿಲುವು ತಾಳುವುದು ಬಲಪಂಥೀಯರ ಸ್ವಭಾವ. ಅಂತಹ ನಿಲುವು ಸಿಪಿಐಯನ್ನು ಪ್ರಭಾವಿಸಬಾರದು ಎಂಬುದು ನಮ್ಮ ಕೋರಿಕೆಯಾಗಿತ್ತು. ಅವರ ನಿಲುವು ಏನಾಗಿದೆ ಎಂಬುದನ್ನು ಅವರೇ ಬರೆದ 6.10.2002 ರ ಕೆಂಬಾವುಟ ಲೇಖನ ಪುನಃ ಓದಿಕೊಳ್ಳಲಿ.

ಇಬ್ಬಗೆ ನಿಲುವು

'ಕರ್ನಾಟಕದಲ್ಲಿ ಬೆಳೆ ಇದೆ. ಮಳೆಯಿಲ್ಲದೇ ನೀರಿಲ್ಲ. ತಮಿಳುನಾಡಿಗೆ ನೀರ ು ಅಗತ್ಯವಿಲ್ಲ, ಆದ್ದರಿಂದನೀರು ಬಿಡಲಾಗದು' ಇದು ಒಟ್ಟಾರೆ ಧ್ವನಿ. ಹಾಗೆಯೇ 'ಒಂದು ಹನಿ ನೀರು ಬಿಡಲಾರೆವು ಎನ್ನಕೂಡದು ಆದರೆ ನೀರು ಬಿಡಬಾರದು" ಇದು ಅದರ ಸಾರಾಂಶ. ಇತಂಹ ಶಬ್ದ ಚಮತ್ಕಾರಕ್ಕೆ ಬರೆದವರೇ ಬೆನ್ನು ಚಪ್ಪರಿಸಿಕೊಳ್ಳಬಹುದು ಅಷ್ಟೆ.!

ಆದರೆ ತಮಿಳು ನಾಡು ಸಿಪಿಐ ಘಟಕವು ನೀರು ಬಿಡಬೇಕೆಂದು ಆಗ್ರಹಿಸಿತು. ಅಷ್ಟೇ ಅಲ್ಲ ಸಿಪಿಐನ ಹಿರಿಯ ನಾಯಕ, ಪ್ರಧಾನ ಕಾರ್ಯದರ್ಶಿಯವರಾದ ಕಾಮ್ರೇಡ್ ಬರ್ದನ್‌ರವರು ಸಹ ಕಾವೇರಿ ನದಿ ಪ್ರಾಧಿಕಾರದ ಮತ್ತು ಸುಪ್ರಿಂ ಕೋರ್ಟಿನ ಆದೇಶವನ್ನು ಕರ್ನಾಟಕ ಪಾಲಿಸಬೇಕೆಂದು ತಮಿಳುನಾಡಿನಲ್ಲಿ ಹೇಳಿಕೆ ನೀಡಿದ್ದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಮ್ಮ ಪ್ರಶ್ನೆ 'ಅಂತರ್‍ರಾಷ್ಟ್ರೀಯತೆ, ರಾಷ್ಟ್ರೀಯತೆ, ದುಡಿವ ವರ್ಗದ ಐಕ್ಯತೆ ಪ್ರತಿಪಾದಿಸುವ ಸಿಪಿಐ ಇಂತಹ ಭಿನ್ನ ನಿಲುವು ತಳೆದಿದ್ದು ಯಾಕೆ? ಕರ್ನಾಟಕದ ಸಂಕಷ್ಟವನ್ನೂ, 'ವಾಸ್ತವ ಸ್ಥಿತಿಯ' ನಿಲುವನ್ನು ಪಕ್ಷದ ತಮಿಳನಾಡು ಕೇಂದ್ರದ ಘಟಕಗಳಿಗೆ ರಾಜ್ಯದ ಸಿಪಿಐ ನಾಯಕರು ವಿವರಿಸಲಿಲ್ಲ ಯಾಕೆ? ವಿವರಿಸಿದ್ದರೂ ಆ ಘಟಕಗಳಿಗೆ ಕರ್ನಾಟಕದ ರೈತರ ಹಿತ ಅಷ್ಟು ಮುಖ್ಯವಾಗಲಿಲ್ಲವೇ? ಅಥವಾ ನೀರು ಬೇಕಾಗಿರದ ತಮಿಳುನಾಡು ರೈತರ ಹಿತವೇ ಮುಖ್ಯವಾಯಿತೇ? ತಮಿಳುನಾಡು ಮತ್ತು ಪಕ್ಷದಕೇಂದ್ರ ನಾಯಕತ್ವಗಳೇ ಕರ್ನಾಟಕ ಸಿಪಿಐನ ವಾದ ಸರಿಯಿಲ್ಲವೆಂದು ಘೋಷಿಸಿದಂತಲ್ಲವೇ?

ಒಂದೇ ನಿಲುವು

ಆದರೆ ಸಿಪಿಐ(ಎಂ) ನ ತಮಿಳುನಾಡು, ಕರ್ನಾಟಕ, ಕೇಂದ್ರ ಸಮಿತಿ ಘಟಕಗಳದ್ದು ಒಂದೇ ನಿಲುವು. ಮಾತ್ರವಲ್ಲ, ಕಾವೇರಿ ಚಳುವಳಿ ತೀವ್ರವಾಗಿದ್ದ ಮಂಡ್ಯ, ಮೈಸೂರಿನಂತಹ

8 ನೇ ಪುಟಕ್ಕೆ

ಮುಖಂಡನ ನಿಗೂಡ ಸಾವು, ಕಾರ್ಮಿಕರ ಪ್ರತಿಭಟನೆ, ಬಂಧನ

ಕೃಷ್ಣರಾಜಪುರದ ಬಳಿಯ ಭರೂಕ ಗ್ಯಾಸ್ ಕಾರ್ಖಾನೆಯಲ್ಲಿ ಕಾರ್ಮಿಕ ನಾಯಕ ನಾರಾಯಣರ ಸಾವು ಅತ್ಯಂತ ನಿಗೂಢ ಹಾಗೂ ಅನುಮಾನಾಸ್ಪದವಾಗಿದೆ. ಕಾರ್ಮಿಕರ ಬೇಡಿಕೆಗಳಿಗಾಗಿ ಆರಂಭಗೊಂಡಿದ್ದ ಹೋರಾಟದಿಂದ ಕುಪಿತರಾದ ಆಡಳಿತವರ್ಗ ನಾರಾಯಣರನ್ನು ನೋಡಿಕೊಳ್ಳುವುದಾಗಿ ಬೆದರಿಸಿದ್ದರು. ಅವರ ಸಾವು ಮಧ್ಯರಾತ್ರಿ ಸಂಭವಿಸಿದೆ. ಈ ಸಾವಿನ ಕುರಿತು ಆಳವಾಗಿ ತನಿಖೆ ನಡೆಸಿ ಕೊಲೆಗಾರರ ಮೇಲೆ ಕ್ರಮ ಜರುಗಿಸಲು ಕೇಳಿದವರನ್ನೇ ಜೈಲಿಗಟ್ಟಲಾಯಿತು. ಕಾರ್ಮಿಕವರ್ಗದ ಚಳುವಳಿ ದಮನ ಮಾಡಲು ಯತ್ನಿಸಿದರೂ ಹೋರಾಟ ನಿಂತಿಲ್ಲ. ಈ ಪ್ರಕರಣ ಹೇಗೆ ಸಂಭವಿಸಿತು ಎಂಬ ಬಗ್ಗೆ ವರದಿ ಇಲ್ಲಿದೆ.

ಕಾರ್ಖಾನೆಯೊಂದರ ಕಾರ್ಮಿಕ ಮುಖಂಡನ ನಿಗೂಡ ಸಾವು ಕೊಲೆಯೆಂದು ಆರೋಪಿಸಿ, ಆರೋಪಿಗಳನ್ನು ತಕ್ಷಣ ಬಂಧಿಸಿ ಈ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸುತ್ತಿದ್ದ ಉದ್ರಿಕ್ತ ಕಾರ್ಮಿಕರನ್ನು ಪೊಲೀಸರು ಬಂಧಿಸಿದ ಘಟನೆ ಬೆಂಗಳೂರಿನ ವೈಟ್ ಫೀಲ್ಡ್ ಪ್ರದೇಶದಲ್ಲಿ ನಡೆದಿದೆ.

ಇಲ್ಲಿನ ಭರೂಕ ಗ್ಯಾಸಸ್ ಕಂಪೆನಿಯ ಕಾರ್ಮಿಕ ಸಂಘದ ಉಪಾಧ್ಯಕ್ಷ ವಿ. ನಾರಾಯಣ ತನ್ನ ಕೆಲಸದ ಅವಧಿಯಲ್ಲಿ ಕಾರ್ಖಾನೆ ಆವರಣದಲ್ಲೆ ಸಾವನ್ನಪ್ಪಿದ ಘಟನೆಯಿಂದ ರೋಷಗೊಂಡ ಕಾರ್ಮಿಕರು, ಇದು ಕೊಲೆ ಪ್ರಕರಣವೆಂದು ಆರೋಪಿಸಿ ಪ್ರತಿಭಟನೆಗಿಳಿದರು. ನಾರಾಯಣರಿಗೆ ಈ ಮೊದಲೇ ಜೀವ ಬೆದರಿಕೆ ಹಾಕಿದ್ದ ಗುತ್ತಿಗೆದಾರರಿಬ್ಬರನ್ನು ಬಂಧಿಸುವಂತೆ ಒತ್ತಾಯಿಸಿದರು. ಉದ್ರಿಕ್ತ ಕಾರ್ಮಿಕರು ಶವವನ್ನು ಅಂತ್ಯಕ್ರಿಯೆಗೆ ಕೊಂಡೊಯ್ಯಲು ಪೊಲೀಸರಿಗೆ ಬಿಡಲಿಲ್ಲ. ಈ ಸಾವಿನ ಸುದ್ದಿ ಸುತ್ತಲಿನ ಪ್ರದೇಶಕ್ಕೆ ಕಾಡ್ಗಿಚ್ಚಿನಂತೆ ಹಬ್ಬಿ ಕಾರ್ಮಿಕರು ಕಳೇಬರದ ಬಳಿ ಬಂದು ಸೇರತೊಡಗಿದರು. ಆರೋಪಿಗಳನ್ನು ಬಂಧಿಸದೆ ಇರುವ ಪೊಲೀಸರ ವಿರುದ್ಧ ಘೋಷಣೆ ಕೂಗಿದರು. ಬೆಳಿಗ್ಗೆಯಿಂದ ರಾತ್ರಿ 8 ಗಂಟೆಯವರೆಗೂ ಉದ್ರಿಕ್ತರು ಮೃತದೇಹ ಎತ್ತಲು ಬಿಡಲಿಲ್ಲ. ಇದೊಂದು ಕೊಲೆ ಎಂದು ಪೊಲೀಸರು ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸುವವರೆಗೂ ತಾವು ಅಂತ್ಯಕ್ರಿಯೆಗೆ ಬಿಡುವುದಿಲ್ಲವೆಂದು ಪಟ್ಟುಹಿಡಿದರು. ಪೊಲೀಸರು ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸೇರಿದಂತೆ 70ಕ್ಕೂ ಅಧಿಕ ಕಾರ್ಮಿಕರನ್ನು ಬಂಧಿಸಿ ನಂತರ ಶವವನ್ನು ಅಂತ್ಯಕ್ರಿಯೆಗೆ ಕೊಂಡೊಯ್ದರು.

ಆಯುಕ್ತರ ಕಛೇರಿ ಎದುರು ಪ್ರತಿಭಟನೆ

ಪ್ರತಿಭಟನೆ ನಿರತರಾಗಿದ್ದ ಕಾರ್ಮಿಕರನ್ನು ಬಂಧಿಸಿದ ಪೊಲೀಸರ ಕ್ರಮವನ್ನು ಖಂಡಿಸಿ ನಗರದ ಪೊಲೀಸ್ ಆಯುಕ್ತರ ಕಛೇರಿ ಎದುರು 500ಕ್ಕೂ ಅಧಿಕ ಉದ್ರಿಕ್ತ ಕಾರ್ಮಿಕರು ಪ್ರತಿಭಟನೆ ನಡೆಸಿದರು. ನಾರಾಯಣನ ಸಾವಿನ ಬಗ್ಗೆ ತನಿಖೆ ನಡೆಸಬೇಕು, ಆರೋಪಿಗಳನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿದ ಕಾರ್ಮಿಕರು ಬಂಧಿತ ಕಾರ್ಮಿಕರನ್ನು ತಕ್ಷಣ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದರು. ಆಯುಕ್ತರ ಭರವಸೆ ನಂತರ ಕಾರ್ಮಿಕರ ಪ್ರತಿಭಟನೆಯನ್ನು ಹಿಂತೆಗೆದುಕೊಂಡರು.



ಘಟನೆಯ ಹಿನ್ನೆಲೆ

ವೈಟ್‌ಫೀಲ್ಡ್ ಪ್ರದೇಶದಲ್ಲಿರುವ ಭರೂಕ ಗ್ಯಾಸಸ್ ಕಂಪನಿಯಲ್ಲಿ 140ಕ್ಕೂ ಅಧಿಕ ಕಾರ್ಮಿಕರಿದ್ದು ಇವರಲ್ಲಿ 60 ಕಾರ್ಮಿಕರು ಮಾತ್ರ ಖಾಯಂ ಕೆಲಸಗಾರರು ಉಳಿದವರು ಗುತ್ತಿಗೆ ಕಾರ್ಮಿಕರು. ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಬೇಕಂದು ಸಿಐಟಿಯು ಸಂಯೋಜಿತ ಭರೂಕ ಗ್ಯಾಸ್ ಎಂಪ್ಲಾಯಿಸ್ ಯೂನಿಯನ್ ಕಳೆದ 2 ವರ್ಷಗಳಿಂದಲೂ ಒತ್ತಾಯಿಸುತ್ತಿದೆ. ಕಾರ್ಮಿಕ ಆಯುಕ್ತರ ಬಳಿ ಈ ವಿವಾದವನ್ನು ಕೊಂಡಯ್ಯಲಾಗಿದೆ. 80 ಜನ ಗುತ್ತಿಗೆ ಕಾರ್ಮಿಕರನ್ನು ಒದಗಿಸುತ್ತಿದ್ದ ರಾಮಚಂದ್ರಶೆಟ್ಟಿಯೆಂಬ ಗುತ್ತಿಗೆದಾರ ಒಂದು ವೇಳೆ ಕಾರ್ಮಿಕರನ್ನು ಖಾಯಂ ಮಾಡಿದರೆ ತನ್ನ ಆದಾಯಕ್ಕೆ ದಕ್ಕೆ ಬರುವುದೆಂಬ ಆತಂಕದಿಂದ ನಾರಾಯಣ ಮನೆಯಲ್ಲಿ ಇಲ್ಲದ ಸಮಯದಲ್ಲಿ ಅವರ ಮನೆಗೆ ಹೋಗಿ ಅವರ ಹೆಂಡತಿಗೆ ಬೆದರಿಕೆ ಹಾಕಿದ್ದರು. ಈ ಬಗ್ಗೆ ಒಂದೂವರೆ ವರ್ಷಗಳ ಹಿಂದೆ ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಈ ಘಟನೆಯ ನಂತರ ಸಂಘದ ಒತ್ತಾಯದ ಮೇಲೆ ರಾಮಚಂದ್ರಶೆಟ್ಟಿಗೆ ನೀಡಿದ್ದ ಕಂಟ್ರಾಕ್ಟ್ ಪರವಾನಗಿಯನ್ನು ಕಾರ್ಮಿಕ ಇಲಾಖೆ ರದ್ದುಪಡಿಸಿತು. ಪರವಾನಗಿ ಇಲ್ಲದಿದ್ದರೂ ಕಾನೂನು ಬಾಹಿರವಾಗಿ ಕಾಂಟ್ರಾಕ್ಟ್ ಪದ್ಧತಿಯನ್ನು ಕಂಪನಿಯಲ್ಲಿ ಮುಂದುವರಿಸಿ ಕೊಂಡು ಹೋದರು. ಕಾರ್ಮಿಕರು ಶೋಷಣೆಯಿಂದ ಮುಕ್ತರಾಗಲಿಲ್ಲ. ಅತಿ ಕಡಿಮೆ ಕೂಲಿಗೆ ದುಡಿಸಿಕೊಳ್ಳತೊಡಗಿದರು.

ಕಾರ್ಮಿಕರ ಮುಷ್ಕರ

ಮಾಲೀಕರ ಈ ಧೋರಣೆಯನ್ನು ಖಂಡಿಸಿದ ಸಂಘವು ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿತು. ಇದರಿಂದ ಕುಪಿತರಾದ ಆಡಳಿತ ಮಂಡಳಿ ಸಂಘದ ಪ್ರಧಾನ ಕಾರ್ಯದರ್ಶಿ ರವೀಂದ್ರರಾಜು ಅವರನ್ನು ಅಮಾನತು ಗೊಳಿಸಿತು. ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು, ರವೀಂದ್ರ ರಾಜು ಅವರ ಅಮಾನತನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿ ಕಾರ್ಮಿಕರು 2002, ಜನವರಿ 11 ರಿಂದ ಅನಿರ್ಧಿಷ್ಟ ಮುಷ್ಕರ ಹೂಡಿದರು. ಮುಷ್ಕರ ಮುರಿಯಲು ಯತ್ನಿಸಿದ ಆಡಳಿತ ಮಂಡಳಿ ವಿ.ನಾರಾಯಣ ಸೇರಿದಂತೆ 10 ಕಾರ್ಮಿಕರ ಮೇಲೆ ಪೊಲೀಸರಿಗೆ ಸುಳ್ಳು ದೂರು ನೀಡಿ ಆ ಕಾರ್ಮಿಕರನ್ನೂ ಅಮಾನತ್ತಿನಲ್ಲಿಟ್ಟರು.

ಗುತ್ತಿಗೆದಾರ ರಾಮಚಂದ್ರಶೆಟ್ಟಿಯು ಮುಖಾಂತರ ಮುಷ್ಕರದ ಸಮಯದಲ್ಲಿ 100ಕ್ಕೂ ಹೆಚ್ಚು ಗೂಂಡಾಗಳನ್ನು ಕರೆತಂದು ಕೆಲಸ ಮಾಡಿಸತೊಡಗಿದರು. ಬಾಡಿಗೆ ಗೂಂಡಾಗಳಿಂದ ಮುಷ್ಕರ ನಿರತ ಕಾರ್ಮಿಕರನ್ನು ಬೆದರಿಸುವುದು, ಧರಣಿ ಕುಳಿತಿದ್ದ ಟೆಂಟಿನ ಮೇಲೆ ರಾತ್ರಿ ವೇಳೆ ಕಲ್ಲು ತೂರಾಟ ಹೀಗೆ ಹಲವು ರೀತಿಯಲ್ಲಿ ಮುಷ್ಕರ ಹತ್ತಿಕ್ಕಲು ಪ್ರಯತ್ನಿಸಿದರು. ಈ ಬಗ್ಗೆ ಪೊಲೀಸಿಗೆ ದೂರು ನೀಡಿದರೂ ಪೊಲೀಸರು ಕಾರ್ಮಿಕರ ರಕ್ಷಣೆಗೆ ಬರಲಿಲ್ಲ.

ಸರ್ಕಾರವು ಮುಷ್ಕರವನ್ನು ರದ್ದುಗೊಳಿಸಿದ ನಂತರ ಕಾರ್ಮಿಕರು ಕೆಲಸಕ್ಕೆ ಮರಳಿದರು. ರಾಮಚಂದ್ರಶೆಟ್ಟಿಯ ಬಾಡಿಗೆ ಗೂಂಡಾಗಳಿಂದ ಕಾರ್ಮಿಕರಿಗೆ ಕಿರುಕುಳ ಪ್ರಾರಂಭವಾಯಿತು. ಕೆ.ಆರ್.ಪುರಂ ಸಿಐಟಿಯು ಪ್ರದೇಶ ಸಮಿತಿ ನೇತೃತ್ವದಲ್ಲಿ ತೀವ್ರ ಪ್ರತಿಭಟನೆ ನಡೆಸಿದ ನಂತರ ಪೊಲೀಸರು ಈ ಗೂಂಡಾಗಳೆಲ್ಲರನ್ನೂ ಹೊರಗೆ ಹಾಕಿದರು. ಆದರೆ ಕ್ಯಾಪ್ ಸ್ಟೀಲ್ ಕಂಪೆನಿಯ ಮಾಜಿ ಕಾರ್ಮಿಕ ಕೆಂಪರಾಜ್ ಎಂಬುವನನ್ನು ಹೊರ ಹಾಕುವ ಬದಲಾಗಿ ಆತನಿಗೆ ಕ್ಯಾಂಟೀನ್ ಜವಾಬ್ದಾರಿ ಕೊಡಲಾಯಿತು. ಈತ ಕ್ಯಾಂಟೀನ್ ಕಾರ್ಮಿಕರಿಗೆ ಕಿರುಕುಳ ಮುಂದುವರಿಸಿದ. ಕಾರ್ಮಿಕ ಮುಖಂಡರ ವಿರುದ್ಧ ನಡೆಯುತ್ತಿದ್ದ ವಿಚಾರಣೆಗಳಲ್ಲಿ ಈತ ಮತ್ತು ರಾಮಚಂದ್ರಶೆಟ್ಟಿ ಆಡಳಿತ ಮಂಡಳಿ ಪರವಾದ ಸಾಕ್ಷಿಗಳಾಗಿದ್ದರು.

ನವೆಂಬರ್ 7 ರಂದು ವಿ.ನಾರಾಯಣ ಅವರ ವಿಚಾರಣೆ ಇತ್ತು ಆದರೆ, 6ರಂದು 2ನೇ ಪಾಳಿಯಲ್ಲಿ ಕೆಲಸಕ್ಕೆ ಹೋಗಿದ್ದ ವಿ. ನಾರಾಯಣ ಅವರು ಕಾರ್ಖಾನೆಯಲ್ಲೇ ಶವವಾದರು.

ನೀರಿನ ತೊಟ್ಟಿಯಲ್ಲಿ ಶವ

ಅವರು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ನಾರಾಯಣ ಅವರೇ ಲಾಗ್ ಬುಕ್‌ನಲ್ಲಿ ರಾತ್ರಿ 10 ಗಂಟೆಯವರೆಗೆ ಕಂಪ್ರಸೆರ್‌ಗಳ ರೀಡಿಂಗ್ ದಾಖಲು ಮಾಡಿದ್ದಾರೆ. ಅನಂತರ ಅವರು ಕಣ್ಮರೆಯಾಗಿದ್ದಾರೆ. ರಾತ್ರಿ ಪಾಳಿಗೆ ಬಂದವರು ಅವರು ಮನೆಗೆ ಹೋಗಿರಬಹುದೆಂದು ತಿಳಿದಿದ್ದರು. ಆದರೆ, ಬೆಳಿಗ್ಗೆ ನೋಡಿದಾಗ ನಾರಾಯಣ ಅವರ ದ್ವಿಚಕ್ರವಾಹನ ಕಂಪೆನಿಯ ಆವರಣದಲ್ಲಿರುವುದು ಗಮನಕ್ಕೆ ಬಂತು. ಮನೆಗೆ ಹೋಗಿ ವಿಚಾರಿಸಿದಾಗ ಅವರು ರಾತ್ರಿ ಮನೆಗೂ ಹೋಗದಿರುವುದು ತಿಳಿದು ಬಂದಿತ್ತು. ಅದಲ್ಲದೆ ಅವರು ಸಂಸ್ಥೆಯ ಆವರಣದಿಂದ ಹೊರ ಹೋಗುವ ಸಮಯವೂ ದಾಖಲಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಶೋಧಿಸಿದಾಗ ಸಂಸ್ಥೆ ಆವರಣದ ನೀರಿನ ತೊಟ್ಟಿಯಲ್ಲಿ ಶವ ಪತ್ತೆಯಾಯಿತು. ತೊಟ್ಟಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ನೀರೂ ಇರಲಿಲ್ಲ. ಈ ಘಟನೆಗೆ ಮುಂಚೆ 15 ದಿನಗಳಿಂದಲೂ 24 ಗಂಟೆಯೂ ಕೆಂಪರಾಜ್ ಕಾರ್ಖಾನೆಯಲ್ಲೇ ಇರುತ್ತಿದ್ದುದು ಅಂದು ರಾತ್ರಿಯೂ ತನ್ನ ಕೆಲಸದ ಅವಧಿ ಮುಗಿದರೂ ಕಾರ್ಖಾನೆಯಲ್ಲೇ ಇದ್ದು ಬೆಳಗಿನ ಜಾವ 4 ಗಂಟೆಗೆ ಕಾರ್ಖಾನೆಯಿಂದ ಹೋಗಿರುವುದು ಆತನ ಮೇಲೆ ಕಾರ್ಮಿಕರ ಅನುಮಾನವನ್ನು ಪುಷ್ಟೀಕರಿಸಿದೆ. ಹೀಗಾಗಿ ಇದು ಕೊಲೆ ಎಂದು ಕಾರ್ಮಿಕರು ಆರೋಪಿಸಿದ್ದಾರೆ. ಈ ಸಾವು ನಿಗೂಢವಾಗಿಯೇ ಉಳಿದಿದೆ.

- ಸಿ. ರಾಮಚಂದ್ರ, ಸಿದ್ದಯ್ಯ

ಕೈಗಾರಿಕಾ ಸಂರಕ್ಷಣೆಗಾಗಿ ಬೀಡಿ ಕಾರ್ಮಿಕರ ಚಳುವಳಿ

ಹಲವಾರು ವರ್ಷಗಳಿಂದ ಬೀಡಿ ಕಾರ್ಮಿಕರು ಹೋರಾಟ ನಡೆಸಿ ಪಡೆದಿರುವ ಕಾನೂನು ಸವಲತ್ತುಗಳನ್ನು ಕಸಿದುಕೊಳ್ಳುವ ಭಾರೀ ಪ್ರಯತ್ನಗಳು ನಡೆಯುತ್ತಿದೆ. ಕಾರ್ಮಿಕರಿಗೆ ನೀಡುತ್ತಿರುವ ಎಲ್ಲಾ ಕಾನೂನು ಸವಲತ್ತುಗಳನ್ನು ಕಸಿಯುವ ಮೂಲಕ, ನಿಗದಿತ ಮಜೂರಿಯನ್ನು ನೀಡದೆ ಅವರನ್ನು ಗುಲಾಮರನ್ನಾಗಿ ದುಡಿಸುವ ಹಳೇ ಪದ್ಧತಿಯನ್ನು ಜಾರಿಗೊಳಿಸಲು ಬೀಡಿ ಮಾಲಿಕರು ಯತ್ನಿಸುತ್ತಿದ್ದಾರೆ. ಕಾನೂನು ಸವಲತ್ತುಗಳನ್ನು ವಂಚಿಸುವ ಮಾಲಿಕರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿದ್ದ ಸರಕಾರವೇ ಇದಕ್ಕೆಲ್ಲಾ ಮೌನ ಸಮ್ಮತಿ ನೀಡುವಂತಿದೆ.

ಸರಕಾರದ ಕಾರ್ಮಿಕ ಇಲಾಖೆಯೇ ಇಂತಹ ಬೇಜವಾಬ್ದಾರಿತನ ತೋರಿದರೆ ಅಸಂಘಟಿತ ವಲಯದ ಈ ಬಡಪಾಯಿ ಬೀಡಿ ಕಾರ್ಮಿಕರನ್ನು ಕೇಳುವವರಾರು? ಲಾಗ್ ಪುಸ್ತಕದ ಕೆಲಸವನ್ನು ಕಡಿತಮಾಡಿ ಸವಲತ್ತುರಹಿತ ಬೀಡಿಯನ್ನು ವ್ಯಾಪಕವಾಗಿ ಕಟ್ಟಿಸಲು ಮಾಲಿಕರು ಯತ್ನಿಸುತ್ತಿದ್ದಾರೆ. ದುರಾದೃಷ್ಟಕರ ಮಜೂರರನ್ನು ಸುಲಿಗೆ ಮಾಡಲು ಅವಕಾಶ ಕಲ್ಪಿಸಿರುವ ಸಣ್ಣ ಉತ್ಪಾದಕ ತೆಂಗೆ ವಿನಾಯತಿ ನೀತಿಯನ್ನು ಹಿಂತೆಗೆಯಬೇಕಿದೆ.

ಬೀಡಿ ಕೈಗಾರಿಕೆಯು ಮುಚ್ಚಲ್ಪಡುವ ಭೀತಿಯನ್ನು ಹುಟ್ಟಿಸಿಕೊಂಡು ಕೇವಲ 45 ಅಥವಾ 46 ರೂಪಾಯಿ ಮಾತ್ರ ಮಜೂರಿ ಕೊಟ್ಟು, ಕಾನೂನು ಪ್ರಕಾರ ಕೊಡಬೇಕಾದ ರೂ-14.10 ಬೋನಸ್, ಪಿ.ಎಫ್ ಹಣ ಸೇರಿದಂತೆ ಸಾವಿರ ಬೀಡಿಗೆ ರೂ.20ರಿಂದ 23 ರೂ.ವರೆಗೆ ಮಜೂರರಿಗೆ ವಂಚಿಸುತ್ತಿದ್ದಾರೆ.

ವಾರದಲ್ಲಿ ಒಂದೆರಡು ದಿನದ ಕೆಲಸ ಮಾತ್ರ ಕೊಡುತ್ತಿರುವ ಮಾಲಿಕರು, ಸವಲತ್ತು ಕೇಳದಿದ್ದರೆ ಹೆಚ್ಚು ಕೆಲಸ ಕೊಡುವುದಾಗಿ ಹೇಳುತ್ತಾ ಕಾರ್ಮಿಕರನ್ನು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ.

ಮಾಲಿಕರ ವಿರುದ್ಧ ಉಗ್ರಕ್ರಮ ತೆಗೆದುಕೊಳ್ಳಬೇಕು. ಎಲ್ಲಾ ಕಾರ್ಮಿಕರಿಗೂ ಲಾಗ್ ಪುಸ್ತಕ, ವಾರದಲ್ಲಿ 6 ಕೆಲಸ, ಉತ್ತಮ ಎಲೆ ಒದಗಿಸಬೇಕು.

ಬಡ ಕಾರ್ಮಿಕರ ಮೇಲೆ ಪ್ರಾಮಾಣಿಕವಾದ ಕಾಳಜಿಯಿರುವ ಸರಕಾರವಿದೆಯೆಂದಾದರೆ ಬೀಡಿ ಕೈಗಾರಿಕೆಯನ್ನು ಉತ್ತಮ ಸ್ಥಿತಿಗೆ ತರಲು ಮೇಲಿನ ಕ್ರಮ ಜಾರಿಗೆ ಪ್ರಯತ್ನಿಸಬೇಕು. ಸರಕಾರ ಹಾಗೂ ಮಾಲಿಕರ ಮೇಲೆ ಒತ್ತಾಯ ತರುವುದಕ್ಕಾಗಿ ದ.ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಸಂಘಟನೆಯು ದೃಢ ನಿರ್ಧಾರ ಕೈಗೊಂಡಿದೆ.

ಬೀಡಿ ಉದ್ಯಮ ಉಳಿಸಲು ಕಾರ್ಮಿಕರು ಆಂದೋಲನ ಸಾರಿದ್ದಾರೆ ದ.ಕನ್ನಡದಲ್ಲಿ

ಕೈಗಾರಿಕೆಗಳನ್ನು ಎಲ್ಲೆಲ್ಲಿಗೋ ಸ್ಥಳಾಂತರಿಸುತ್ತಾ ಸವಲತ್ತು ರಹಿತ ಬೀಡಿಗಳನ್ನು ತಯಾರಿಸುವ ನೀಚ ಕೆಲಸಕ್ಕೆ ಮಾಲಿಕರು ಇಳಿದಿರುವುದು ಶೋಚನೀಯವಾಗಿದೆ.

ಜಿಲ್ಲೆಯ 4 ಲಕ್ಷ ಬೀಡಿ ಕಾರ್ಮಿಕರ ಕುಟುಂಬದ ಆಧಾರವಾಗಿರುವ ಈ ಕೈಗಾರಿಕೆಯನ್ನು ವ್ಯವಸ್ಥಿತಗೊಳಿಸುವ ಮಹತ್ವದ ಜವಾಬ್ದಾರಿಯನ್ನು ಸರಕಾರ ವಹಿಸಬೇಕಾಗಿದೆ. ನಕಲಿ ಬೀಡಿಯ ಹಾವಳಿ ನಿಲ್ಲಿಸಬೇಕು. ಎಲ್ಲಾ ಬೀಡಿಯ ಮೇಲೆ ಸಮಾನ ತೆರಿಗೆ ಹಾಕಬೇಕು. ಧೂಮಪಾನ ನಿಷೇಧ ಮಸೂದೆಯನ್ನು ಹಿಂದೆಗೆಯಬೇಕು. ಕಾನೂನು ಸವಲತ್ತು ಕೊಡದಿರುವ

ಈ ಸಂಬಂಧವಾಗಿ ಜನಜಾಗೃತಿಗೊಳಿಸಲು ಸಿಐಟಿಯು ನೇತೃತ್ವದಲ್ಲಿರುವ ಬೀಡಿ ಕಾರ್ಮಿಕ ಸಂಘಗಳು ಕಾಲ್ನಡೆ ಜಾಥಾ, ಪ್ರಚಾರ ಸಭೆ ನಡೆಸಲಾಗಿದೆ.

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಮುಖಂಡರುಗಳ ನೇತೃತ್ವದಲ್ಲಿ ನವೆಂಬರ್ 20,21,22 ರಂದು ಉಳ್ಳಾಲ, ಸೋಮೇಶ್ವರ, ತಲಪಾಡಿ, ಪೆರ್ಮನ್ನೂರು, ಮುನ್ನೂರು, ಅಂಬ್ಲಮೊಗರು, ಕೊಣಾಜೆ, ಬೆಳ್ಮ ಪಾವೂರು ಹರೇಕಳ, ಬೋಳ್ಯಾರ್, ಕಿನ್ಯಾ, ಮಂಜನಾಡಿ, ಕೋಟೆಕಾರ್ ಗ್ರಾಮಗಳಲ್ಲಿ ಕಾಲ್ನಡೆ ಜಾಥಾವನ್ನು ಸಂಘಟಿಸಲಾಗಿತ್ತು.

ಈ ಜಾಥಾದ ಸಮಾರೋಪ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಪಿಐಎಂ ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರವರು ಸರಕಾರದ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ನೀತಿಯಿಂದಾಗಿ ಕೈಗಾರಿಕೆಗಳು ಮುಚ್ಚಲ್ಪಟ್ಟು ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗುತ್ತಿರುವುದು ಮಾತ್ರವಲ್ಲದೆ ರೈತರು ಕೂಡಾ ಆತ್ಮಹತ್ಯೆ ಮಾಡುವಂತಹ ಭೀಕರ ಪರಿಸ್ಥಿತಿ ಈ ದೇಶದಲ್ಲಿ ಉಂಟಾಗಿದೆಯೆಂದು ಹೇಳಿದರು.

ಸಂಘದ ಮುಂದಾಳುಗಳಾದ ಕೆ.ಈಶ್ವರ, ಕಾಂತಪ್ಪ ಪೂಜಾರಿ, ಕರಿಯಪ್ಪ ಗಟ್ಟಿ, ಗಂಗಾಧರಗಟ್ಟಿ, ಕೆ.ಸುಂದರ, ಮೀನಾಕ್ಷಿ ಕುತ್ತಾರ್, ಜಯಂತ ನ್ಯಾಕ್, ಉಳ್ಳಾಲ ನಗರ ಪಂಚಾಯತ್ ಕೌನ್ಸಿಲರ್, ಟಿ.ವಿಠಲ ಶ್ರಿಯಾನ್, ಹರೇಕಳ ಗ್ರಾಮಪಂಚಾಯತ್ ಸದಸ್ಯ ಕೆ. ಎಚ್.ಹಮೀದ್, ಬಿ.ರಾಮಚಂದ್ರ ವಕೀಲರು ವೇದಿಕೆಯಲ್ಲಿದ್ದರು. ಸಂಘದ ಅಧ್ಯಕ್ಷೆ ಪದ್ಮಾವತಿ ಎಸ್.ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದು ಬಾಬುಪಿಲಾರ್‌ರವರು ಸ್ವಾಗತಿಸಿ, ಕಾರ್ಯದರ್ಶಿ ಕೆ.ಮಂಜಪ್ಪರವರು ಧನ್ಯವಾದವಿತ್ತರು.

ಬೇಕಿದೆ ನಿಜ ಪರ್ಯಾಯ

ಕೇಂದ್ರದ ಬಿಜೆಪಿ ಕೂಟದ ಬಗ್ಗೆ ಜನರು ಭ್ರಮನಿರಸನಗೊಂಡಿದ್ದಾರೆ. ಇದಕ್ಕೆ ಪರ್ಯಾಯ ಬೇಕಿದೆ. ನಿಜಕ್ಕೂ ಭೂಮಾಲೀಕ-ಬಂಡವಾಳಗಾರರ ಪಕ್ಷಗಳ ಹಿಡಿತ ತಪ್ಪಿಸುವ ಮೂರನೇಯ ಪರ್ಯಾಯ ಇಂದು ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಮುಂದಿರುವ ಸವಾಲು ಎನ್ನುತ್ತಾರೆ ಕಾಮ್ರೇಡ್ ಸುರ್ಜಿತ್

ಎಡಪ್ರಜಾಸತ್ತಾತ್ಮಕ ಶಕ್ತಿಗಳು ದೇಶದಲ್ಲಿಂದು ಗಂಭೀರ ಸ್ಥಿತಿಯನ್ನು ಎದುರಿಸುತ್ತಿವೆ. ಅವು ಕೋಮುವಾದದ ವಿರುದ್ಧ ಹೋರಾಡುವಾಗಲೇ, ದೇಶದ ಭವಿಷ್ಯದ ಬಗ್ಗೆಯೂ ಎಚ್ಚರಿಕೆ ವಹಿಸಬೇಕಾಗಿದೆ. ಇವು ಬಿಜೆಪಿ ನೇತೃತ್ವದ ಸರ್ಕಾರದಿಂದ ಭ್ರಮನಿರಸನಗೊಂಡಿರುವ ಜನರನ್ನು ಅಣಿನೆರೆಸುವಾಗಲೇ ಬಂಡವಾಳಶಾಹಿ ಭೂಮಾಲಿಕ ಪಕ್ಷಗಳ ಹಿಡಿತದಿಂದ ಮುಕ್ತಿಗೊಳಿಸುವುದು ಹೇಗೆ ಎಂಬುದರ ಬಗ್ಗೆ ಕೂಡ ಯೋಚಿಸಬೇಕು. ಇದರಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ವಿಫಲವಾದಲ್ಲಿ ಎರಡು ಬಂಡವಾಳಶಾಹಿ ಭೂಮಾಲಿಕ ಪಕ್ಷಗಳೇ ದೇಶವನ್ನು ಭವಿಷ್ಯದಲ್ಲಿ ಆಳುತ್ತವೆ.

ಸಮಸ್ಯೆಯ ಗಂಭೀರತೆ:

ಬಿಜೆಪಿ ಆಡಳಿತದಲ್ಲಿ ಜನರಿಗೆ ಉಂಟಾಗುತ್ತಿರುವ ಅಸಂತೃಪ್ತಿಯು ಸಮಸ್ಯೆಯ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿವೆ. ಒಂದು ಕಾಲದಲ್ಲಿ ಕಾಂಗ್ರೆಸ್‌ಗೆ ಅಧಿಕಾರದಲ್ಲಿ ಏಕಸ್ವಾಮ್ಯವಿತ್ತು. ಆದರೆ ಅದರ ಜನವಿರೋದಿ ನೀತಿಗಳಿಂದಾಗಿ ಅದು ಈಗ ಲೋಕಸಭೆಯಲ್ಲಿ ತನ್ನ ಇತಿಹಾಸದಲ್ಲೇ ಅತೀ ಕಡಿಮೆ ಸ್ಥಾನಗಳಿಗೆ ದೂಡಲ್ಪಟ್ಟಿದೆ. ಆದರೆ ಈ ಸ್ಥಾನವನ್ನು ದುರದೃಷ್ಟವಶಾತ್ ಎಡಪಕ್ಷಗಳಿಗೆ ತುಂಬಲು ಸಾಧ್ಯವಾಗಲಿಲ್ಲ. ಇದನ್ನು ಬಿಜೆಪಿ ಬಳಸಿಕೊಂಡು ಅಧಿಕಾರಕ್ಕೆ ಬಂದಿದೆ.

ಅಪಾಯ

ಆದರೆ ಕಳೆದ ನಾಲ್ಕು ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿಯ ಭರವಸೆಗಳೆಷ್ಟು ಸುಳ್ಳು ಎಂದು ಜನರಿಗೆ ಅರ್ಥವಾಗಿದೆ. ಈಗಾಗಲೇ ಹಲವಾರು ಬಾರಿ ವಿವರಿಸುವಂತೆ ದೇಶದ ಆರ್ಥಿಕತೆಯನ್ನು ಪಾತಾಳಕ್ಕೆ ನೂಕಲಾಗಿದೆ. ನಮ್ಮ ಹೆಮ್ಮೆಯ ವಿಷಯಗಳಾಗಿದ್ದ ವಿದೇಶಾಂಗ ನೀತಿಯನ್ನು ಕಳಚಿದಾಗ ಅಮೇರಿಕನ್ ಸಾಮ್ರಾಜ್ಯಶಾಹಿಯಾಗಿ ಸೇವಕನಂತೆ ವರ್ತಿಸಲಾಗುತ್ತಿದೆ. ಮುಸಲ್ಮಾನರ ಬಗ್ಗೆ ಮಾತನಾಡುವುದರಲ್ಲಿ, ಅತ್ಯಂತ ವಿನಮ್ರರಾದ ಕ್ರಿಶ್ಚಿಯನ್ ಸಮುದಾಯವನ್ನು ಕೂಡ ಅವರು ಬಿಟ್ಟಿಲ್ಲ. ಶಿಕ್ಷಣವನ್ನು ಕೋಮುವಾದೀಕರಿಸಲಾಗುತ್ತಿದೆ. ಆರ್.ಎಸ್.ಎಸ್- ಬಿಜೆಪಿ ಮುಖಂಡರ ಆಶೀರ್ವಾದದೊಂದಿಗೆ ತೊಗಾಡಿಯ ಮೋದಿಗಳು ಕೋಮುವಿಷವನ್ನು ಹರಡುತ್ತಾ ದೇಶಾದ್ಯಂತ ಕೋಮುಗಲಭೆಯನ್ನು ಸೃಷ್ಟಿಸಲು ಸರ್ವರೀತಿಯ ಸಿದ್ದತೆ ನಡೆಸುತ್ತಿದೆ. ಇದು ನಮ್ಮ ದೇಶದ ಬಹುಮುಖ ಸಂಸ್ಕೃತಿ ಮತ್ತು ನಾಗರೀಕತೆಗೆ ಒಡ್ಡುತ್ತಿರುವ ನೇರ ಅಪಾಯವಾಗಿದೆ.

ಇತ್ತೀಚೆಗಿನ ಅನೇಕ ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿ ಗಂಭೀರ ಹಿನ್ನಡೆ ಕಂಡಿದೆ. 26ರಲ್ಲಿ 21 ರಾಜ್ಯದ ಚುನಾವಣೆಗಳಲ್ಲಿ ಸೋತಿರುವ ಬಿಜೆಪಿಗೆ ಗುಜರಾತಿನಲ್ಲೂ ನೆಲ ಅಲುಗಾಡುತ್ತಿದೆ, ಆದ್ದರಿಂದ ಗುಜರಾತನ್ನುಳಿಸಿಕೊಳ್ಳಲು ಸರ್ವರೀತಿಯ ಪ್ರಯತ್ನವನ್ನು ಮಾಡುತ್ತಿದೆ.

ಉತ್ತರ ಪ್ರದೇಶವನ್ನು ಹೊರತುಪಡಿಸಿ ಬಿಜೆಪಿ ಬಗೆಗಿನ ಅತೃಪ್ತಿ ಕಾಂಗ್ರೆಸ್ಸಿಗೆ ಲಾಭವನ್ನು ತಂದು ಕೊಟ್ಟಿದೆ. ಆದ್ದರಿಂದ ಇದು ಎಡ- ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಗೊಂದಲವನ್ನುಂಟುಮಾಡಿದೆ.

ಬಿಜೆಪಿ ಮತ್ತು ಕಾಂಗ್ರೆಸ್

ಜಾತ್ಯಾತೀತತೆಯ ವಿಷಯದಲ್ಲಿ ಬಿಜೆಪಿಗೆ ಕಾಂಗ್ರೆಸನ್ನು ಹೋಲಿಸಲಾಗದು. ಕೆಲವೊಮ್ಮೆ ಕಾಂಗ್ರೆಸ್ ಪಕ್ಷವು ಕೋಮುವಾದೀ ಶಕ್ತಿಗಳೊಂದಿಗೆ ರಾಜಿಮಾಡಿಕೊಂಡು ಲಾಭ ಗಿಟ್ಟಿಸಿಕೊಳ್ಳಲು ನೋಡಿದೆ. ಅದಕ್ಕೆ ಅರ್ದ ಬೆಲೆಯನ್ನೂ ತೆತ್ತಿದೆ. ಈಗಾಗಲೇ ಹೇಳಿರುವಂತೆ ಕಾಂಗ್ರೆಸ್ ಪಕ್ಷವು ಒಂದು ಜಾತ್ಯಾತೀತ ಪಕ್ಷವಾಗಿ ದೇಶದ ಐಕ್ಯತೆ ಬಹುಮುಖ ಸಂಸ್ಕೃತಿ, ರಕ್ಷಿಸಿಕೊಳ್ಳುವ ಒಂದು ಗಂಭೀರ ಪಾತ್ರ ವಹಿಸಬೇಕಾಗಿದೆ. ಕಾಂಗ್ರೆಸ್ಸಿನ ಜಾತ್ಯಾತೀತತೆಯನ್ನು ಅದರ ಆರ್ಥಿಕ ನೀತಿಗಳೊಡನೆ ಹೋಲಿಸಬೇಕಾಗಿಲ್ಲ, ವಿದೇಶಾಂಗ ನೀತಿಯ ವಿಷಯದಲ್ಲೂ ಸರಿಸುಮಾರು ಕಾಂಗ್ರೆಸ್ ಪಕ್ಷ ಗುಣಾತ್ಮಕ ಪಾತ್ರ ವಹಿಸಿದೆ.

ಗುಜರಾತಿನ ಚುನಾವಣಾ ವಿಷಯದಲ್ಲಿ ಸಿಪಿಐ(ಎಂ) ತುಂಬಾ ದುರ್ಬಲ, ಇತರೆ ಯಾವುದೇ ಎಡಪಕ್ಷಗಳು ಬಲಿಷ್ಟವಾಗಿಲ್ಲ. ಇಂತಹ ಸ್ಥಿತಿಯಲ್ಲಿ ಅಲ್ಲಿಯ ಮತದಾರರು ಕಾಂಗ್ರೆಸ್ ಮತ್ತು ಬಿಜೆಪಿಯೊಡನೆ ದ್ರುವೀಕರಣಗೊಂಡಿದ್ದಾರೆ, ಬಿಜೆಪಿಯನ್ನು ಸೋಲಿಸಲು ಎಲ್ಲಾ ವಿರೋದ ಪಕ್ಷಗಳೂ ಒಂದಾಗಬೇಕಾಗಿದೆ. ಇದು ತುರ್ತು ಅಗತ್ಯವಾಗಿದೆ.

ದುರಾದೃಷ್ಟವಶಾತ್ ಎನ್.ಸಿ.ಪಿ ಮತ್ತು ಸಮಾಜವಾದಿ ಪಕ್ಷಗಳಿಗೆ ಇದರ ಮಹತ್ವ ಅರ್ಥವಾಗಿಲ್ಲ, ಆದ್ದರಿಂದಲೇ ಅವು ತಮ್ಮ ನೈಜಶಕ್ತಿಗಿಂತ ಹೆಚ್ಚಿನ ಸ್ಥಾನಗಳಲ್ಲಿ ಸ್ಪರ್ದಿಸುವುದಾಗಿ ಘೋಷಣೆ ಮಾಡಿವೆ. ಉತ್ತರಪ್ರದೇಶದ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಭಾಗವಹಿಸದೆ ಕಾಂಗ್ರೆಸ್ ಕೂಡ ತಪ್ಪು ಮಾಡಿದೆ.

ಇಂತಹ ಸನ್ನಿವೇಶದಲ್ಲಿ ಎಡಪ್ರಜಾಸತ್ತಾತ್ಮಕ ಶಕ್ತಿಗಳು ಬಂಡವಾಳಶಾಹಿ - ಭೂಮಾಲಿಕ ಪಕ್ಷಗಳ ಪ್ರಭುತ್ವದ ಮೇಲಿನ ಹಿಡಿತ ತಪ್ಪಿಸಬೇಕಾಗಿದೆ. ಅದಕ್ಕಾಗಿ ಎಡಪ್ರಜಾಸತ್ತಾತ್ಮಕ ಶಕ್ತಿಗಳ ಮುಖಂಡತ್ವದಲ್ಲಿ 3ನೇ ಪರ್ಯಾಯವೊಂದು ತುರ್ತಿನ ಅಗತ್ಯವಾಗಿದೆ.

ತೆಹಲ್ಕಾ ಡೌಟ್ ಕಾಂ ನಹೀ

ತೆಹಲ್ಕಾ ಹಗರಣ ತನಿಖಾ ವರದಿ ಇನ್ನೂ ಪ್ರಕಟವಾಗಿರದ ಸನ್ನಿವೇಶದಲ್ಲಿ ತನಿಖಾ ಮುಖ್ಯಸ್ಥ ನ್ಯಾ. ವೆಂಕಟಸ್ವಾಮಿಯವರನ್ನು ಸುಂಕ ಮತ್ತು ಅಬ್ಕಾರಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಪ್ರಧಾನಿಗಳು ನೇಮಿಸಿದ್ದಾರೆ. ಈ ಮೂಲಕ ತನಿಖೆಯೊಳಗೆ ಕರಾಳ ಹಸ್ತ ಚಾಚಿದ್ದಾರೆ.

ತೆಹಲ್ಕಾ ಡಾಟ್ ಕಾಮ್ ಹಗರಣ ಬೆಳಕಿಗೆ ಬಂದು 20 ತಿಂಗಳುಗಳನ್ನು ಮೀರಿತು. ಈ ಹಗರಣಗಳ ಬಗ್ಗೆ ತನಿಖೆ ನಡೆಸಲು ನ್ಯಾಯಮೂರ್ತಿ ವೆಂಕಟಸ್ವಾಮಿಯವರ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿತ್ತು. ಆಯೋಗದ ವರದಿ, ಹೊರಬೀಳುವ ಮೊದಲೇ, ನ್ಯಾಯಮೂರ್ತಿ ವೆಂಕಟಸ್ವಾಮಿಯವರನ್ನು ಕೇಂದ್ರ ಸರಕಾರದ ಸುಂಕ ಮತ್ತು ಅಬಕಾರಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ವಾಜಪೇಯಿ ಸರಕಾರವು ನೇಮಿಸಿದ್ದು, ತೆಹಲ್ಕಾ ತನಿಖೆಯ ಮೇಲೆ ತನ್ನ ಕರಾಳ ಹಸ್ತವನ್ನು ಚಾಚಲು ಬಯಸಿದೆ. ಅಂತಿಮ ಹಂತದಲ್ಲಿರುವ ತನಿಖಾ ವರದಿಯು ತನ್ನ ವಿರುದ್ಧವಾಗಿ ಹೋಗುವುದನ್ನು ಮನಗಂಡ ಕೇಂದ್ರ ಸರಕಾರವು ಉದ್ದೇಶಪೂರ್ವಕವಾಗಿ ಈ ಕ್ರಮವನ್ನು ಕೈಗೊಂಡಿದೆ.

ಆರೋಪಿಗಳನ್ನು ಕಂಡುಹಿಡಿದವರ ಮೇಲೆ ಆರೋಪ:

ದೇಶದ ರಕ್ಷಣಾ ಇಲಾಖೆಯ ಖರೀದಿಯಲ್ಲಿ ಆಗುತ್ತಿರುವ ವ್ಯವಹಾರಗಳಲ್ಲಿ, ಆಳುವ ಪಕ್ಷದ ರಾಜಕಾರಣಿಗಳು, ಸೈನ್ಯದ ಉನ್ನತ ಅಧಿಕಾರಿಗಳು ಒಳಗೊಂಡಿರುವುದನ್ನು ಬಯಲಿಗೆಳೆದ ತೆಹಲ್ಕಾ ಡಾಟ್ ಕಾಂ ತಂಡದವರ ಮೇಲೆ ಬಿಜೆಪಿ ಸರಕಾರ ಇಲ್ಲಸಲ್ಲದ ಪ್ರತೀಕಾರವನ್ನು ಕೈಗೊಂಡಿತ್ತು. ನ್ಯಾಯಮೂರ್ತಿ ವೆಂಕಟಸ್ವಾಮಿ ನೇತೃತ್ವದ ತನಿಖಾ ಆಯೋಗಕ್ಕೆ ಮಾಡಿದ (terms of reference) ನಲ್ಲಿ 'ತನಿಖಾ ತಂಡದವರ ಉದ್ದೇಶವೇನಿತ್ತು' ಎಂಬುದನ್ನು ತನಿಖೆ ಮಾಡಲು ಆದೇಶಿಸುವುದರ ಮೂಲಕ ತೆಹಲ್ಕಾ ಡಾಟ್ ಕಾಂ ತಂಡದವರ ಮೇಲೆಯೇ ಗೂಬೆ ಕೂರಿಸಲಾಗಿತ್ತು. ಮಾತ್ರವಲ್ಲದೆ, ವಿವಿಧ ಕಾರಣಗಳನ್ನು ನೀಡಿ ಆ ತಂಡದ ಸದಸ್ಯರಿಗೆ, ಬಂಧನವೂ ಸೇರಿದಂತೆ ಹಲವಾರು ಬೆದರಿಕೆಗಳನ್ನು ಒಡ್ಡಲಾಗಿತ್ತು.

ದೇಶದ ರಕ್ಷಣಾ ಇಲಾಖೆಗೆ ಸೇರಿದ 14 ಹಗರಣಗಳನ್ನು ಬಯಲಿಗೆಳೆದ ತೆಹಲ್ಕಾ ಡಾಟ್ ಕಾಂ, 'ಶಿಸ್ತಿನ ಪಕ್ಷ'ದ ಅಧ್ಯಕ್ಷ ಬಂಗಾರು ಲಕ್ಷ್ಮಣ 'ಪಕ್ಷದ ನಿಧಿ'ಗೆಂದು ಹಣ ಪಡೆದುದನ್ನು ತನ್ನ ತೆರೆಯಮರೆಯ ಕ್ಯಾಮರಾದಿಂದ ಸೆರೆ ಹಿಡಿದಿತ್ತು. ಸಮಾಜವಾದಿ ಎಂದು ಹೇಳಿಕೊಳ್ಳುತ್ತಾ ಕೋಮುವಾದಿಗಳೊಂದಿಗೆ ರಾಜಿ ಮಾಡಿಕೊಂಡ ರಕ್ಷಣಾ ಸಚಿವರ ಮನೆಯಲ್ಲಿ, ಅವರದೇ ಪಕ್ಷದ ಅಧ್ಯಕ್ಷೆ ಜಯಾ ಚಿಟ್ಲೈ ತನ್ನ ಆಪ್ತರ ಮೂಲಕ ಹಣ ಸ್ವೀಕರಿಸಿ 'ಸಮತಾ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆ ಮೈಸೂರಿನಲ್ಲಿ ನಡೆಸುವುದಕ್ಕೆ, ಸಚಿವ ಶ್ರಿನಿವಾಸ ಪ್ರಸಾದ್‌ರವರಿಗೆ ಕಳಿಸಿ' ಎಂದು ಹೇಳಿದುದನ್ನು ಜನ ಮರೆತಿಲ್ಲ. ಸಮತಾ ಪಕ್ಷದ ಶ್ರೀನಿವಾಸ ಪ್ರಸಾದ್ ಕರ್ನಾಟಕದ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಸದಸ್ಯರು.

ಭ್ರಷ್ಟಾಚಾರಿಗಳ ಕೂಟ

ಬಿಜೆಪಿ ನೇತೃತ್ವದ ಸರಕಾರ, ದೇಶವನ್ನು ವಿಭಜಿಸಲೆತ್ನಿಸುವ ಕೋಮುವಾದಿಗಳ ಸಂಘ ಮಾತ್ರವಲ್ಲ, ಭೃಷ್ಟಾಚಾರಗಳ ಕೂಟವೂ ಆಗಿದೆ.

1996ರಲ್ಲಿ ಬಹುಮತವಿಲ್ಲದಿದ್ದರೂ 13 ದಿನ ಅಧಿಕಾರ ನಡೆಸಿದ ಬಿಜೆಪಿ ಕೂಟ, ದೇಶದ್ರೋಹಿ ಎನ್ರಾನ್ ಕಂಪನಿಯವರಿಗೆ ಒಪ್ಪಂದ ಮಾಡಿಕೊಳ್ಳುವುದಕ್ಕೆ ಬೇಕಾದ, ಕೇಂದ್ರ ಸರಕಾರದ ಕೌಂಟರ್ ಗ್ಯಾರಂಟಿಯನ್ನು ನೀಡಿತ್ತು. ತಾನು ಈ ಒಪ್ಪಂದಕ್ಕೆ ಸಹಿ ಹಾಕುವುದಕ್ಕೆ ಮೊದಲು ಭಾರತದ ಜನರಿಗೆ 'ತಿಳುವಳಿಕೆ' ಮೂಡಿಸಲು 62 ಕೋಟಿ ರೂಪಾಯಿ ಖರ್ಚು ಮಾಡಿರುವುದಾಗಿ ಎನ್ರಾನ್ ಹೇಳಿಕೊಂಡಿತ್ತು. ಆದರೆ ಈ ಹಣ ಎಲ್ಲಿಗೆ ಹೋಯಿತು ಎಂದು ಹೇಳಿಲ್ಲ. ಅದನ್ನು ಜನರೆ ತಿಳಿದುಕೊಳ್ಳಬೇಕು.

ಹಿಂದೆ ಜೈನ್ ಹವಾಲ ಹಗರಣದಲ್ಲಿ 115 ಮಂದಿಗೆ 65.41 ಕೋಟಿ ರೂ. ಲಂಚ ನೀಡಿರುವುದಾಗಿ ಬೆಳಕಿಗೆ ಬಂದಿತ್ತು. ಇದರಲ್ಲಿ 55 ರಾಜಕಾರಣಿಗಳನ್ನು, 38 ಮಂದಿ ಅಧಿಕಾರಿಗಳನ್ನು ಸಿಬಿಐ ಗುರುತಿಸಿತ್ತು. ಈ ಪಟ್ಟಿಯಲ್ಲಿ ನರಸಿಂಹರಾವ್ ಸರಕಾರದ ಮೂವರು ಮಂತ್ರಿಗಳು, ಸಾರ್ವಜನಿಕ ವಲಯದ ಉನ್ನತ ಅಧಿಕಾರಿಗಳು ಹಾಗೂ ಇತರೆ ಬಂಡವಾಳಶಾಹಿ ಪಕ್ಷದ ರಾಜಕಾರಣಿಗಳೂ ಇದ್ದರು. ಇಂದಿನ ಗೃಹಮಂತ್ರಿ ಹಾಗೂ ಉಪಪ್ರದಾನಿ ಎಲ್.ಕೆ. ಅದ್ವಾನಿಯವರ ಹೆಸರೂ ಇತ್ತು. ಜೈನ್ ಸಹೋದರರಿಂದ 60 ಲಕ್ಷ ರೂಪಾಯಿ ಸ್ವೀಕರಿಸಿದ್ದರೆಂಬ ಆರೋಪ ಅವರ ಮೇಲಿತ್ತು. ಅದ್ವಾಣಿಯವರು ಇದನ್ನು ಪಡೆದೇ ಇಲ್ಲ ಎಂದು ವಾದಿಸಿದರು. ಆದರೆ ಬಿಜೆಪಿಯ ಅಂದಿನ ಇನ್ನೋರ್ವ ಪ್ರಮುಖ ಮುಖಂಡ ಮದನ್‌ಲಾಲ್ ಖುರಾನ, ಅದ್ವಾಣಿ ಪಕ್ಷದ ಅಧ್ಯಕ್ಷರಾಗಿದ್ದಾಗ ಪಕ್ಷದ ಖರ್ಚಿಗೆಂದು ಈ ಹಣ ಪಡೆದಿದ್ದರು ಎಂದು ಹೇಳಿದುದು ಜನತೆ ಮರೆತಿಲ್ಲ ಎಂದು ಕಾಣುತ್ತದೆ.

ಬಿಜೆಪಿ ಅಧ್ಯಕ್ಷರ ಪರಂಪರೆ

ಅದ್ವಾನೀ ಅಧ್ಯಕ್ಷರಾಗಿದ್ದಾಗ 60 ಲಕ್ಷ ಪಡೆದರೆ ಬಂಗಾರು ಲಕ್ಷ್ಮಣ್ ಅಧ್ಯಕ್ಷರಾಗಿದ್ದಾಗ 1 ಲಕ್ಷ ಪಡೆದಿರುವುದು ಡಾಲರ್‌ನಲ್ಲಿ ಹಣ ಬೇಕು ಎಂದು ಹೇಳಿರುವುದು ತೆಹಲ್ಕಾ ಟೇಪು ಬಹಿರಂಗಪಡಿಸಿದೆ. ಇಂದಿನ ಅಧ್ಯಕ್ಷ ವೆಂಕಯ್ಯನಾಯ್ಡು ದಲಿತರಿಗೆ ಮೀಸಲಿರಿಸಿದ 4.95 ಎಕ್ರೆ ಜಮೀನನ್ನು ತಿನ್ನ ಹೆಸರಿಗೆ, ಇನ್ನು ಸಾಧಾರಣ 40 ಎಕ್ರೆ ಜಮೀನು ಕುಟುಂಬದ ಹೆಸರಿಗೆ ಮಾಡಿಸಿಕೊಂಡಿದ್ದರು.

ಇದು ಶಿಸ್ತುಬದ್ಧ ಪಕ್ಷದ ಅಧ್ಯಕ್ಷರ ಶಿಸ್ತಿನ ಪರಿ. ಇದರಲ್ಲಿ ದಲಿತ ವಿಭಾಗಕ್ಕೆ ಸೇರಿದ ಅಧ್ಯಕ್ಷರು ಮೂಲೆ ಗುಂಪಾಗಬೇಕಾಯಿತು. ಆದರೆ ಇನ್ನಿಬ್ಬರು ಪ್ರಮುಖ ಹುದ್ದೆಗಳಲ್ಲಿ ರಾಜಾರೋಷವಾಗಿಯೇ ತಮ್ಮ ಶಿಸ್ತನ್ನು ಪ್ರದರ್ಶಿಸುತ್ತಿದ್ದಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಈ ಮಧ್ಯೆ ತೆಹಲ್ಕಾ ಹಗರಣದ ವಿಚಾರಣೆಯನ್ನು ಮುಂದುವರಿಸುವುದಾಗಿ ವಾಜಪೇಯಿ ಸರಕಾರ ಹೇಳಿಕೊಂಡಿದೆ. ಇದಕ್ಕಾಗಿ ನಿವೃತ್ತ ನ್ಯಾಯಮೂರ್ತಿಗಳ ಹೆಸರನ್ನು ಸೂಚಿಸುವಂತೆ ಸುಪ್ರಿಂ ಕೋರ್ಟ್‌ನ ಮುಖ್ಯ ನ್ಯಾಯಾದೀಶರನ್ನು ಕೇಳಿಕೊಂಡಿದೆ. ನಿವೃತ್ತ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದಕ್ಕೆ ತಮ್ಮನ್ನು ಕೇಳಬೇಕಾದ ಅಗತ್ಯ ಇಲ್ಲ ಎಂದು ಮುಖ್ಯ ನ್ಯಾಯಮೂರ್ತಿಗಳು ಹೇಳಿರುವುದರಿಂದ ವಾಜಪೇಯಿ ಸರಕಾರ ಪೇಚಿನಲ್ಲಿ ಸಿಲುಕಿದೆ. ಪ್ರತಿಪಕ್ಷಗಳ ಬಾಯಿ ಮುಚ್ಚಿಸಬೇಕೆಂದು ಬಯಸಿದ್ದ ವಾಜಪೇಯಿ ಸರಕಾರಕ್ಕೆ ತನ್ನ ಕೈಗಳನ್ನೇ ಕಟ್ಟಿಕೊಂಡಂತಾಗಿದೆ.

ಈಗ ತನಿಖಾ ಆಯೋಗದ ವರದಿ ಮೂಲೆಗುಂಪಾಗುವ ಸಂಭವ ಇದೆ. ಬಿಜೆಪಿ ಸರಕಾರಕ್ಕೆ ಬೇಕಾಗಿರುವುದೂ ಇದೆ. ಈ ಸಂದರ್ಭದಲ್ಲಿ ಜಂಟಿ ಸಂಸದೀಯ ಸಮಿತಿಯಿಂದ ಸಮಗ್ರವಾದ ತನಿಖೆ ಆಗಬೇಕಾಗಿದೆ. ಸತ್ಯ ಹೊರಬರಬೇಕಾಗಿದೆ.

ಒಟ್ಟಾರೆಯಾಗಿ ತೆಹಲ್ಕಾ ಹಗರಣದ ತನಿಖೆಯನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿರುವ ಬಿಜೆಪಿ ನೇತೃತ್ವದ ಸರಕಾರ ತೊಲಗಲೇಬೇಕು.

ಯುವ ಭವಿಷ್ಯ ರಕ್ಷಣೆಗ

ಭವಿಷ್ಯತ್ತಿನ ಆಶಾಕಿರಣ, ನಾಡಿನ ಅಮೂಲ್ಯ ಆಸ್ತಿಯಾಗಿರುವ ಯುವಜನರನ್ನು ಅಂಧಾಕಾರದತ್ತ ದೂಡಲಾಗುತ್ತಿದೆ. ಯುವಮನಸ್ಸುಗಳನ್ನು, ಹಿಟ್ಲರನ ಗ್ಯಾಸ್ ಛೇಂಬರ್‌ಗಳಂಥಲ್ಲಿ ಬೇಯಿಸಲಾಗುತ್ತಿದೆ. ಅನಭಿವೃದ್ಧಿ, ಉದ್ಯೋಗ - ಶಿಕ್ಷಣದ ಅವಕಾಶ ವಂಚಿತತೆ, ವರದಕ್ಷಿಣೆ, ಅಸ್ಪೃಶ್ಯತೆ ಪಿಡುಗುಗಳು ಮತ್ತುಸಾಂಸ್ಕೃತಿಕ ಅದಃಪತನದ ಮೌಲ್ಯಗಳನ್ನು ಪಸರಿಸಿ ಬೆನ್ನಟ್ಟಿ ಬಲಿಹಾಕಲಾಗುತ್ತಿದೆ. ಅತೃಪ್ತ ಯುವಜನರನ್ನು ದಿಕ್ಕುತಪ್ಪಿಸುವ ಹಲವು ಕುತಂತ್ರಗಳು ನಡೆದಿವೆ.

ರಾಯಚೂರಿನಲ್ಲಿ ಜರುಗಿದ ಡಿವೈಎಫ್ಐ 7ನೇ ರಾಜ್ಯ ಸಮ್ಮೇಳನವು ಅತ್ಯಂತ ಮಹತ್ವದ ತೀರ್ಮಾನಗಳನ್ನು ಕೈಗೊಂಡಿದೆ. ಯುವಜನರ ಭವಿಷ್ಯಕ್ಕೆದುರಾದ ಬೆದರಿಕೆಗಳನ್ನು ಗುರುತಿಸಿ, ಸವಾಲುಗಳನ್ನು ಕೈಗೆತ್ತಿಕೊಂಡು ವಿಶಾಲವಾದ ಪ್ರಬಲ ಯುವ ಆಂದೋಲನವನ್ನು ರೂಪಿಸಲು ನಿರ್ಧರಿಸಿದೆ. ನಿರುದ್ಯೋಗ ಪ್ರಶ್ನೆ ಆಧಾರದಲ್ಲಿ ನಿರಂತರ ಚಳುವಳಿ ರೂಪಿಸಲು ವಿಶೇಷ ಒತ್ತು ನೀಡಿದೆ. ಯುವಜನರ ಸ್ಥಿತಿ-ಗತಿಗಳನ್ನು ವಿಶ್ಲೇಷಿಸಿ, ಆಂದೋಲನದ ಗೊತ್ತು-ಗುರಿ ಗುರುತಿಸಿದ ಸಮ್ಮೇಳನದ ಕಲಾಪಗಳ ಸಂಕ್ಷಿಪ್ತ ನೋಟ ಇಲ್ಲಿದೆ.

ಕೆ.ಎನ್.ಉಮೇಶ್

ಉದಾರೀಕರಣ ಹಾಗೂ ಕೋಮುವಾದದ ವಿರುದ್ಧ ಸೈದ್ಧಾಂತಿಕ ರಾಜಕೀಯ ರಾಷ್ಟ್ರಕ್ಕೆ ಅನಿವಾರ್ಯವಾಗಿದೆ - ನ್ಯಾಯಮೂರ್ತಿ ಹೆಚ್.ಜಿ.ಬಾಲಕೃ

ನವೆಂಬರ್ 26 ರಂದು ಬೆಳಿಗ್ಗೆ ಕಾಂ. ಶ್ರೀನಿವಾಸ ಬಜಾಲ್ ವೇದಿಕೆಯಲ್ಲಿ ಕಾಂ. ಸೂರ್ಯನಾ ನಗರದಲ್ಲಿ ಸಮ್ಮೇಳನ ಉದ್ಘಾಟಿಸಿದ ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯ ಹೆಚ್.ಜಿ.ಬಾಲಕೃಷ್ಣರವರು ಪ್ರಸ್ತುತ ರಾಷ್ಟ್ರವು ಒಂದೆಡೆ ಉದಾರೀಕರಣ ಆಧಾರಿತ ಆರ್ಥಿಕ ನೀತಿಯ ಅಂತೆಯೇ ಇನ್ನೊಂದೆಡೆ ಫ್ಯಾಸಿಸ್ಟ್-ಜನಾಂಗ ದ್ವೇಷಿ ಕೋಮುವಾದದ ಸವಾಲನ್ನು ಎದುರಿಸುತ್ತಿ ಸವಾಲುಗಳು ರಾಷ್ಟ್ರದ ಸಂವಿಧಾನದ ಮೂಲಭೂತ ಆಧಾರಗಳಾದ ಸಮಾಜವಾದ ಹಾಗೂ ಜಾತ್ಯಾತಿ ಸೌಹಾರ್ದತೆ-ಏಕತೆಯ ಪರಂಪರೆಗೆ ಒಡ್ಡಲಾಗಿರುವ ಅಪಾಯಗಳಾಗಿವೆ. ಇಂತಹ ಸವಾಲನ್ನು ಎದುರಿ ರಾಜಕೀಯದ ಅದರಲ್ಲೂ ಎಡಪಂಥೀಯ ರಾಜಕೀಯದ ಅಗತ್ಯತೆ ಅನಿವಾರ್ಯವಾಗಿದೆ. ಈ ನಿಟ್ಟಿನ ಕಾರ್ಯೋನ್ಮುಖವಾಗಬೇಕಿದೆ.

ರಾಜ್ಯದ ಸುಮಾರು 2 ಕೋಟಿಗೂ ಮೀರಿದ ಯುವಜನತೆ ಒಂದೆಡೆ ನಿರುದ್ಯೋಗದಿಂದ ತತ್ತರಿಸಿದ್ದರೆ. ಮತ್ತೊಂದೆಡೆ ಜಾತಿವಾದಿ ಹಾಗೂ ಕೋಮುವಾದಿ ಶಕ್ತಿಗಳ ಉಪಟಳಗಳಿಗೆ ಬಲಿಯಾಗಿದ್ದಾರೆ. ಯಾವುದೇ ಯುವಜನ ಸಂಘಟನೆ ಯುವಜನತೆಯ ಪ್ರಜಾಸತ್ತಾತ್ಮಕ ಆಶಯಗಳಿಗೆ ಸ್ಪಂದಿಸದಿರುವಾಗ ಪ್ರಜಾಸತ್ತಾತ್ಮಕ ಯುವಜನ ಚಳುವಳಿಗೆ, ಯುವಜನತೆಯನ್ನು ತಂದು ರಾಜ್ಯದಲ್ಲಿ ಜನಪರ ಅಭಿವೃದ್ಧಿಯ ಮೂಲಕ ಉದ್ಯೋಗ ಸೃಷ್ಟಿಗೆ ಒತ್ತಾಯಿಸುವ, ರಾಜ್ಯವನ್ನು ಕೋಮುಸೌಹಾರ್ದತೆಯ ನೆಲೆಯನ್ನಾಗಿಸುವ ಚಳುವಳಿಗೆ ಅಣಿನೆರಸಲು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ)ನ 7ನೇ ರಾಜ್ಯ ಸಮ್ಮೇಳನ ನಿರ್ಧರಿಸಿದೆ.

ಪ್ರಜಾಸತ್ತಾತ್ಮಕ ಯುವಜನ ಚಳುವಳಿಗೆ, ಯುವಜನತೆ, ವಿದ್ಯಾರ್ಥಿಗಳಾಗಿರುವ ಯುವಜನತೆ, ನಿರುದ್ಯೋಗಿ ಯುವಜನತೆ, ಯುವ ಮಹಿಳೆ ಹೀಗೆ ವಿವಿಧ ವಿಭಾಗಗಳಲ್ಲಿರುವ ಯುವಜನತೆಯ ಪರಿಸ್ಥಿತಿಯರಿಯಲು, ರಾಜ್ಯದ ಕೈಗಾರಿಕೆ ಕೃಷಿ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪರಿಸ್ಥಿತಿಯನ್ನು ವಿವರವಾಗಿ ಸಮ್ಮೇಳನ ಪರಿಶೀಲಿಸಿದೆ. ಆ ವಿಭಾಗಗಳ ಯುವಜನತೆಯನ್ನು ಸಂಘಟಿಸಿ, ಆ ವಿಭಾಗಗಳ ಮೇಲಿನ ಉದಾರೀಕರಣ ಆಧಾರಿತ ನೀತಿಗಳ ವಿರುದ್ಧದ ಹೋರಾಟಕ್ಕೆ ಅಣಿನೆರಸಲು ನಿರ್ಧರಿಸಿದೆ.

ಲಕ್ಷಗಳಲ್ಲಿ ಏರಿದೆ ನಿರುದ್ಯೋಗ:

ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಾಯಿತ ನಿರುದ್ಯೋಗಿಗಳ ಸಂಖ್ಯೆ ಕಳೆದು ಮೂರು ವರ್ಷಗಳಲ್ಲಿ 2.03 ಲಕ್ಷದಷ್ಟು ಹೆಚ್ಚಳವಾಗಿದೆ. (1998-99 ರಲ್ಲಿ 18.18 ಲಕ್ಷ,



ರಾಜ್ಯದಲ್ಲಿರುವ ಅಡ್ಡಿ ಆತಂಕಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಸಮ್ಮೇಳನ ರಾಜ್ಯದ ಯುವಜನತೆಯ ಪರಿಸ್ಥಿತಿಯನ್ನು ವಿವರವಾಗಿ ಪರಿಶೀಲಿಸಿದೆ. ಭಾರತವನ್ನು ಜಾಗತೀಕ ಹಳ್ಳಿಯ ಒಂದು ಕೇರಿಯನ್ನಾಗಿ ಹಾಗೂ ರಾಜ್ಯವನ್ನು ಆ ಕೇರಿಯ ಒಂದು ಓಣಿಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ, ಅಂತೆಯೇ ರಾಜ್ಯದ ಕಾಂಗ್ರೆಸ್ ಸರ್ಕಾರ 2ನೇ ತಲೆಮಾರಿನ ಉದಾರೀಕರಣ ಆಧಾರಿತ ಸುಧಾರಣೆಗಳನ್ನು ಜಾರಿಗೆ ತರಲು ಅವಿರತ ಯತ್ನ ಹಾಗೂ ಪೈಪೋಟಿ ನಡೆಸಿವೆ. ಪರಿಣಾಮವಾಗಿ ರಾಷ್ಟ್ರ ಹಾಗೂ ರಾಜ್ಯದ ಜನತೆಗೆ ಎರಗಿರುವ ಸಂಕಷ್ಟಗಳ ಬಹುಪಾಲು ಹೊರೆಯುನ್ನು ಯುವಜನತೆ ಹೊರಬೇಕಾಗಿ ಬಂದಿದೆ ಎಂಬುದನ್ನು ರಾಜ್ಯದ ಯುವಜನತೆಯ ಪರಿಸ್ಥಿತಿ ವಿವರಿಸಿರುವ ಸಮ್ಮೇಳನದ ವರದಿ ಉಲ್ಲೇಖಿಸಿದೆ.

ಸಮಾಜದ ಪ್ರತಿಯೊಂದು ವಿಭಾಗದಲ್ಲೂ ಬಹುದೊಡ್ಡ ಸಂಖ್ಯೆಯಲ್ಲಿರುವ ಯುವಜನತೆ, ಪ್ರತಿಯೊಂದು ವಿಭಾಗಗಳ ಮೇಲೆರಗಿರುವ ಉದಾರೀಕರಣ ಆಧಾರಿತ ದಾಳಿಗಳ ಪರಿಣಾಮವನ್ನು ಎದುರಿಸುವ ವಿಶಾಲ ಸಮೂಹವಾಗಿದೆ. ಕಾರ್ಮಿಕರಾಗಿರುವ ಯುವಜನತೆ, ರೈತ- ಕೂಲಿಕಾರರಾಗಿರುವ

2000-01 ರಲ್ಲಿ 20-21 ಲಕ್ಷ) ಆದರೆ ಒದಗಿಸಲಾಗಿರುವ ಉದ್ಯೋಗಗಳು, ಸಾವಿರ ಸಂಖ್ಯೆಗೆ ಸೀಮಿತವಾಗಿದ್ದು, ಸಾವಿರಾರು ಸಂಖ್ಯೆಯಲ್ಲಿ ಕಡಿತಗೊಂಡಿವೆ. 98-99ರಲ್ಲಿ ಉದ್ಯೋಗ ವಿನಿಮಯ ಕಛೇರಿಗಳು, 19,110 ಉದ್ಯೋಗಗಳ ಒದಗಿಸಿದ್ದರೆ, 2000-01 ರಲ್ಲಿ 2580 ಉದ್ಯೋಗಗಳನ್ನು ಮಾತ್ರ ಒದಗಿಸಿವೆ. ಪ್ರತಿಯೊಂದು ಪದವಿ ಪಡೆದ ಯುವಜನತೆಯ ನಡುವೆಯೂ ನಿರುದ್ಯೋಗ ವ್ಯಾಪಕವಾಗಿ ತೀವ್ರಗೊಂಡಿದೆ. ಸಿಲಿಕಾನ್ ವ್ಯಾಲಿ -ಐ.ಟಿ ರಾಜ್ಯದಲ್ಲಿ ನಿರುದ್ಯೋಗಿ ಸಾಫ್ಟ್‌ವೇರ್ ಇಂಜಿನಿಯರ್‌ಗಳ ಸಂಖ್ಯೆಯು ಹೆಚ್ಚಿದೆ.

ಈ ಅಂಕಿ ಅಂಶಗಳು ರಾಜ್ಯದಲ್ಲಿ "ಉದ್ಯೋಗ ರಹಿತ" ಬೆಳವಣಿಗೆ ವಿಧಾನದ ಉದಾರೀಕರಣ ಆಧಾರಿತ ನೀತಿಗಳ ಜಾರಿಯ ಪರಿಣಾಮ ಸೂಚಿಸುತ್ತವೆ. ವರ್ಷಕ್ಕೆ 20,000 ಕೋಟಿ ರೂ.ಗಳ ಬಂಡವಾಳ ಆಕರ್ಷಿಸುವ ಹಾಗೂ ಒಂದೂವರೆ ಲಕ್ಷ ಉದ್ಯೋಗ ಸೃಷ್ಟಿಸುವ ರಾಜ್ಯ ಸರ್ಕಾರದ ಹಾಗೂ ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಪ್ರಧಾನಿಗಳ ಪೊಳ್ಳುತನಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ಗ್ರಾಮೀಣ ಯುವಜನತೆಯ ಪರಿಪಾಟಲು:

ಕೇಂದ್ರದ ಮುಕ್ತ ಆಮದು ನೀತಿಯ

ಪರಿಣಾಮವಾಗಿ ಪ್ರತಿಯೊಂದು ಬೆಳೆಯ ಬೆಲೆ ಕುಸಿದು, ರೈತ ಕೂಲಿಕಾರರು ಆತ್ಮಹತ್ಯೆಗೆ ಎರಗಿದ್ದಾರೆ. 1996-2000'ದ ನಡುವೆ ರಾಜ್ಯದಲ್ಲಿ ಸಂಭವಿಸಿರುವ 56790 ಆತ್ಮಹತ್ಯೆಗಳಲ್ಲಿ ಕೃಷಿಯಲ್ಲಿ ತೊಡಗಿದ್ದವರ ಸಂಖ್ಯೆ 10959 ಶೇ.19.30 ರಷ್ಟಾಗಿದ್ದರೆ, ಅದರಲ್ಲಿನ ಯುವಜನತೆಯ ಪಾಲು ಶೇ.50 ಕ್ಕೂ ಹೆಚ್ಚಾಗಿದೆ.

ರೇಷ್ಮೆ ಕೃಷಿಯೊಂದರಲ್ಲಿಯೇ ಕಳೆದ ಒಂದು ವರ್ಷದಲ್ಲಿ ಒಂದು ಲಕ್ಷ ಉದ್ಯೋಗ ಕಡಿತಗೊಂಡಿವೆ. (1999-2000ದಲ್ಲಿ 15.6 ಲಕ್ಷ ಗ್ರಾಮೀಣ ಯುವಜನತೆಗೆ ಉದ್ಯೋಗ ಒದಗಿಸಿದ್ದ ರೇಷ್ಮೆ ವ್ಯವಸಾಯ, 2000-01ರಲ್ಲಿ 14.6 ಲಕ್ಷಕ್ಕೆ ಸೀಮಿತವಾಗಿದೆ.)

ರಾಜ್ಯದಲ್ಲಿ ನಡೆದಿರುವ ಬೃಹತ್-ಮಧ್ಯಮ ಪ್ರಮಾಣದ ನೀರಾವರಿ ಯೋಜನೆ, ಉದ್ಯೋಗ ಖಾತ್ರಿಯೋಜನೆಗಳು ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯಂತಹ ಯೋಜನೆಗಳ ಮೂಲಕ 1999' ರ ಏಪ್ರಿಲ್-ನವೆಂಬರ್ ನಡುವೆ 10.96 ಕೋಟಿ ಮಾನವ ದಿನಗಳ ಕೂಲಿ ಕೆಲಸಗಳು ಸೃಷ್ಟಿಯಾಗಿದ್ದರೆ, 2001' ರ ಅದೇ ಅವಧಿಯಲ್ಲಿ ಕೇವಲ 7.76 ಕೋಟಿ ಮಾನವ ದಿನಗಳ ಕೂಲಿ ಕೆಲಸ ಮಾತ್ರ ಸೃಷ್ಟಿಯಾಗಿವೆ. ಅಂತೆಯೇ 1998ರಲ್ಲಿ ಗ್ರಾಮೀಣ ರೋಜ್‌ಗಾರ್ ಯೋಜನೆಯ ಫಲಾನುಭವಿಗಳ ಸಂಖ್ಯೆ 94,690 ಆಗಿದ್ದರೆ, ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ಪರಿವರ್ತಿತ ಯೋಜನೆಯಾದ ಸ್ವರ್ಣಜಯಂತಿ ಗ್ರಾಮೀಣ ಸ್ವರೋಜ್‌ಗಾರ್ ಯೋಜನೆಯ ಫಲಾನುಭವಿಗಳ ಸಂಖ್ಯೆ 2001ರಲ್ಲಿ 2700 ಕ್ಕೆ ಇಳಿದಿದೆ.

ಕೆಲಸ ಅರಿಸಿ ಯುವಜನತೆಯು ಕೊಡಗು, ಚಿಕ್ಕಮಗಳೂರಿನೆಡೆಗೆ ಇದುವರೆಗೆ ನಡೆದಿದ್ದ ಕೆಲಸ ಅರಿಸುವ ಉತ್ತರ ಕರ್ನಾಟಕದ ಯುವಜನತೆ

ವಲಸೆ ಪ್ರಕ್ರಿಯೆ ಹಿಂದಿನ ವರ್ಷಗಳ ಅನುಭವವಾದರೆ, ಪ್ರಸ್ತುತ ಕೊಡಗು, ಚಿಕ್ಕಮಗಳೂರಿನಿಂದಲೂ ವಲಸೆ ಆರಂಭವಾಗಿದೆ.

ಖಾಸಗಿ ಉದ್ಯೋಗ ವಿನಿಮಯ ಏಜೆನ್ಸಿಗಳಿಗೆ ಪಕ್ವ ಕಾಲ:

ಸರ್ಕಾರಿ ಉದ್ಯೋಗ ವಿನಿಮಯ ಕಛೇರಿಗಳು, ಉದ್ಯೋಗ ಒದಗಿಸಲಾರದ ಪರಿಸ್ಥಿತಿಯಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಇದ್ದರೆ, ವಿನಿಮಯ ಕೇಂದ್ರಗಳು ಒದಗಿಸುವ ಉದ್ಯೋಗಗಳ ಸಂಖ್ಯೆ ಇಳಿಮುಖವಾಗಿರುವಾಗಲೇ, ಖಾಸಗಿ ಉದ್ಯೋಗ ವಿನಿಮಯ ಏಜೆನ್ಸಿಗಳ ದಂಧೆ ರಾಜ್ಯದ ಉದ್ದಗಲಕ್ಕೂ ಹೆಚ್ಚಿದೆ. ನಿರುದ್ಯೋಗದಿಂದ ಬಳಲಿರುವ ಯುವಜನತೆ, ಈ ಏಜೆನ್ಸಿಗಳಿಗೆ ಮೊರೆಬಿದ್ದು, ನೂರಾರು- ಸಾವಿರಾರು ರೂಪಾಯಿಗಳನ್ನು ತೆತ್ತಿ ಉದ್ಯೋಗ ಪಡೆವ ಪರಿಸ್ಥಿತಿ ಹೆಚ್ಚುತ್ತಿದೆ. ಸರ್ಕಾರಿ ಉದ್ಯೋಗ

ಡಿವೈಎಫ್ಐ 7ನೇ

ವಿನಿಮಯ ಕಛೇರಿಗಳನ್ನು ಮುಚ್ಚಿ ಸುತ್ತೋಲೆ ಹೊರಡಿಸಿ, ಈಗಾಗಲೇ ಕೆಲವೆಡೆ ಕಛೇರಿಗಳನ್ನು ಮುಚ್ಚುವ ಮೂಲಕ ರಾಜ್ಯದ ಕಾಂಗ್ರೆಸ್ ಸರ್ಕಾರ ಈ ಪ್ರಕ್ರಿಯೆಗೆ ಉತ್ತೇಜನ ನೀಡಿದೆ. ಪರಿಣಾಮವಾಗಿ "ಉದ್ಯೋಗ ಅರಸುವವರಿಗಾಗಿ-ತಲೆ ಬೇಟೆ ಆಡುವವರು" (head hunters for job seekers) ಎಂಬ ಉದಾರೀಕರಣ ಆಧಾರಿತ ನೂತನ ಖಾಸಗಿ ಉದ್ಯೋಗ ವಿನಿಮಯ ವ್ಯವಸ್ಥೆಯೆಡೆಗೆ ಇಡೀ ರಾಜ್ಯ ನಡೆದಿದೆ.


ಏನಾದರೂ ಮಾಡಿ ಉದ್ಯೋಗ ಪಡೆವ ನಿಟ್ಟಿನಲ್ಲಿ ನೇಮಕಾತಿ ಪರೀಕ್ಷೆ - ಪ್ರಕ್ರಿಯೆಗಳಲ್ಲಿ ಅಕ್ರಮ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಹೆಚ್ಚಿದೆ.

35 ಜನರ ನೂತನ ರಾಜ್ಯ ಸಮಿತಿ ಆಯ್ಕೆ


ಸಮ್ಮೇಳನವು 5 ಖಾಲಿ ಸ್ಥಾನಗಳನ್ನೊಳಗೊಂಡು 35 ಜನರ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು. ರಾಜ್ಯ ಸಮಿತಿಗೆ 3 ಯುವತಿಯರನ್ನು ಆಯ್ಕೆ ಮಾಡಿದೆ.

ಅಧ್ಯಕ್ಷರು	:	ಕೆ.ಎನ್.ಉಮೇಶ್
ಉಪಾಧ್ಯಕ್ಷರು	:	ಲಕ್ಷ್ಮಣ್ ಕುಮಾರ್.ಎಸ್(ಬೆಂಗಳೂರು)
		ಸುನೀಲ್ ಕುಮಾರ್ ಬಜಾಲ್ (ದ.ಕನ್ನಡ)
		ವಿಠ್ಠಲ ಭಂಡಾರಿ (ಉ.ಕನ್ನಡ)
		ಹೆಚ್.ಶರ್ಫುದ್ದೀನ್ ಪೋತ್ನಾಳ್ (ರಾಯಚೂರು)
		ಎ.ವಿ.ವೆಂಕಟರಾಮು (ಕೋಲಾರ)
ಕಾರ್ಯದರ್ಶಿ	:	ಕೆ.ಮಹಂತೇಶ್
ಸಹ ಕಾರ್ಯದರ್ಶಿಗಳು	:	ವಸಂತಕುಮಾರ್ ಹೊಸಮನಿ (ಕೊಡಗು)
		ಚಂದ್ರಶೇಖರ್ ವಿ.(ಉಡುಪಿ)
		ಭರತರಾಜ್ ಎನ್.ಎಲ್(ಮಂಡ್ಯ)
		ಜಿ.ವಿ.ರಮೇಶ್ (ಬಳ್ಳಾರಿ)
ಖಜಾಂಚಿ	:	ಕೆ.ಶ್ರೀನಿವಾಸ್ (ಬೆಂಗಳೂರು)

ಕಾರ್ಯದರ್ಶಿ ಮಂಡಳಿ ಸದಸ್ಯರು : ಧರ್ಮೇಶ್ (ಹಾಸನ), ಅಬ್ದುಲ್ ರಜಾಕ್ ಮುಲ್ಲಾ (ಗದಗ)



ಕೆ.ಎನ್.ಉಮೇಶ್



ಕೆ.ಮಹಾಂತೇಶ್

ಪ್ರಬಲ ಆಂದೋಲನ

ಅಂತೆಯೇ ವಿ.ವಿ. ಪರೀಕ್ಷೆಗಳಲ್ಲಿಯು ಹೆಚ್ಚು ಅಂಕಗಳಿಸುವ ನಿಟ್ಟಿನಲ್ಲಿ ಪರೀಕ್ಷಾ ಅವ್ಯವಹಾರ, ಭ್ರಷ್ಟಾಚಾರ ಹಗರಣಗಳು ತೀವ್ರಗೊಂಡಿವೆ. ಭ್ರಷ್ಟ ವ್ಯವಸ್ಥೆ ವಿರುದ್ಧ ಸಿಡಿದೇಳಬೇಕಿದ್ದ ಯುವ ಮನಸ್ಸುಗಳು, ಭ್ರಷ್ಟ ವ್ಯವಸ್ಥೆಯಲ್ಲಿ ಭಾಗಿಗಳಾಗುವಂತೆ ಮಾಡಿವೆ.

ಹೆಚ್ಚಿರುವ ಅಪರಾಧಗಳು:

ನಿರುದ್ಯೋಗ ಹಾಗೂ ಕೃಷಿ-ಕೈಗಾರಿಕೆಯಲ್ಲಿನ ಬಿಕ್ಕಟ್ಟಿನ ಪರಿಣಾಮವಾಗಿ ಯುವಜನತೆಯಲ್ಲಿ ಹತಾಶೆ, ಜಿಗುಪ್ಸೆ ಹೆಚ್ಚಿದೆ. ಒಂದೆಡೆ ಆತ್ಮಹತ್ಯೆಗೆ ಯುವಜನತೆ ಇಳಿದಿರುವಾಗಲೇ ಮತ್ತೊಂದೆಡೆ ಅಪರಾಧಿಕೃತ್ಯಗಳಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚುತ್ತಿದೆ.

1996-2000'ರ ನಡುವೆ 983 ಮಂದಿ ನಿರುದ್ಯೋಗದ ಕಾರಣ, 2703 ಮಂದಿ ಬಡತನದ ಕಾರಣ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 3504 ನಿರುದ್ಯೋಗಿಗಳು 2771 ವಿದ್ಯಾರ್ಥಿಗಳು, 3214 ಸ್ವಯಂ ಉದ್ಯೋಗಿಗಳು, 10182 ಗೃಹಿಣಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂತೆಯೇ ರಾಜ್ಯದೆಲ್ಲೆಡೆ ಕೊಲೆ ಸುಲಿಗೆ, ಕಳ್ಳತನ, ದರೋಡೆ, ಅತ್ಯಾಚಾರ, ಅಪಹರಣದ ಪ್ರಕರಣಗಳು ಹೆಚ್ಚುತ್ತಿವೆ. 2001'ರ ಜನವರಿ 2002'ರ ಜೂನ್ 30'ರ ವರೆಗೆ ರಾಜ್ಯದಲ್ಲಿ 28,482 ಅಪರಾಧ ಪ್ರಕರಣಗಳು ವರದಿಯಾಗಿದ್ದು, 27261 ಪ್ರಕರಣಗಳ ದೃಡಪಟ್ಟಿವೆ ಎಂಬುದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ.

ON-LINE SUPER LOTTO ಲಾಟರಿ ಖರೀದಿಸುವ ಯುವ ಜನತೆಯ ಸಂಖ್ಯೆ ಹೆಚ್ಚಿದೆ. ವರದಕ್ಷಿಣೆಯಂತಹ ಸಾಮಾಜಿಕ ಅನಿಷ್ಟ ಹೆಚ್ಚಿದೆ ಮಾತ್ರವಲ್ಲ, ವರದಕ್ಷಿಣೆ ಕಿರುಕುಳ, ಸಾವು, ವಿವಾಹ ವಿಚ್ಛೇಧನ ಹೆಚ್ಚಿವೆ.

ಅಂತೆಯೇ ವಿದ್ಯಾವಂತ ನಿರುದ್ಯೋಗಿಗಳು ದೊಡ್ಡ ಪ್ರಮಾಣದಲ್ಲಿ ವಿವಿಧ ಕಂಪನಿಗಳ ಮಾರ್ಕೆಟಿಂಗ್, ಮನಿ-ಚೈನ್ ಪಾಲಿಸಿ, ಖಾಸಗಿ ಫೈನಾನ್ಸಿಂಗ್ ಇತ್ಯಾದಿ ವಿವಿಧ ಆಕರ್ಷಕ ಕಮಿಷನ್ ಆಧಾರಿತ ಸರಕುಗಳನ್ನು ಮಾರಾಟ ಮಾಡುವ (ಸೇಲ್ಸ್ ಪ್ರಮೋಷನ್) ವೃತ್ತಿಗಳಿಗೆ ಇಳಿಯಬೇಕಾಗಿ ಬಂದಿದೆ. ಸುಲಭವಾಗಿ- ತ್ವರಿತವಾಗಿ ಸಿರಿವಂತರಾಗುವ ಆಮಿಷ ತೋರಿ ವಿವಿಧ ಬಹುರಾಷ್ಟ್ರೀಯ ಹಾಗೂ ದೇಶೀಯ ಕಂಪನಿಗಳ ಸರಕುಗಳ ಮಾರಾಟಕ್ಕೆ ಒಂದು ಜಾಲವನ್ನು ಈ ಯುವಜನತೆಯನ್ನು ಬಳಸಿ ಸೃಷ್ಟಿಸಲಾಗುತ್ತಿದೆ.

ಸಾಂಸ್ಕೃತಿಕ ಅದಃಪತನದೆಡೆಗೆ:

ಟಿ.ವಿ. ಚಾನೆಲ್, ಖಾಸಗಿ ರೆಡಿಯೋ ಸಿಟಿ-ಎಫ್.ಎಮ್ ಚಾನೆಲ್ ಸಿನಿಮಾಗಳಲ್ಲಿ ಅಶ್ಲೀಲತೆ, ಕೌರ್ಯ, ಕ್ರೈಮ್, ಹಾಗೂ ಸರಕು ಸಂಸ್ಕೃತಿಯನ್ನು ವ್ಯಾಪಕವಾಗಿ ಬಿತ್ತರಿಸಲಾಗುತ್ತಿದ್ದು ಯುವಜನತೆಯನ್ನು ಸರಕು ಸಂಸ್ಕೃತಿ, ಗೂಂಡಾಗಿರಿ, ಕ್ರೈಮ್‌ನೆಡೆಗೆ ದೂಡಿದೆ. ಪ್ರತಿಯೊಬ್ಬ ಹಿರೋಗಳಿಗೂ ಅಭಿಮಾನಿ ಸಂಘಗಳು ರೂಪಿತವಾಗುತ್ತಿವೆ. ಸಿನಿಮಾ ಬಿಡುಗಡೆ ಸಮಯದಲ್ಲಿ ಸ್ಟಾರ್ ಕಟ್ಟುವ ಪರಿಪಾಠಕ್ಕೆ ಸೀಮಿತವಾಗಿದ್ದ ಯುವ ಜನತೆಯ ಕ್ರಿಯಾಶೀಲತೆ, ಬಲಿ ನೀಡುವ (ಕುರಿ-ಕೋಳಿ) ಶಾಸ್ತ್ರಿ ನಡೆಸುವ ಪ್ರವೃತ್ತಿಗಳೆಡೆಗೆ ನಡೆದಿದೆ.

ವಿಜ್ಞಾನ - ತಂತ್ರಜ್ಞಾನದ ಕ್ರಾಂತಿಕಾರಿ ಬದಲಾವಣೆಗಳ ನಡುವೆಯು, ಅಜ್ಞಾನ, ಅಂಧ ವಿಶ್ವಾಸ - ಶ್ರದ್ಧೆ ಹೆಚ್ಚಿಸುವ ಅಣ್ಣಮ್ಮ ಉತ್ಸವ, ಗಣಪತಿ ಉತ್ಸವ ಇತ್ಯಾದಿಗಳಲ್ಲಿ ಯುವಜನತೆಯನ್ನು ತೊಡಗಿಸುವ ಯತ್ನ ನಡೆದಿದೆ.

ಸಮರ್ಪಕ ಯುವಜನ ನೀತಿ ಅಥವಾ ಕ್ರೀಡಾ ನೀತಿಯಿರದೆ, ರಾಜ್ಯದ ವಿವಿಧೆಡೆಗಳಲ್ಲಿ ಕ್ರೀಡಾಂಗಣ, ಅಥವಾ ಕ್ರೀಡಾ ಸಾಮಗ್ರಿಗಳು, ಆಟದ ಮೈದಾನದ ಕೊರತೆಯಿಂದಾಗಿ, ಕ್ರೀಡೆ ಎಂದರೆ ಕಂಬಕ್ಕೆ ಮೂರು ಗೆರೆ ಬರೆದು, ಬ್ಯಾಟ್ ಹಿಡಿದು, ಕ್ರಿಕೆಟ್ ಆಡುವುದೇ ಆಗಿದೆ. ಅನೇಕ ಜಿಲ್ಲೆ ತಾಲೂಕುಗಳಲ್ಲಿ ಕ್ರೀಡೆಗಳನ್ನು ನಡೆಸದೆ ಕ್ರಿಡಾ ಪಟುಗಳ ಪಟ್ಟಿ ಪ್ರಕಟಿಸುವ ಯತ್ನ ನಡೆದಿದೆ.

ರಾಜ್ಯದಲ್ಲಿ ಶಿಕ್ಷಣ-ಯುವಜನ ಸೇವೆ ಮತ್ತು ಕ್ರೀಡೆಗೆ ಶೇ.17ರಷ್ಟು ಹಣ ವಾರ್ಷಿಕ ಬಜೆಟ್‌ನಲ್ಲಿ ಮೀಸಲಿಡಲಾಗುತ್ತಿದ್ದುದನ್ನು ಕಳೆದ ಬಜೆಟ್‌ನಲ್ಲಿ ಶೇ.14ಕ್ಕೆ ಇಳಿಸಲಾಗಿದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಶೇ.25 ರಷ್ಟು ಹಣ ಮೀಸಲಿಡಲಾಗುತ್ತಿದೆ. ಪರಿಣಾಮವಾಗಿ ಸಾಂಸ್ಕೃತಿಕ ಅಧಃಪತನ, ಮೌಢ್ಯತೆಯೆಡೆಗೆ ಯುವಜನತೆಯನ್ನು ದೂಡಲಾಗುತ್ತಿದೆ.


ಜಾತೀವಾದ - ಜಾತಿಗಲಭೆ ತೀವ್ರಗೊಳಿಸುವ ಯತ್ನ:

ಜಾತಿಗೊಂದು ಸಂಘ, ಮಠ ಇತ್ಯಾದಿಗಳು ಹೆಚ್ಚುತ್ತಿವೆ. ರಾಜ್ಯ ಸರ್ಕಾರ ಜಾತಿಯಾಧಾರಿತ ಮಂತ್ರಿ ಮಂಡಲ ರಚನೆ, ವಿ.ವಿ.ಅಕಾಡೆಮಿಗಳಿಗೆ ನೇಮಕ, ಮಠಗಳಿಗೆ ಇಂಜಿನಿಯರಿಂಗ್ -ವೈದ್ಯಕೀಯ ಕಾಲೇಜುಗಳನ್ನು ನೀಡುತ್ತಿರುವ ಹಿನ್ನಲೆಯಲ್ಲಿ ಯುವಜನತೆಯಲ್ಲಿನ ಸಶಕ್ತೀಕರಣದ

ಪುಟ 9 ಕ್ಕೆ

...ರಾಜ್ಯ ಸಮ್ಮೇಳನ

ಏನಾದರೂ ಮಾಡಿ ಹಣ ಗಳಿಸುವ:



ಒಂದೆಡೆ ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ರಾಜ್ಯ ಸರ್ಕಾರ ಮುಚ್ಚಿದೆ. ಅಥವಾ ಮಾರುತ್ತಿದೆ, ಅಂತೆಯೇ ಕೇಂದ್ರ ಸರ್ಕಾರವು ಕೇಂದ್ರ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಖಾಸಗೀಕರಿಸುವ, (ಶೇರು ವಿಕ್ರಯ) ಉದ್ಯೋಗಸ್ಥರನ್ನು ಸ್ವಯಂ ನಿವೃತ್ತಿ ಯೋಜನೆಗಳ ಮೂಲಕ ಹೊರದೂಡುವ ಪ್ರಕ್ರಿಯೆ ನಡೆದಿದೆ. ಸಣ್ಣ ಕೈಗಾರಿಕೆಗಳು, ಮುಕ್ತ ಆಮದು ನೀತಿಯಿಂದ ತತ್ತರಿಸಿ, ಉದ್ಯೋಗಾವಕಾಶಗಳು ಸೀಮಿತವಾಗಿವೆ. ರಾಜ್ಯ ಸರ್ಕಾರ ಹಾರ್‍ನಳ್ಳಿ ರಾಮಸ್ವಾಮಿ ವರದಿಯನ್ನು ಅಂಗೀಕರಿಸಿ, ಉದ್ಯೋಗ ಕಡಿತ ಮಾಡುತ್ತಿರುವಾಗ, ನಿರುದ್ಯೋಗಿಗಳಲ್ಲಿ ಏನಾದರೂ ಮಾಡಿ ಹಣಗಳಿಸುವ ಹಂಬಲ ಹೆಚ್ಚುತ್ತಿದೆ. ಇದಕ್ಕೆ ಪುಷ್ಟಿ ನೀಡುವ ಪರಿಸ್ಥಿತಿಯನ್ನು ಉದಾರೀಕರಣ ಆಧಾರಿತ ಆರ್ಥಿಕ ನೀತಿಯು ಸೃಷ್ಟಿಸಿದೆ. ಪರಿಣಾಮವಾಗಿ

ಅಮೇರಿಕಾ ಮಾಲುಗಾಡಿಗೆ ಭಾರತದ ಡಬ್ಬಿ ಜೋಡಿಸುವ ಬಿಜೆಪಿ ಯತ್ನ ಫಲಿಸದು - ಮಹ್ಮದ್ ಸಲೀಂ

ಭತ್ತದ ಕಣಜ, ಶಕ್ತಿಯ ನಗರವೆಂದೆ ಖ್ಯಾತಿ ಪಡೆದ ರಾಯಚೂರಿನಲ್ಲಿ 2002,ರ ನವೆಂಬರ್ 25 ರಿಂದ 27ರವರೆಗೆ ಜನಪರ ಅಭಿವೃದ್ಧಿ ಉದ್ಯೋಗ ಸೃಷ್ಟಿ ಹಾಗೂ ಕೋಮುಸೌಹಾರ್ದತೆಗಾಗಿ ನಡೆದ ಡಿವೈಎಫ್‌ಐನ 7ನೇ ಕರ್ನಾಟಕ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯನ್ನು ಡಿವೈಎಫ್‌ಐನ ಮಾಜಿ ಅಖಿಲ ಭಾರತ ಕಾರ್ಯದರ್ಶಿ ಹಾಗೂ ಪಶ್ಚಿಮ ಬಂಗಾಳದ ಯುವಜನ ಸೇವಾ ಮತ್ತು ಕ್ರೀಡಾ ಸಚಿವರಾದ ಮಹ್ಮದ್ ಸಲೀಂ ಉದ್ಘಾಟಿಸಿದರು.

ನಮಾಜ್ ಮಾಡಲು ಘಳಿಗೆ, ನಕ್ಷತ್ರ ಚಂದ್ರ ನೋಡಿ ಮಾಡಿದರೆ, ಸಂಘ ಪರಿವಾರದ ರಾಮ ಭಕ್ತಿ ಚುನಾವಣೆ ನೋಡಿ ನಡೆಯುತ್ತಿದೆ ಎಂದರು. ಇತ್ತ ನರಹಂತಕ ವೀರಪ್ಪಿನ್‌ನನ್ನು ಹಿಡಿಯಲಾಗದ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರ ವೀರಪ್ಪನ್ ಆಪ್ತ ಕಾರ್ಯದರ್ಶಿಗಳ ರೀತಿ ಮುಖ್ಯಮಂತ್ರಿಗಳು ಕಾರ್ಯನಿರ್ವಹಿಸುವಂತೆ, ವೀರಪ್ಪನ್ ಕಳುಹಿಸುವ ಕ್ಯಾಸೆಟ್ ಸಂದೇಶವನ್ನು ಜನತೆಗೆ ತಲುಪಿಸುವ ಕಾರ್ಯ ನಡೆಸಿದ್ದಾರೆ ಎಂದರು.

ಬಹಿರಂಗ ಸಭೆಗೆ ಮುನ್ನ ಆಕರ್ಷಕ



ರಾಷ್ಟ್ರದ ಯುವಜನತೆಯ ನಿರುದ್ಯೋಗದ ಸಮಸ್ಯೆಗಳನ್ನು ಅದಕ್ಕೆ ಪೂರಕವಾಗಿ ನಿಂತ ರಾಷ್ಟ್ರದ 55 ವರ್ಷಗಳ ವಿವಿಧ ಪಕ್ಷಗಳ ಆಡಳಿತ ನೀತಿಗಳನ್ನು ವಿವರಿಸಿದ ಅವರು, ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಆಶ್ವಾಸನೆ ನೀಡಿದ್ದ ವಾಜಪೇಯಿ ನೇತೃತ್ವ ಬಿಜೆಪಿ ಎನ್.ಡಿ.ಎ ಸರ್ಕಾರ ಲಕ್ಷಾಂತರ ಉದ್ಯೋಗಾವಕಾಶಗಳನ್ನು ಕಡಿತಗೊಳಿಸಿದೆ ಎಂದರು. ಉದಾರೀಕರಣ ಆಧಾರಿತ ಸಾಮ್ರಾಜ್ಯಶಾಹಿ ಜಾಗತೀಕರಣ ನೀತಿಗಳನ್ನು ಜಾರಿಗೆ ತರುತ್ತಿರುವ ವಾಜಪೇಯಿ ಸರ್ಕಾರ ಸಾಮ್ರಾಜ್ಯಶಾಹಿ ಅಮೇರಿಕಾದ ನೀತಿಗಳ ವಿರೋಧಿಸುವಬದಲು, ಅಮೇರಿಕಾದ ಕಿರಿಯ ಪಾಲುದಾರನಾಗಲು ಹೊರಟಿದೆ. ಅಮೇರಿಕಾದ ಮಾಲು ಗಾಡಿಗೆ - ಇಂಜಿನ್‌ಗೆ ತನ್ನ ಡಬ್ಬಿ ಜೋಡಿಸಿ ಮುನ್ನಡೆಯುವ ಯತ್ನ ನಡೆಸಿದೆ. ಈ ನೀತಿಗಳ ಪರಿಣಾಮವಾಗಿ ರಾಷ್ಟ್ರದ ಆರ್ಥಿಕತೆ ದಿವಾಳಿಯತ್ತ ಸಾಗಿದೆ. ಅವರ ಈ ಯತ್ನ ಫಲಿಸದು ಬದಲಾಗಿ ಸಂಕಷ್ಟಗಳನ್ನು ಜನತೆಯ ಮೇಲೆ ಹೊರಿಸಲಿದೆ ಎಂದರು. ಯುದ್ಧೋನ್ಮಾದ ಸೃಷ್ಟಿಸಿ ಯುವಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕೇಂದ್ರ ಸರ್ಕಾರ ನಿರತವಾಗಿದೆ. ಅದಕ್ಕೆ ಪೂರಕವಾಗಿ ಪಾಕಿಸ್ತಾನದ ಮುಷರಫ್ ಆಡಳಿತ ನಿಂತಿದೆ, ವಾಜಪೇಯಿ ಮುಷರಫ್ ನಡುವಿನ WWF ಕುಸ್ತಿ ಬಹಳ ದಿನ ನಡೆಯದು, ಜನತೆ ಶಾಂತಿ ಸೌಹಾರ್ದತೆ ಬಯಸಿದ್ದಾರೆ ಎಂದರು. ಭಯೋತ್ಪಾದಕ ಶಕ್ತಿಗಳ ನಿಗ್ರಹಿಸುವ ಬದಲು ಪ್ರಜಾಸತ್ತಾತ್ಮಕ ಹಕ್ಕುಗಳ ಹರಣ ನಡೆಸಿದೆ. ಕೋಮುವಾದಿ ಜನಾಂಗ ಹತ್ಯೆ ನಡೆಸುವ ಮೋದಿ ಸರ್ಕಾರಕ್ಕೆ ಬೆಂಬಲವಾಗಿ ನಿಂತಿದೆ. ಜನತೆ ಪ್ರಾರ್ಥನೆ ಮಾಡಲು ಪೂಜೆ ಸಲ್ಲಿಸಲು

ಯುವಜನ ರ್‍ಯಾಲಿ ನಡೆಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಯುವಜನತೆ ರಾಯಚೂರಿನ ತುಂಬೆಲ್ಲಾ ಮೆರವಣಿಗೆ ನಡೆಸಿದರು. ರ್‍ಯಾಲಿಯ ಮುಂಭಾಗದಲ್ಲಿ ಗಂಗಾವತಿ ತಾಲೂಕಿನ ಬೇವೂರಿನ ಯುವಜನ ತಂಡದ ಆಕರ್ಷಕ ಡೊಳ್ಳು ಕುಣಿತ ಜನರ ಗಮನ ಸೆಳೆಯಿತು.

ಬಹಿರಂಗ ಸಭೆ ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡಿ ರಾಜ್ಯದ ಬಹುತೇಕ ಜಿಲ್ಲೆಗಳ ಕೈಗಾರಿಕಾ ಕೇಂದ್ರಗಳು ಇಂದು ಕೈಗಾರಿಕಾ ಮರುಭೂಮಿಗಳಾಗಿವೆ. ರಾಜ್ಯದ ವಿದ್ಯುತ್ ಖಾಸಗೀಕರಣ ನೀತಿ ಇದನ್ನು ತೀವ್ರಗೊಳಿಸಿದೆ. ಪರಿಣಾಮವಾಗಿ ನಿರುದ್ಯೋಗ ಪ್ರಮಾಣ ಅಗಾಧವಾಗಿ ಬೆಳೆದಿದೆ, ಅಂತೆಯೇ ಭೂಸುಧಾರಣೆಯ ಕೊರತೆ ಗ್ರಾಮೀಣ ನಿರುದ್ಯೋಗವನ್ನು ತೀವ್ರಗೊಳಿಸಿದೆ ಎಂದರು.

ಸಭೆಯನ್ನು ಉದ್ದೇಶಿಸಿ ಆಂಧ್ರ ಪ್ರದೇಶದ ಸಿಐಟಿಯು, ಅಧ್ಯಕ್ಷರಾದ ಎಂ.ಎ.ಗಫೂರ್, ಡಿವೈಎಫ್ಐ ರಾಜ್ಯ ಉಪಾಧ್ಯಕ್ಷರಾಗಿದ್ದ ಎಸ್.ವೈಗುರುಶಾಂತ್, ಡಿವೈಎಫ್ಐ ಅಖಿಲ ಭಾರತ ಸಹ ಕಾರ್ಯದರ್ಶಿ ಕೆ.ಎನ್.ಬಾಲ ಗೋಪಾಲ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಂ.ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು. ಕೋಲಾರದಿಂದ ರಾಯಚೂರಿಗೆ ಆಗಮಿಸಿದ 'ಅಭಿವೃದ್ಧಿಯೆಡೆಗೆ ಯುವಜನರ ನಡೆ' ಹಾಗೂ ಮಂಗಳೂರಿನಿಂದ - ರಾಯಚೂರಿಗೆ ಆಗಮಿಸಿದ 'ಏಕತೆಯೆಡೆಗೆ ಯುವಜನರ ನಡೆ' ಜಾಥಾವನ್ನು ಬಹಿರಂಗ ಅಧಿವೇಶನದಲ್ಲಿ ಸ್ವೀಕರಿಸಲಾಯಿತು.

ದುಡಿವ ವರ್ಗದ ಹಕ್ಕು ರಕ್ಷಣೆಗಾಗಿ ಜಂಟಿ ಕಾರ್ಮಿಕ ಸಂಘಟನೆಗಳ ರಾಜಭವನ ಚಲೋ

ಲಾಭದಾಯಕವಾಗಿರುವ ಹಾಗೂ ಸಾಮರ್ಥ್ಯಪೂರ್ಣ ಸಾರ್ವಜನಿಕ ವಲಯದ ಕೈಗಾರಿಕೆಗಳ / ಉದ್ದಿಮೆಗಳ ಖಾಸಗೀಕರಣ ನಿಲ್ಲಬೇಕು.

ಕೈಗಾರಿಕಾ ವಿವಾದ ಕಾಯಿದೆ (ಐಡಿಎಸಿಟಿ) ಮತ್ತು ಗುತ್ತಿಗೆ ಕಾಯಿದೆ (CONTRACT LABOUR ACT) ಸೇರಿದಂತೆ ಕಾರ್ಮಿಕರ ಶಾಸನಗಳಲ್ಲಿ ಮಾಲೀಕರ ಪರ ಮತ್ತು ನೌಕರರ ಹಿತಾಸಕ್ತಿಯ ವಿರುದ್ಧದ ತಿದ್ದುಪಡಿಗಳನ್ನು ರದ್ದುಪಡಿಸಬೇಕು.

ಕೈಗಾರಿಕಾ, ಕೃಷಿ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾದ/ ವಿರುದ್ಧವಾದ "ಮುಕ್ತ ಆಮದು ಪ್ರಮಾಣ ನೀತಿ" ಯನ್ನು ರದ್ದುಪಡಿಸಬೇಕು.

ನಿರುದ್ಯೋಗವನ್ನು ಹೆಚ್ಚಿಸುವ, ಉದ್ಯೋಗ ಹೀನತೆಗೆ ಕಾರಣವಾಗುವ ನೀತಿಗಳನ್ನು ಕೈಬಿಡಬೇಕು (ವಿ.ಆರ್.ಎಸ್, ಸಿ.ಆರ್. ಎಸ್ ಮುಂತಾದವು) ಹೆಚ್ಚು ಉದ್ಯೋಗದ ಅವಕಾಶಗಳನ್ನು ಕಲ್ಪಿಸಬೇಕು.

ನಿರುದ್ಯೋಗ ಭತ್ಯೆ ಯೋಜನೆ (ವಿಮಾ ಯೋಜನೆ) ಸೇರಿದಂತೆ, ಸಾಮಾಜಿಕ ಭದ್ರತಾ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ಕೃಷಿ ಕಾರ್ಮಿಕರ ಸುಧಾರಣೆಗಾಗಿ ಸಮಗ್ರ ಶಾಸನ ತರಬೇಕು. ಬೋನಸ್ ನಿಧಿ ಠೇವಣಿಗಳ ಮೇಲಿನ ಬಡ್ಡಿ ದರ ಶೇಕಡ 12ಕ್ಕೆ ಪುನರ್ ನಿಗದಿಪಡಿಸಬೇಕು ಎಂದು ಆಗ್ರಹಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಭಾಗೀದಾರರಾಗಿರುವ ಕೇಂದ್ರ ಕಾರ್ಮಿಕರ ಸಂಘಟನೆಗಳಾದ ಎಐಟಿಯುಸಿ, ಎಐಸಿಸಿಟಿಯು, ಸಿಐಟಿಯು, ಹೆಚ್‌ಎಂಎಸ್, ಹೆಚ್‌ಎಂಕೆಪಿ, ಐಎನ್‌ಟಿಯುಸಿ, ಟಿಯುಸಿಸಿ, ಯುಟಿಯುಸಿ, ಯುಟಿಯುಸಿ (ಎಲ್‌ಎಸ್), ಬ್ಯಾಂಕ್ ಹಾಗೂ ವಿಮಾ ನೌಕರರ, ರಾಜ್ಯ ಸರ್ಕಾರಿ ನೌಕರರ ಸಂಘಟನೆಗಳು, ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳು, ಸಾರ್ವಜನಿಕ ಕ್ಷೇತ್ರಗಳ ಕೈಗಾರಿಕೆಗಳ ನೌಕರ (ಜೆ.ಎ.ಎಫ್. ಬೆಂಗಳೂರು) ಸಂಘಟನೆಗಳು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳ ವಿರುದ್ಧ ದುಡಿಯುವ ವರ್ಗದ ಎಲ್ಲಾ ಕಾರ್ಮಿಕರನ್ನು ಅಣಿನೆರೆಸಿ, ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಿದರು. 5000ಕ್ಕೂ ಅಧಿಕವಿದ್ದು ರಾಜ್ಯಮಟ್ಟದ ರ್‍ಯಾಲಿಯು ಚಿಕ್ಕಲಾಲ್‌ಬಾಗ್‌ನಿಂದ ಹೊರಟು ರಾಜಭವನ ತಲುಪಿತು, ರಾಜ್ಯಪಾಲರಿಗೆ ಮನವಿ ನೀಡಲಾಯಿತು

ಕಾರ್ಮಿಕರ ಮೇಲೆ ದಾಳಿಗಳು ಹೆಚ್ಚಾಗುತ್ತಿದೆ.



ಎರಡನೇ ಕಾರ್ಮಿಕ ಆಯೋಗದ ಶಿಫಾರಸ್ಸುಗಳು ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತಿವೆ. ಮಾಲೀಕರು ಯಾವ ಸಮಯದಲ್ಲಿ ಬೇಕಾದರೂ ಕಾರ್ಮಿಕರನ್ನು ಕೆಲಸದಿಂದ ತೆಗೆಯಬಹುದು. ಕಾರ್ಮಿಕರಿಗೆ ಕೆಲಸದ ಭದ್ರತೆ ಇಲ್ಲ. ಲಾಭದಾಯಕವಾಗಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ.

ನಿವೃತ್ತಿ ಹೊಂದಿದ ಕಾರ್ಮಿಕರ ಬದುಕು ಶೋಚನೀಯವಾಗಿದೆ. ಉಳಿತಾಯ ಯೋಜನೆಯ ಬಡ್ಡಿದರವನ್ನು ಕಡಿಮೆ ಮಾಡಲಾಗಿದೆ. ಕೇರ್‌ಕರ್ ಸಮಿತಿಯು ತೆರಿಗೆ ಸುಧಾರಣಾ ನೀತಿಯು ಮಧ್ಯಮವರ್ಗದವರ ಮೇಲೆ ಧಾಳಿ ಮಾಡುತ್ತಿದೆ. ಕೇಂದ್ರ ಸರ್ಕಾರದ ಈ ಎಲ್ಲಾ ನೀತಿಗಳ ವಿರುದ್ಧ ದೇಶಾದ್ಯಂತ ಕಾರ್ಮಿಕರು 8ನೇ ಜನವರಿ 2003 ರಂದು ಜೈಲ್ ಭರೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಫೆಬ್ರವರಿ 26, 2003 ರಂದು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ, ಜನವಿರೋಧಿ ನೀತಿ ಮತ್ತು ಹೊಸ ಆರ್ಥಿಕ ನೀತಿಯನ್ನು ಮತ್ತು ಐಎಂಎಫ್ ಮತ್ತು ವರ್ಲ್ಡ್ ಬ್ಯಾಂಕ್ ನೀತಿಯಿಂದ ದೇಶವನ್ನು ರಕ್ಷಿಸುವ ಜವಾಬ್ದಾರಿ ಕಾರ್ಮಿಕ ವರ್ಗದವರದ್ದಾಗಿದೆ ಎಂದು ಮಾತನಾಡಿದ ನಾಯಕರು ಕರೆ ನೀಡಿದರು.

ಡಿಸೆಂಬರ್ 6 ಧರ್ಮನಿರಪೇಕ್ಷತೆ ರಕ್ಷಣೆ ಕೋಮುಸೌಹಾರ್ದತೆಯ ದಿನವನ್ನಾಗಿ ಆಚರಿಸಲು ಕರೆ.

ಆರ್ ಎಸ್.ಎಸ್-ಭಜರಂಗದಳದ ವಿಧ್ವಂಸಕ ಪಡೆಗಳು ಬಾಬ್ರಿ ಮಸೀದಿಯನ್ನು ಉರುಳಿಸಿ ಡಿಸೆಂಬರ್ 6ಕ್ಕೆ ಹತ್ತು ವರುಷಗಳಾಗುತ್ತಿವೆ. ಇದನ್ನೇ ನೆಪವಾಗಿಟ್ಟುಕೊಂಡು ದೇಶದಾದ್ಯಂತ ಈ ಗಲಭೆಗಳನ್ನೆಬ್ಬಿಸಿ ಕೋಮುದಳ್ಳುರಿ ಹಬ್ಬಿಸುವ ಹುನ್ನಾರವನ್ನು ಸಂಘಪರಿವಾರ ಯೋಜಿಸಿದೆ. ಅದಕ್ಕಾಗಿಯೇ ಎಲ್ಲಾ ಕಡೆ ಪ್ರಚಾರ ಪ್ರಕ್ಷೋಭೆ- ರಥಯಾತ್ರೆ, ಭಜನೆ, ಪಥಸಂಚಲನದ ಮೂಲಕ ಕರಾಳ ಕೃತ್ಯವನ್ನು ವಿಜಯೋತ್ಸವವನ್ನಾಗಿ ಆಚರಿಸಲಾಗುತ್ತಿದೆ. ಇನ್ನೊಂದು ಗಂಭೀರ ಅಂಶವೆಂದರೆ ಬಹುತೇಕ ಡಿಸೆಂಬರ್ 6 ರಂದೇ ಈ ವರ್ಷದ 'ರಂಜಾನ್ ಹಬ್ಬ' ಇರುವುದು. ಈಗಾಗಲೇ ಗುಜರಾತ್‌ನಲ್ಲಿ ಫ್ಯಾಸಿಸ್ಟ್ ಕೃತ್ಯಗಳನ್ನು ಹರಿಯಬಿಟ್ಟ 'ಸಂಘಪರಿವಾರ' ಅದನ್ನು ದೇಶವ್ಯಾಪಿ ಹಬ್ಬಿಸಲು 'ಹೊರಟಿರುವುದು ಸ್ಪಷ್ಟ'.

ಈ ಹಿನ್ನೆಲೆಯಲ್ಲಿ: ಆ ಯತ್ನಗಳನ್ನು ಖಂಡಿಸಿರುವ ಸಿಪಿಐ(ಎಂ), ಮತ್ತು ಎಡಪಕ್ಷಗಳು, ಜೆಡಿ(ಎಸ್) ಮುಂತಾದವರು ಧರ್ಮನಿರಪೇಕ್ಷತೆ, ಕೋಮುಸೌಹಾರ್ದತೆ ರಕ್ಷಣೆ ಮತ್ತು ಆರ್.ಎಸ್.ಎಸ್ ನ ಷಡ್ಯಂತ್ರಗಳನ್ನು ಬಯಲಿಗೆಳೆಯಲು ಡಿಸೆಂಬರ್ 6 ರಂದು ದೇಶಾದ್ಯಂತ ಕೋಮು ಸೌಹಾರ್ದತಾ ದಿನವನ್ನಾಗಿ ಆಚರಿಸಲು ಕರೆನೀಡಿವೆ. ಕರ್ನಾಟಕದಲ್ಲಿ ಮಂಗಳೂರು, ಬೆಂಗಳೂರು, ಗುಲಬರ್ಗಾ ಮುಂತಾದೆಡೆ ಸಭೆ, ಮೆರವಣಿಗೆ, ಇತ್ಯಾದಿಗಳು ನಡೆಸಲಾಗುವುದು. ಇದರಲ್ಲಿ ಹಲವಾರು ಬುದ್ದಿಜೀವಿಗಳು, ಸಂಸ್ಥೆಗಳು, ಪಕ್ಷಗಳು ಭಾಗವಹಿಸಲಿವೆ.

ನಿಷೇದಾಜ್ಞೆಯ ಗೆಳೆಯರು

ಪುಟ 3 ರಿಂದ

ಜಿಲ್ಲೆಯ ಘಟಕಗಳಲ್ಲೂ, ಹಳ್ಳಿಗಳ ಘಟಕಗಳೂ ಕೂಡ ದೃಢವಾಗಿ ನಿಂತಿವೆ. ನಿಲುವಿನಲ್ಲಿ ಐಕ್ಯತೆ ಪ್ರತಿಪಾದಿಸಿವೆ. ಇದು ಸಿಪಿಐ(ಎಂ)-ಅದು ಸಿಪಿಐ. ಪ್ರವಾಹದ ಜೊತೆ ಈಜುವುದು ಸುಲಭ. ಆದರೆ ಪ್ರವಾಹದ ಎದುರು ಈಜುವ, ದುಡಿವ ಜನರ ಹಿತ ರಕ್ಷಿಸಲು, ಸಮಚಿತ್ತದ - ದೂರಗಾಮಿ ನಿಲುವನ್ನು ಪ್ರಪಾದಿಸಿ ನಿಲ್ಲಲು ಸಾಮರ್ಥ್ಯ ಬೇಕಾಗುತ್ತದೆ. ಜಲ, ನೆಲ, ಗಡಿ, ಭಾಷೆಗಳು ವಿವಾದಗಳನ್ನು ಎಬ್ಬಿಸಿ ಭಾವೋದ್ರೇಕದ ಸನ್ನಿವೇಶಗಲನ್ನು ಬಳಸಿ ಬೆಳೆದು ಬಿಡಬಹುದೆಂಬುದು ಬೂರ್ಷ್ವಾಪಕ್ಷಗಳ ಲೆಕ್ಕಾಚಾರ. ಆದರೆ ಕಮ್ಯುನಿಸ್ಟ್ ಪಕ್ಷಕ್ಕೆ ಹಾಗಿರುವುದಿಲ್ಲ. ದುಡಿವ ಜನರ ಒಟ್ಟು ಹಿತವೇ ಮೂಲ ಅಂಶ.

ಕಟ್ಟು ಕಥೆಗಳು

ಬಂಡವಾಳಗಾರರ ಪಕ್ಷಗಳು ಜನರಲ್ಲಿ ಭಾವೋದ್ರೇಕ ಹೆಚ್ಚಿಸಿ ದುರ್ಲಾಭ ಹೊಡೆಯಲು ಯತ್ನಿಸಿದರೇ ವಿನಹ ದೀರ್ಘಾವಧಿ ಫಲಿತಾಂಶಗಳನ್ನು ನೋಡಲಿಲ್ಲ. ಮಾತ್ರವಲ್ಲ ಕಾವೇರಿ ನದಿಗುಂಟ, ಅಲ್ಲಿನ ರೈತರು ಸುಖಿಗಳು ಎಂಬ ಕಲ್ಪನೆಯ ಕಥೆಗಳನ್ನು ಹೆಣೆದರು. ಆ ಪ್ರದೇಶದ ಗುಂಟ ಇರುವ ಭೀಕರ ಬರದ ಬಗೆಯಾಗಲಿ, ಹಸಿವಿನ ಸಾವಿನ ವರದಿಗಳನ್ನು ರಾಜ್ಯದ ಮಾಧ್ಯಮಗಳು ಒಳಗೊಂಡು ಈ ಹೋರಾಟಗಾರರು ನಿರ್ಲಕ್ಷಿಸಿದರು. (ನಮ್ಮ ಅದೇ ಸಂಚಿಕೆಯಲ್ಲಿ ವಿವರ ಲೇಖನವಿದೆ. ಗೌಡರು ಓದಿದರೋ ಇಲ್ಲವೋ...) ನಮ್ಮ ರಾಜ್ಯದಲ್ಲಿಯೂ ತೀರಾ ಕಷ್ಟವಿದೆ ನಿಜ, ಇಂತಹ ಸಂದರ್ಭದಲ್ಲಿ ದೇಶದ ರೈತರ ಹಿತ ಕಾಯುವ ಹೊಣೆಗಾರಿಕೆ ಕಮ್ಯುನಿಸ್ಟ್ ಪಕ್ಷಕ್ಕೆ ಇದೆ. ಕಮ್ಯುನಿಸ್ಟ್ ಪಕ್ಷವಾಗಿರುವ ಸಿಪಿಐಗೆ ಇಲ್ಲಿ ಹೆಚ್ಚಿನ ಹೊಣೆಗಾರಿಕೆ ಇರಬೇಕಿತ್ತು. ಬದಲಾಗಿ ಹುಚ್ಚಿನ ಹೊಳೆಯಲ್ಲಿ ಮಿಂದು ಪಾವನವಾಗಿಬಿಡುವ ಸಂಕುಚಿತವಾದ ನಿಲುವನ್ನೇ ಸಿಪಿಐ ತಳೆದಿದ್ದು. ಹೀಗೆ ಕಮ್ಯುನಿಸ್ಟ್ ಚಳುವಳಿ ಬೆಳೆದು ಬಿಡಬಹುದೆಂದು ಲೆಕ್ಕಾಚಾರವೇ ಅವೈಜ್ಞಾನಿಕ. ಮೇಲಾಗಿ ಪಂಜಾಬ್‌ನ ಪ್ರತ್ಯೇಕತಾವಾದೀ ಚಳುವಳಿಯನ್ನು ತೋರಿಸಿ ನಮ್ಮನ್ನು ಹೆದರಿಸಲು ನೋಡುತ್ತಾರೆ ಅವರು.

ಇದರರ್ಥ ಜಲವಿವಾದದಂತಹ ಪ್ರಶ್ನೆಗಳಲ್ಲಿ ತಟಸ್ಥ ಇರಬೇಕೆಂದು ಅರ್ಥ ಅಲ್ಲ. ಆದರೆ ಪಂಜಾಬ್‌ನಲ್ಲಿ ಜಲವಿವಾದವೂ ಒಂದಿತ್ತು ಎಂಬ ಕಾರಣಕ್ಕಾಗಿಯೇ - ಅಂದಿನ ರಾಜಕೀಯ ಸಂದರ್ಭವನ್ನು ಕಡೆಗಣಿಸಿ ಖಲಿಸ್ತಾನ ಚಳುವಳಿಗೂ- ಈ ಕಾವೇರಿಗೂ ನಂಟುಕಲ್ಪಿಸುವುದು ಸರಿಯಲ್ಲ. ಬದಲಾಗಿ ನೀರು ಬಿಡಲಾಗದು ಎಂಬಂತಹ ಸಂಕುಚಿತ ನಿಲುವುಗಳು ಪ್ರತ್ಯೇಕತಾವಾದ ಬೆಳೆಸಲು ಗೊಬ್ಬರವಾಗುತ್ತವೆ.ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಒಂದು ಮೂಲಭೂತ ನಿಲುವು ಅಗತ್ಯವಿದೆ. ಅದರಲ್ಲಿಯೂ ಮಳೆಯಿಲ್ಲದೇ ಸಂಕಷ್ಟವನ್ನು ಉಭಯ ರಾಜ್ಯಗಳೂ ಅನುಭವಿಸುತ್ತಿರುವ ಕ್ಲಿಷ್ಟಕರ ಸಂದರ್ಭದಲ್ಲಿಯಂತೂ ಪರೀಕ್ಷೆಯ ಕಾಲವಾಗಿರುತ್ತದೆ.

ಮೂಲಭೂತ ನಿಲುವು:

ರಾಜ್ಯಗಳ ಹಕ್ಕಿಗೆ ಗೌರವ

ಭಾರತದ ಗಣರಾಜ್ಯದಲ್ಲಿ ಕಾವೇರಿ ನದಿಯು ನಾಲ್ಕು ರಾಜ್ಯಗಳಲ್ಲಿಯೂ ಹರಿಯುತ್ತದೆ. ಹೀಗಾಗಿ ನಾಲ್ಕು ರಾಜ್ಯಗಳಿಗೂ ಸೇರಿದ್ದಾಗಿದೆ. ಬಂದ ಮಳೆಯ ನೀರು ಹರಿಯದೇ ಇದ್ದಲ್ಲಿ ಅದು ನದಿಯಾಗುವುದೂ ಇಲ್ಲ. ನಮ್ಮ ರಾಜ್ಯದಲ್ಲಿ ಆ ನದಿ ನೀರು ಸಂಗ್ರಹಣೆಗೆ ಅಣೆಕಟ್ಟು ಕಟ್ಟಲಾಗಿದೆಯೆಂದ ಮಾತ್ರಕ್ಕೆ (ಉಭಯ ರಾಜ್ಯಗಳಿಗೂ ಸಹಾಯವಾಗಲಿ ಎಂದು ಕಟ್ಟಲಾದದ್ದು) ಈ ನೀರನ್ನು ನಾವೇ ಇಟ್ಟುಕೊಳ್ಳುವ ಹಕ್ಕು ಪ್ರಾಪ್ತವಾಗಿದೆಯೆಂಬುದಾಗಲೀ, ಬೇರೇ ರಾಜ್ಯಗಳಿಗೆ ಏನೂ ಪಾಲೇ ಇಲ್ಲ ಎಂಬುದಾಗಲೀ ಸರಿಯಲ್ಲ. ಮೂಲಭೂತವಾಗಿ ನೀರಿನ ಹಕ್ಕು ನಾಲ್ಕು ರಾಜ್ಯಗಳದ್ದು. ಆದ್ದರಿಂದ ಸಮೃದ್ಧಿಯೇ ಇರಲಿ, ಸಂಕಷ್ಟವೇ ಬರಲಿ ಪರಸ್ಪರರು ಮಾತುಕತೆ ಮೂಲಕ ಒಂದು ಇತ್ಯರ್ಥಕ್ಕೆ ಬರಬೇಕು. ಬರಲಾಗದಿದ್ದರೆ ಕೇಂದ್ರದ ಸರ್ಕಾರ ಮಧ್ಯ ಪ್ರವೇಶಿಸಿ ಸಾಧಿಸಬೇಕು. ಇರುವ ಒಕ್ಕೂಟದ ನೀತಿ-ನಿಯಮ ವಿಧಾನಗಳ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಒಂದು ದೇಶದ ಐಕ್ಯತೆ ಉಳಿಯಬೇಕಾದರೆ ಪರಸ್ಪರರ ಹಕ್ಕು ಗೌರವಿಸಬೇಕು. ಸಹಕಾರ ಏರ್ಪಡಬೇಕು. ನೀರಿಲ್ಲ, ಬಿಡುವುದಿಲ್ಲ ಎಂದು ಒಂದು ರಾಜ್ಯವೇ ನಿರ್ಧರಿಸಲು ಆಗದು. ಹೀಗಾದಲ್ಲಿ ಭಿನ್ನಾಭಿಪ್ರಾಯಗಳೆದ್ದು ಬಡಿದಾಡುವ ಸ್ಥಿತಿ ನಿರ್ಮಾಣವಾದರೆ!? ಅದು ಒಟ್ಟಾರೆ ದುಡಿವ ಜನರ ಹಿತಕ್ಕೇ ಅಪಾಯಕಾರಿಯಾಗುತ್ತದೆ. ತಮಿಳುನಾಡು-ಕರ್ನಾಟಕ ಒಳಗೊಂಡು ಆಳುವವರು, ಅವರ ಬೆಂಬಲಿಗರು ಸಮಸ್ಯೆ ಸುಲಭವಾಗಿ ಇತ್ಯರ್ಥವಾಗಲು ಬಯಸುವುದಿಲ್ಲ. ಅದಕ್ಕಾಗಿಯೇ ಭಾವೋದ್ರೇಕ ಹೆಚ್ಚಿಸಿ-ಬಳಸಬಯಸುತ್ತಾರೆ. ದುಡಿವ ವರ್ಗದ ಪಕ್ಷಗಳು ಅದರಲ್ಲೂ ಕಮ್ಯುನಿಸ್ಟ್ ಪಕ್ಷ ಇಂತಹ ನಿಲುವಿನಲ್ಲಿ ವಿಲೀನ ಆಗಬಾರದು. ಇದರಲ್ಲಿ ಭೂಮಾಲೀಕ, ಬಂಡವಾಳಗಾರರ ಪಕ್ಷಗಳಿಗೂ ಕಮ್ಯುನಿಸ್ಟ್ ಪಕ್ಷಗಳಿಗೆ ಸ್ಪಷ್ಟವಾದ, ಭಿನ್ನವಾದ ನಿಲುವು ಇರಬೇಕಾಗುತ್ತದೆ. (ಅಂದ ಮಾತ್ರಕ್ಕೆ ಎಲ್ಲವನ್ನೂ ವಿರೋಧಿಸಬೇಕೆಂದೇನಿಲ್ಲ) ಅಂತಹ ಒಂದು ಎಚ್ಚರ ಸದಾ ವಹಿಸಬೇಕಾಗುತ್ತದೆ.

ಸಿದ್ಧಾಂತದ ಪಥ್ಯ ಹಿಡಿದಿದ್ದಾರೆಯೇ?

ಆದರೆ ಸಿಪಿಐನ 'ಕ್ರಾಂತಿಕಾರಿ'ಗಳಿಗೆ (ಕಳೆದ ನಮ್ಮ ಲೇಖನದಲ್ಲಿ ಹಾಗೆ ಕರೆಯಲಿಲ್ಲವೆಂದು ಅವರಿಗೆ ಕೋಪವಿದ್ದಂತಿದೆ) ಬಲಪಂಥೀಯ ಪಕ್ಷಗಳನ್ನು 'ಭೂಮಾಲೀಕ, ಬಂಡವಾಳಗಾರರು ಎಂದು ವರ್ಗ ವಿಶ್ಲೇಷಣೆ ಮಾಡುವುದು ಸಹ ಭಾರೀ ಆಕ್ರೋಶ ಹುಟ್ಟಿಸಿಬಿಟ್ಟಿದೆ. (ಇದು ಗೆಳೆತನದ ಪ್ರಭಾವವೋ) ಹಾಗೆ ಗುರುತಿಸುವುದು 'ಭಯಂಕರ ಕ್ರಾಂತಿಯ'ಾಗಿಬಿಡ'ುವ'ುದ'ಂತೆ'! ಮಾರ್ಕ್ಸ್‌ವಾದ-ಲೆನಿನ್ ವಾದದ ಬಗ್ಗೆ ಅದರ ಸೈದ್ಧಾಂತಿಕ ವರ್ಗ ವಿಶ್ಲೇಷಣೆ - ಪ್ರತಿಪಾದನೆಯ ಬಗ್ಗೆ ಈ ಅಂತರ್ರಾಷ್ಟ್ರೀಯ 'ಕ್ರಾಂತಿಕಾರಿ'ಗಳಿಗೆ (ಇದಕ್ಕಾಗಿ ಅವರಿಗೆ ಹಿಂದೆ ವಿಶ್ವಮಟ್ಟದಲ್ಲಿ 'ಪಾರಿತೋಷಕ ಪದಕ' ಸಿಕ್ಕಿದೆ ಬೇರೆ) ಅಪಥ್ಯವಾಗುತ್ತಿದ್ದರೆ ಅವರೇಪ್ರತಿಪಾದಿಸುವ ಕ್ರಾಂತಿಯ ಪಾಡೇನು ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಇನ್ನು ಇಂತಹ ಚರ್ಚೆಗಳು ಐಕ್ಯ ಚಳುವಳಿಗೆ ತೊಂದರೆ ಮಾಡುತ್ತವೆ ಎಂದಿದ್ದಾರೆ ಪಕ್ಷದ ಕಾರ್ಯದರ್ಶಿಯವರು. ಇಂತಹ ಸೈದ್ಧಾಂತಿಕ ಸಂಘಟನಾತ್ಮಕ ಭಿನ್ನಾಭಿಪ್ರಾಯ ಇರುವುದರಿಂದಲೇ ಪ್ರತ್ಯೇಕ ಅಸ್ತಿತ್ವ ಇರುವುದು. 1964 ರಲ್ಲಿ ವಿಭಜನೆ ಅನಿವಾರ್ಯವಾದದ್ದು. ಸಂವಾದವೇ ಬೇಡವೆಂದರೆ ಹೇಗೆ? ಅನೇಕ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯ ಇಟ್ಟುಕೊಂಡೇ, ಇಂದಿನ ದೇಶದ, ರಾಜ್ಯದ ಸಂದರ್ಭದಲ್ಲಿ ಮೂರನೇ ಪರ್ಯಾಯ ರೂಪಿಸಲು ಪ್ರಯತ್ನಿಸುತ್ತಿರುವುದು. ಉಭಯ ಕಮ್ಯುನಿಸ್ಟ್ ಪಕ್ಷಗಳಲ್ಲಿ ತಿಳುವಳಿಕೆ ಹೆಚ್ಚು ಬಲವಾಗಲಿ ಎಂಬ ಆಶಯ ಸಿಪಿಎಂನದು. ಐಕ್ಯ ಕಾರ್ಯಾಚರಣೆಯಲ್ಲಿಯೇ ಅನೇಕ ಭಿನ್ನಾಭಿಪ್ರಾಯಗಳು ಪುನರ್ ಪರಿಶೀಲನೆಗೊಂಡು ಬಲಗೊಂಡು ಐಕ್ಯತೆ ಮೂಡುವುದು. ಕಮ್ಯುನಿಸ್ಟ್ ಪಕ್ಷದ ಶಕ್ತಿ ಇಂತಹ ಸೈದ್ಧಾಂತಿಕ - ರಾಜಕೀಯ ಐಕ್ಯತೆಯೇ ಆಗಿದೆ ಎಂದು ಬೇರೆ ಹೇಳುವ ಅಗತ್ಯವಿಲ್ಲ. ಅಂತಹ ಸೌಹಾರ್ದ ಸಂವಾದನವನ್ನೇ ನಾವು ನಿರೀಕ್ಷಿಸುತ್ತೇವೆ ಹೊರತು ಜಗಳವನ್ನಲ್ಲ. ದುಡಿವ ವರ್ಗದ ಐಕ್ಯತೆಗಾಗಿ- ಅದರ ಮುನ್ನಡೆಗಾಗಿ ಅಷ್ಟೇ.

- ಎಸ್.ವೈ.ಗುರುಶಾಂತ್

ಸಮಸ್ಯೆಗಳೆದುರು ಸಂಘರ್ಷ : ವೈವಿಧ್ಯಮಯ ಕಾರ್ಯಕ್ರಮ ವಿಶೇಷತೆ

ಪುಟ 7 ರಿಂದ

ಹಂಬಲಕ್ಕೆ ಜಾತಿಯಾಧಾರಿತ ಸಂಘ-ಸಂಸ್ಥೆಗಳ ರಚನೆ ಪರಿಹಾರ ಎಂಬಂತೆ ಬಿತ್ತರಿಸಲಾಗುತ್ತಿದೆ. ಪರಿಣಾಮವಾಗಿ ಅಂತಹ ಸಂಘಗಳು ಹೆಚ್ಚುತ್ತಿವೆ.

ಈಗಲೂ ಸಹಾ ರಾಜ್ಯದ ಅನೇಕ ಹಳ್ಳಿಗಳಲ್ಲಿ ಹೋಟೆಲ್‌ಗಳಲ್ಲಿ 2 ಲೋಟ ವ್ಯವಸ್ಥೆ, ಬಾವಿ, ಬೋರ್, ರಸ್ತೆ, ನಿಷೇಧದಂತಹ ಅಸ್ಪೃಶ್ಯ ಆಚರಣೆಗಳು ಜೀವಂತವಾಗಿವೆ. ರಾಜ್ಯದ ವಿವಿದೆಡೆ ದಲಿತರ ಮೇಲಿನ ಹಲ್ಲೆ, ಸಜೀವ ದಹನ ನಡೆದಿದೆ. ಕಂಬಾಲಪಲ್ಲಿ, ವಣೆನೂರು, ಇತ್ತೀಚಿನ ಸಿಂಧನೂರು ತಾಲ್ಲೂಕಿನ ಜವಳಗೇರಾದಲ್ಲಿನ ಗಲಭೆಗಳು ಇದಕ್ಕೆ ಸಾಕ್ಷಿಯಾಗಿವೆ. ಇಂತಹ ಪರಿಸ್ಥಿತಿಯಲ್ಲಿ ದಲಿತ ಸಂಘಟನೆಗಳ ಒಡಕು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ. ಪ್ರಜಾಸತ್ತಾತ್ಮಕ ಯುವಜನ ಚಳುವಳಿಯ ಮಧ್ಯ ಪ್ರವೇಶ ಅತಿ ಜರೂರಾಗಿದೆ.

ಕೋಮುವಾದಿ ಯತ್ನಗಳೆಡೆಗೆ ಯುವಜನತೆಯ ಸೆಳೆಯುವ ಪ್ರಯತ್ನ:

ರಾಜ್ಯದ ವಿವಿಧೆಡೆ ಕೋಮು ಗಲಭೆಗಳನ್ನು ಸೃಷ್ಟಿಸಿ, ಆ ಮೂಲಕ ಕೋಮು ವೈಷಮ್ಯಕ್ಕೆ ರಾಜ್ಯವ್ಯಾಪಿ ಸ್ವರೂಪಿ ನೀಡಲು ಸಂಘ ಪರಿವಾರ, ಬಿಜೆಪಿ, ಬಜರಂಗದಳ, ವಿ.ಹೆಚ್.ಪಿ ಯತ್ನಿಸಿದೆ. ಈ ಗಲಭೆಗಳ ಸೃಷ್ಟಿಗೆ ಹುಟ್ಟಿದ ಹಬ್ಬ, ವಿಜಯುದಶಮಿ, ಗಣೇಶ ಉತ್ಸವ, ಅಣ್ಣಮ್ಮ-ಮಾರಮ್ಮ ಉತ್ಸವ, ಗೋದ್ರಾ, ಗುಜರಾತ್, ಸ್ವಾಮಿನಾರಾಯಣ ದೇವಾಲಯ ಮೇಲಿನ ದಾಳಿ ಮುಂತಾದ ಘಟನೆಗಳ ಬಳಸಿಕೊಳ್ಳುವ ಆ ಮೂಲಕ ಯುವಜನತೆಯನ್ನು ಕೋಮುವಾದಿ ಗಲಭೆಗಳಲ್ಲಿ ತೊಡಗಿಸುವ ಯತ್ನ ನಡೆಸಿದೆ.

ನಿರ್ದಿಷ್ಟ ಊರಿನ ಜನ ಪ್ರಮುಖವಾಗಿ ಯುವಜನ ಈ ಕೋಮುವಾದಿ ಯತ್ನಗಳಿಗೆ ಆಸಕ್ತಿ ತೋರದಿದ್ದರೆ, ಪಕ್ಕದ ಊರಿನ ಯುವಜನತೆಯನ್ನು ಕಳುಹಿಸಿ, ಅನ್ಯ ಧರ್ಮಿಯರ ಮೇಲೆ ಹಲ್ಲೆ, ಆಸ್ತಿ ಪಾಸ್ತಿ - ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ನಡೆಸಿ, ಆ ಮೂಲಕ ಕೋಮು ಗಲಭೆ ಸೃಷ್ಟಿಸುವ ನಿರಂತರ ಯತ್ನದಲ್ಲಿ ಸಂಘ ಪರಿವಾರ, ಪ್ರಮುಖವಾಗಿ ಬಜರಂಗದಳ ನಡೆಸಿದ ರ್‍ಯಾಲಿ, ಜಾಥಾ ಫಲಿಸದಿದ್ದ ಕಾರಣ, ದತ್ತಮಾಲೆ (ಅಯ್ಯಪ್ಪ ಮಾಲೆ ರೀ) ತ್ರಿಶೂಲ ದೀಕ್ಷೆ ನೀಡುವ ಮೂಲಕ ಅಪರಾಧಿ ಕೃತ್ಯಗಳಲ್ಲಿ ಯುವಜನತೆ ತೊಡಗುವಂತೆ ಮಾಡಿದೆ. ಬಜರಂಗದಳದ ರಾಜ್ಯ ಅಧ್ಯಕ್ಷರಿಗೆ 4 ಜಿಲ್ಲೆಗಳಿಂದ ಗಡಿಪಾರು ಮಾಡಲಾಗಿದೆ.

ಅದೇ ಸಮಯದಲ್ಲಿ ಮುಸ್ಲಿಂ ಮೂಲಭೂತವಾದಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಜಮಾತೆ ಇಸ್ಲಾಮಿ ಹಿಂದ್, ಸ್ಟೂಡೆಂಟ್ ಇಸ್ಲಾಮಿಕ್ ಸಂಘಟನೆ (ಎಸ್.ಐ.ಒ) ಕ್ರಿಯಾಶೀಲವಾಗಿ ಚಟುವಟಿಕೆ ನಡೆಸಿರುವುದನ್ನು ಸಮ್ಮೇಳನ ಗುರುತಿಸಿ-ಚರ್ಚಿಸಿತು. ಕೊಡಗಿನ ಹರಿಶ್ಚಂದ್ರ ದೇವಾಲಯ ಭಗ್ನ ಹೆಸರಿನಲ್ಲಿ ನಡೆದ ಕೋಮುದಾಳಿ ಸಮಯದಲ್ಲಿ ಮಧ್ಯಪ್ರವೇಶಿಸಿದಂತೆ, ಪ್ರಜಾಸತ್ತಾತ್ಮಕ ಯುವಜನ ಚಳುವಳಿಯ ಮಧ್ಯ ಪ್ರವೇಶವನ್ನು ಒತ್ತಿ ಹೇಳಿರುವ ಸಮ್ಮೇಳನ ಕೋಮುಸೌಹಾರ್ದತೆಯ ರಕ್ಷಣೆಗೆ, ಪ್ರಜಾಸತ್ತಾತ್ಮಕ ಯುವಜನ ಚಳುವಳಿಯ ಕ್ರಿಯಾಶೀಲತೆಯನ್ನು ತೀವ್ರಗೊಳಿಸಲು ಕರೆ ನೀಡಿದೆ.

ಪ್ರತ್ಯೇಕತೆಯ ಕೂಗಿಗೆ ವಿರೋಧ

ರಾಜ್ಯದ ವಿವಿಧ ಪ್ರದೇಶಗಳ ನಡುವಿನ ಅಸಮಾನ ಬೆಳವಣಿಗೆಯನ್ನು, ರೈಲ್ವೆ ವಲಯ, ಹೈಕೋರ್ಟ್ ಪೀಠದಂತಹ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಆಧಾರವಾಗಿರಿಸಿ ಪ್ರತ್ಯೇಕ ರಾಜ್ಯದ ಕೂಗನ್ನು ಎಬ್ಬಿಸಿರುವ ಪ್ರತ್ಯೇಕತೆಗೆ ವಿರೋಧ ವ್ಯಕ್ತಪಡಿಸಿರುವ ಸಮ್ಮೇಳನ, ಸಮಗ್ರ ಕರ್ನಾಟಕದ ರಕ್ಷಣೆಗೆ, ಉದ್ಯೋಗ ಸೃಷ್ಟಿಯಾಧಾರಿತ ಜನಪರ ಅಭಿವೃದ್ಧಿಗೆ ಒತ್ತಾಯಿಸಿದೆ. ಸಮರ್ಪಕ ಭೂಸುಧಾರಣೆ ಹಾಗೂ ಕೈಗಾರಿಕರಣದ ಮೂಲಕ ಅಲ್ಲಿನ ನಿರುದ್ಯೋಗ ನಿವಾರಿಸದೆ ಪ್ರಾದೇಶಿಕ ಅಸಮಾನತೆ ನಿವಾರಣೆ ಸಾಧ್ಯವಾಗದೆಂದಿದೆ. ಯುವಜನತೆಯ ಏಕತೆ ಹೊಡೆಯುವ ಇಂತಹ ಯತ್ನಗಳ ವಿರುದ್ಧ ವ್ಯಾಪಕ ಪ್ರತಿರೋಧ ರೂಪಿಸಲು ನಿರ್ಣಯಿಸಿದೆ.

ಕಾವೇರಿ- ಕೃಷ್ಣಾದಂತಹ ನದಿ ನೀರಿನ ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮವಹಿಸದ ಸಂಬಂಧಿತ ಸರ್ಕಾರಗಳು ಯುವಜನತೆಯ ನಡುವೆ ಅನಾಕ್ರಮಣಶೀಲತೆ ಬೆಳೆಸುವ ಭಾಷಾಂಧ ಶಕ್ತಿಗಳ ಕ್ರಿಯಾಶೀಲತೆಗೆ ಅನುವುಗೊಳಿಸಿದೆ.

ಪರಿಸರ ರಕ್ಷಣೆ ವಿಷಯದಲ್ಲಿ ಸಮರ್ಪಕ ಕ್ರಮವಹಿಸದ ಸರ್ಕಾರ, ಸುಪ್ರಿಂ ಕೋರ್ಟ್ ತೀರ್ಪಿನ ಜಾರಿ ನಿಟ್ಟಿನಲ್ಲಿ ಕರಾವಳಿ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಅರಣ್ಯ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸಲು ಯತ್ನಿಸಿದೆ. ಅದರ ವಿರುದ್ಧ ವ್ಯಾಪಕ ಪ್ರತಿಭಟನೆ ನಡೆದಿದೆ. ಯುವಜನತೆ ಪಾಲ್ಗೊಂಡಿದ್ದಾರೆ ಹೋರಾಟವನ್ನು ತೀವ್ರಗೊಳಿಸಬೇಕಿದೆ. ಕುದುರೆಮುಖ ಗಣಿಗಾರಿಕೆ ವಿರುದ್ಧ - ತುಂಗಾ ಮೂಲ ಉಳಿಸುವ ಹೆಸರಿನಲ್ಲಿ ಹೋರಾಟಗಳನ್ನು ಸಂಘಟಿಸಲಾಗುತ್ತಿದ್ದು, ಉದ್ಯೋಗ ಸೃಷ್ಟಿ ಕೈಗಾರಿಕೀಕರಣಕ್ಕೆ ಇದ್ದ ಸೀಮಿತ ಅವಕಾಶವನ್ನು ಇಲ್ಲದಾಗಿಸುವ ಯತ್ನವನ್ನು ಪರಿಸರ ಸಂರಕ್ಷಣೆ ಹೆಸರಿನಲ್ಲಿ ನಡೆಸಲಾಗಿದೆ ಎಂದು ಸಮ್ಮೇಳನ ಗುರುತಿಸಿದೆ.

ನಿರುದ್ಯೋಗದ ವಿರುದ್ಧ - ನಿರುದ್ಯೋಗ ಭತ್ಯೆಗೆ ಒತ್ತಾಯಿಸಿ ವ್ಯಾಪಕ ಚಳುವಳಿ ರೂಪಿಸಲು ನಿರ್ಧಾರ:

ರಾಜ್ಯದ ಯುವಜನತೆಯ ಪರಿಸ್ಥಿತಿ, ರಾಷ್ಟ್ರೀಯ ಅಂತರಾಷ್ಟ್ರೀಯ ಬೆಳವಣಿಗೆಗಳನ್ನು ಪರಿಶೀಲಿಸಿದ ಸಮ್ಮೇಳನ ನೋಂದಾಯಿತ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆಗೆ ಒತ್ತಾಯಿಸಿ, ನೇಮಕಾತಿಗಳಲ್ಲಿ ಸ್ವಜನಪಕ್ಷಪಾತ, ಭ್ರಷ್ಟಾಚಾರದ ವಿರುದ್ಧ ಅರ್ಜಿ ಶುಲ್ಕ ಪೋಸ್ಟಲ್ ಆರ್ಡರ್ ಬೆಲೆ ಇಳಿಕೆಗೆ ಒತ್ತಾಯಿಸಿ ರಾಜ್ಯವ್ಯಾಪಿ ಹೋರಾಟ ರೂಪಿಸಲು, ಚಳುವಳಿ ಸ್ವರೂಪ ನೀಡಲು ಸಮ್ಮೇಳನ ನಿರ್ಧರಿಸಿದೆ.

ಅಂತೆಯೇ ಕೋಮುವಾದದ ವಿರುದ್ಧ ಯುವಜನತೆಯನ್ನು ಸನ್ನದ್ದುಗೊಳಿಸಲು ಕಾರ್ಯಾಗಾರ, ಜಾತಿಯತೆ- ಅಸ್ಪೃಶ್ಯತೆ ವಿರೋಧಿಸಿ ರಾಜ್ಯ ಸಮಾವೇಶ ಸಂಘಟಿಸಲು ನಿರ್ಧರಿಸಿದೆ.

ಯುವಜನತೆಯಲ್ಲಿ ಶೇ.50 ರಷ್ಟಿರುವ ಯುವತಿಯರ ಶೋಷಣೆ ವ್ಯಾಪಕವಾಗಿದ್ದು, ಸರಕು ಸಂಸ್ಕೃತಿಯ ವಾಹಕರಾಗಿ ಬಳಸಲಾಗುತ್ತಿದ್ದು, ಕಡಿಮೆ ಸಂಬಳ ನೀಡಿ ಹೆಚ್ಚು ಲಾಭಗಳಿಸಲು ಇರುವ ಸಾಧನವಾಗಿ ಬಳಸಲಾಗುತ್ತಿದೆ. ಹೆಚ್ಚಿರುವ ವರದಕ್ಷಿಣೆ, ಅತ್ಯಾಚಾರ, ಕಿರುಕುಳ ಆಧಾರಿಸಿ ಯುವತಿಯರ ಹೋರಾಟ ರೂಪಿಸುವ ನಿಟ್ಟಿನಲ್ಲಿ ರಾಜ್ಯಮಟ್ಟದ ಯುವತಿಯರ ಸಮಾವೇಶ ಸಂಘಟಿಸಲು ಸಮ್ಮೇಳನ ನಿರ್ಧರಿಸಿದೆ.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ, ನೀರಾವರಿ ಯೋಜನೆಗಳ ಅನುಷ್ಠಾನ, ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಒತ್ತಾಯಿಸಿ - ಪ್ರತ್ಯೇಕ ರಾಜ್ಯ ವಿರೋಧಿಸಿ, ಶಿಕ್ಷಣದ ವ್ಯಾಪಾರೀಕರಣ ಕೋಮುವಾದೀಕರಣ ವಿರೋಧಿಸಿ, ಪ್ರಜಾಸತ್ತಾತ್ಮಕ ಹಕ್ಕುಗಳ ಹರಣ ವಿರೋಧಿಸಿ, ಸರ್ಕಾರಿ ಕಛೇರಿಗಳಲ್ಲಿನ ವ್ಯಾಪಕ ಭ್ರಷ್ಟಾಚಾರ ವಿರೋಧಿಸಿ ಮಾಹಿತಿ ಸಿಂಧು ಶಿಕ್ಷಕರ ಹೋರಾಟ, ಅರಣ್ಯ ಅತಿಕ್ರಮಣದಾರರ ಹೋರಾಟ ಬೆಂಬಲಿಸಿ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಕ್ರಿಯಾಶೀಲ ಚಟುವಟಿಕೆಗಳ ಸಕ್ರಿಯಗೊಳಿಸಲು ರಾಜ್ಯವ್ಯಾಪಿ ಚಳುವಳಿ ಸ್ವರೂಪಕ್ಕೆ ಒತ್ತಾಸೆಯಾಗಿ ನಿಂತ ಚರ್ಚೆ

ರಾಜ್ಯದ 22 ಜಿಲ್ಲೆಗಳಿಂದ ಆಗಮಿಸಿದ್ದ, 18 ಯುವತಿಯರು, 4 ಎಸ್.ಎಫ್.ಐ ನ ಹಾಗೂ ಒಬ್ಬರು ಜೆ.ಎಮ್.ಎಸ್ ನ ಸೌಹಾರ್ದ ಪ್ರತಿನಿಧಿಗಳನ್ನು ಒಳಗೊಂಡಂತೆ 264 ಪ್ರತಿನಿಧಿಗಳು ಪ್ರತಿನಿಧಿ ಅಧಿವೇಶನದಲ್ಲಿ ಭಾಗವಹಿಸಿದ್ದರು. ಕಾಂ. ಶಾಂತಾರಾಮ್ ನಾಯಕ್‌ರವರು ಧ್ವಜಾರೋಹಣದೊಂದಿಗೆ, 26 ರಂದು ಬೆಳಿಗ್ಗೆ ಪ್ರಾರಂಭವಾದ ಪ್ರತಿನಿಧಿ ಅಧಿವೇಶನವನ್ನು ನಿವೃತ್ತ ನ್ಯಾಯಮೂರ್ತಿ ಶ್ರೀ.ಹೆಚ್.ಜಿ.ಬಾಲಕೃಷ್ಣರವರು ಉದ್ಘಾಟಿಸಿದರು.

ಕಾಂ.ಕೆ.ಮಹಾಂತೇಶ್ ಮಂಡಿಸಿದ ಕರಡು ವರದಿಯ ಮೇಲೆ ಸುಮಾರು 5 ಗಂಟೆಗಳ ಕಾಲ ಚರ್ಚಿಸಿದ ವಿವಿಧ ಜಿಲ್ಲೆಗಳ 48 ಸಂಗಾತಿಗಳು, ತಮ್ಮ ಸ್ಥಳೀಯ ಅನುಭವಗಳೊಂದಿಗೆ, ವರದಿಯಲ್ಲಿನ ಅಂಶಗಳನ್ನು ಪುಷ್ಠಿಕರಿಸಿ ಬೆಂಬಲಿಸಿದರು.

ಕೋಲಾರದಲ್ಲಿ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ನಡೆಸಿದ, 15 ದಿನಗಳ "ಜನತೆಯೆಡೆಗೆ ಯುವಜನರ ಆಂದೋಲನ" ಜಾಥಾದ ಅನುಭವ, ನಡೆಸಲಾದ ಭಗತ್‌ಸಿಂಗ್ ತಂಡ ಹಾಗೂ ಸರ್ ಎಂ.ವಿ.ತಂಡದ ಹೆಸರಿನ ಜಾಥಾ, ಬೃಹತ್ ಯುವಜನರ ರ್‍ಯಾಲಿ, ವಿಚಾರ ಸಂಕಿರಣ, ಜನತೆಯ ಬೆಂಬಲ ರಾಜ್ಯದ ವಿವಿಧ ಜಿಲ್ಲೆಗಳಿಗೆ ಮಾದರಿಯಾಗಿದೆ

ಬಳ್ಳಾರಿ ಜಿಲ್ಲೆಯಲ್ಲಿನ ಆಶ್ರಯ ಮನೆ, ಸ್ಲಂ ಯುವಜನರ ಹೋರಾಟ, ಬೆಂಗಳೂರಿನಲ್ಲಿ ನಡೆಸಲಾದ ಸ್ಲಂ ಯುವಜನರ ಹೋರಾಟ, ಸಂಕ್ರಾಂತಿ ಹಬ್ಬದ ಪ್ರಯುಕ್ತ ಸಾಮೂಹಿಕ ಪೊಂಗಲ್ ತಯಾರಿ -ಊಟ, ಯುವಜನತೆ ಮತ್ತು ಅಪರಾಧ ಕುರಿತ ವಿಚಾರ ಸಂಕಿರಣ, ಹಾಸನದಲ್ಲಿ ಮನೆಪಾಠ ವಿರುದ್ಧ ಚರ್ಚಾ ಗೋಷ್ಠಿ - ಮಧ್ಯಪ್ರವೇಶ - ಹೋರಾಟ. ರಾಯಚೂರಿನಲ್ಲಿ ನಡೆಸಲಾದ ವಾಲಿಬಾಲ್ ಸ್ಪರ್ಧೆ, ದೊಡ್ಡ ಬಳ್ಳಾಪುರದ ಗಾಳಿಪಟ ಸ್ಪರ್ಧೆ, ಕುಂದಾಪುರದಲ್ಲಿನ 'ದೇವೀರಿ' ಸಿನಿಮಾ ಪ್ರದರ್ಶನ, ಮಂಗಳೂರಿನ ಜಾದೂ ಪ್ರದರ್ಶನ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದಿರುವ ವೈವಿದ್ಯಮಯ ಚಟುವಟಿಕೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ಕೊಡಗಿನಲ್ಲಿ ಕೋಮು ಸೌಹಾರ್ದತೆಗಾಗಿ - ಕೋಮುವಾದದ ವಿರುದ್ಧ ಮಧ್ಯಪ್ರವೇಶ, ಯುವತಿಯ ಅಪಹರಣದ ವಿರುದ್ಧ ಹೋರಾಟ. ಕುಂದಾಪುರದಲ್ಲಿ ಏಡ್ಸ್ ಇಂಜೆಕ್ಷನ್ ಚುಚ್ಚುವಿಕೆ ವದ್ದಂತಿ ವಿರುದ್ಧ ಮಧ್ಯಪ್ರವೇಶ ಮಂಗಳೂರಿನಲ್ಲಿ ಸಂಗಾತಿ ಶ್ರೀನಿವಾಸ್ ಬಜಾಲ್ ಹತ್ಯೆ ವಿರುದ್ಧ ಹೋರಾಟ, ಕುದುರೆಮುಖ ಗಣಿಗಾರಿಕೆ ವಿರೋಧಿ ಚಳುವಳಿ ವಿರುದ್ಧ ಮಧ್ಯಪ್ರವೇಶ, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ ಒಂದು ವಾರದ ಅಧ್ಯಯನ ಶಿಬಿರ, ಜಿಲ್ಲಾಮಟ್ಟದ ಜಾಥಾ, ಉತ್ತರಕನ್ನಡ ಜಿಲ್ಲೆಯ ಅತಿಕ್ರಮಣದಾರರ ಹೋರಾಟದಲ್ಲಿ ಜಾಥಾ, ಕೊಡಗಿನ 'ಕಾಫಿ ಉಳಿಸಿ' ಜಾಥಾ, ಗ್ರಾಮೀಣ ಕೃಪಾಂಕಕ್ಕಾಗಿ ಎಸ್.ಎಫ್.ಐ ನೊಂದಿನ ಹೋರಾಟ ರಾಜ್ಯವ್ಯಾಪಿ ರ್‍ಯಾಲಿ, ಗಜೇಂದ್ರಗಡದ ಹೋರಾಟ- ಜೈಲು ವಾಸ.

ಬೆಂಗಳೂರಿನ 'ಯುವ ಚಿಂತನ' ಅಧ್ಯಯನ ಶಿಬಿರ ಮಳವಳ್ಳಿಯಲ್ಲಿನ ರೇಷನ್ ಕಾರ್ಡ್‌ಗೆ ಕಳಪೆ ಧಾನ್ಯ ವಿತರಣೆ ವಿರುದ್ಧ ಹೋರಾಟ, ಉದ್ಯೋಗ ಶಿಕ್ಷಣದ ಹಕ್ಕಿಗಾಗಿ 24 ತಾಸುಗಳ ರಾಜ್ಯವ್ಯಾಪಿ, ಧರಣಿ, ವಿಧಾನ ಸೌಧ ಚಲೋ ಪಾರ್ಲಿಮೆಂಟ್ ಚಲೋದಲ್ಲಿ ರಾಜ್ಯದ ಯುವಜನರ ಭಾಗವಹಿಸುವಿಕೆ ರಾಜ್ಯದ ವಿವಿದೆಡೆಗಳಲ್ಲಿ ನಡೆದಿರುವ ಡಿ.ವೈ.ಎಫ್.ಐನ ಕ್ರಿಯಾಶೀಲ ಚಟುವಟಿಕೆಗಳನ್ನು ಸೂಚಿಸಿವೆ.

ರಾಜ್ಯದಲ್ಲಿ ವಿವಿಧ ಯುವಜನ ಸಂಘಟನೆಗಳಿದ್ದರು, ಬಜರಂಗ ದಳ, ಎಬಿವಿಪಿ, ಬಿಜೆಪಿ ಯುವ ಮೋರ್ಚಾದಂತಹ ಕೆಲವು ವಿಭಜಕ ಕೋಮುವಾದಿ ಸಂಘಟನೆಗಳಾದರೆ, ಮತ್ತೆ ಕೆಲವು ಪ್ರತಿಗಾಮಿ ಜಾತಿವಾದಿ ಯುವಜನ ಸಂಘಗಳಾಗಿವೆ. ಉಳಿದಂತೆ ಯುವ ಕಾಂಗ್ರೆಸ್, ಯುವ ಜನತಾದಳ ಉದಾರೀಕರಣ ಆಧಾರಿತ ನೀತಿಗಳ ಬೆಂಬಲಿಗರಾಗಿ ನಿಂತಿದ್ದಾರೆ. ಇನ್ನುಳಿದ ಪ್ರಗತಿಪರ ಸಂಘಟನೆಗಳೆಂದೇಳಿಕೊಳ್ಳುವ ಕೆಲವು ರಾಜ್ಯದೆಲ್ಲೆಡೆ ಇರದೆ ನಿಷ್ಕ್ರಿಯವಾಗಿವೆ. ಇಂತಹ ಸಮಯದಲ್ಲಿ ಡಿವೈಎಫ್‌ಐನಂತಹ ಪ್ರಜಾಸತ್ತಾತ್ಮಕ ಯುವಜನ ಚಳವಳಿಯ ಕ್ರಿಯಾಶೀಲ ಚಟುವಟಿಕೆಗಳನ್ನು ಸಕ್ರಿಯಗೊಳಿಸಿ - ರಾಜ್ಯವ್ಯಾಪಿ ಸ್ವರೂಪ ನೀಡುವ ಒತ್ತಾಸೆಯನ್ನು ಸಮ್ಮೇಳನ ತೋರಿದೆ. ಈ ನಿಟ್ಟಿನಲ್ಲಿ ಇರುವ ದೌರ್ಬಲ್ಯಗಳನ್ನು ಗುರುತಿಸಿರುವ ಸಮ್ಮೇಳನ ಸಾಮೂಹಿಕ ಸದಸ್ಯತ್ವ ಕ್ರಿಯಾಶೀಲ ಘಟಕ, ತಾಲ್ಲೂಕು ಜಿಲ್ಲಾ ಸಮಿತಿಗಳ ನಿರಂತರತೆ, ರಾಜ್ಯ ಕೇಂದ್ರವನ್ನು ಬಲಿಷ್ಠಗೊಳಿಸುವ, ರಾಜ್ಯವ್ಯಾಪಿ ಹೋರಾಟ ರೂಪಿಸುವ, ಕಾರ್ಯಕರ್ತರನ್ನು ತರಬೇತುಗೊಳಿಸಲು ಒತ್ತು ನೀಡಲು ನಿರ್ಧರಿಸಿದೆ.

ತ್ಯಾಗ ಬಲಿದಾನಗಳೊಂದಿಗೆ ಗಳಿಸಿದ ಸಾಧನೆ ರಾಷ್ಟ್ರದ ಪ್ರಜಾಸತ್ತಾತ್ಮಕ ಯುವಜನ ಚಳುವಳಿ

ಪ್ರಪಂಚದ ಬಹುತೇಕ ಪ್ರಮುಖ ಬೆಳವಣಿಗೆಗಳ ಹಿಂದೆ ಯುವಜನತೆಯ ಪಾತ್ರ ಬಹುದೊಡ್ಡದಾಗಿದೆ. ಸೋವಿಯತ್ ರಷ್ಯಾದ ಅಕ್ಟೋಬರ್ ಕ್ರಾಂತಿಯ ಹಿಂದೆ ದೊಡ್ಡ ಪ್ರಮಾಣದ ಯುವಜನತೆ ಅಣಿನೆರೆದ ಉದಾಹರಣೆ ನಮ್ಮ ಮುಂದೆ ಇರುವಾಗಲೇ ಹಿಟ್ಲರನ ಫ್ಯಾಸಿಸಂ ಹಿಂದೆಂದೂ ದೊಡ್ಡ ಪ್ರಮಾಣದ ಯುವಜನತೆ ಅಣಿನೆರೆದ ಉದಾಹರಣೆ ಇತಿಹಾಸದಲ್ಲಿದೆ. ಇಂತಹ ಯುವಜನತೆಯನ್ನು ಪ್ರಜಾಸತ್ತಾತ್ಮಕ ಯುವಜನ ಚಳುವಳಿಗೆ ಅಣಿನೆರೆಸುವ ಮಹತ್ತರ ಕರ್ತವ್ಯ ಡಿವೈಎಫ್‌ಐ ಸಂಗಾತಿಗಳದ್ದಾಗಿದೆ. 1980 ರಲ್ಲಿ ಡಿವೈಎಫ್‌ಐ ಪ್ರಾರಂಭವಾದಾಗ ಕೇವಲ 12 ಲಕ್ಷ ಯುವಜನತೆಯ ಸದಸ್ಯತ್ವದೊಂದಿಗೆ ಪ್ರಾರಂಭಗೊಂಡು ಇಂದು ಒಂದು ಕೋಟಿ 17 ಲಕ್ಷ ಸದಸ್ಯತ್ವಹೊಂದಿದೆ. ಇಂತಹ ಸಾಧನೆಗೆ ರಾಷ್ಟ್ರದ ಉದ್ದಗಲಕ್ಕೂ ಡಿವೈಎಫ್‌ಐನ ಸಂಗಾತಿಗಳ ತ್ಯಾಗ-ಬಲಿದಾನ ಕಾರಣವಾಗಿದೆ. ಅಂತಹ ತ್ಯಾಗ ಬಲಿದಾನದಿಂದ ನಿರ್ಮಿತವಾಗಿರುವ ಪ್ರಜಾಸತ್ತಾತ್ಮಕ ಯುವಜನ ಚಳುವಳಿಯನ್ನು ತೀವ್ರಗೊಳಿಸುವ ಹೊಣೆಗಾರಿಕೆ ಡಿವೈಎಫ್‌ಐ ಸಂಗಾತಿಗಳದಾಗಿದೆ ಎಂದು ಡಿವೈಎಫ್‌ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪಸ್ ಸಿನ್ಹಾ ಸಮ್ಮೇಳನದ ಸಮಾರೋಪ ಮಾತುಗಳನ್ನಾಡುತ್ತಾ ನುಡಿದರು.



ಸಾವಿರಾರು ಯುವಜನ ರ್‍ಯಾಲಿ

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕರಲ್ಲೊಬ್ಬರಾದ ಸಿ.ಬಿ.ಮೊಣ್ಣಯ್ಯನವರ ಬಗ್ಗೆ ಬಹಳಷ್ಟು ಜನ ಅರಿಯದ ಹೊಸ ಸಂಗತಿಗಳನ್ನು,ಓಡಾಡಿ-ಸಂಗ್ರಹಿಸಿ ಇಲ್ಲಿ ನೀಡಿದ್ದಾರೆ ಡಾ. ಐ.ಆರ್.ದುರ್ಗಾಪ್ರಸಾದ್. ಇವು ಹಿರಿಯ ಕಮ್ಯುನಿಸ್ಟ್ ನಾಯಕನ ಅರಿಯದ ಕೆಲ ಮುಖ ಮುಗ್ಗಲುಗಳನ್ನು ಪರಿಚಯಿಸುತ್ತದೆ

ಚಕ್ಕೇರ ಬಿದ್ದಪ್ಪ ಮೊಣ್ಣಯ್ಯ

ಕಮ್ಯುನಿಸ್ಟ್ ನಾಯಕನ ಅರಿಯದ ಮುಖ

ಇತ್ತೀಚಿನ ತನ್ನ 92ನೇ ವಯಸ್ಸಿನಲ್ಲಿ ನಿಧನರಾದ ಕಾ. ಚಕ್ಕೇರ ಬಿದ್ದಪ್ಪ ಮೊಣ್ಣಯ್ಯನವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು. ಸಾಮ್ರಾಜ್ಯಶಾಹಿಗಳ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಅದ ಅನುಭವದಿಂದ ಕಮ್ಯುನಿಸ್ಟ್‌ರಾದವರು. ಹೀಗೆ ಅವರು ಕೊಡಗಿನಲ್ಲಿ, ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕ ಸದಸ್ಯರಲ್ಲೊಬ್ಬರಾದರು.

ಕಾದು ಮದುವೆಯಾದ ಕೊಡವತಿ

ಇವರ ಪತ್ನಿ ಶ್ರೀಮತಿ ಸರಸ್ವತಿಯವರನ್ನು ಭೇಟಿಯಾಗಿ ಅವರ ಗಂಡನ ಬಗ್ಗೆ ವಿಚಾರಿಸಿದಾಗ ಆಕೆ "ಅವರು ತುಂಬಾ ಕಷ್ಟ ಅನುಭವಿಸಿದವರು" ಎಂದು ಮಾತನ್ನಾರಂಭಿಸಿದರು. ಪಕ್ಷದ ಪತ್ರಿಕೆಗಳನ್ನು ಮಾರುತ್ತಾ ತಮ್ಮ ಮನೆಗೂ ಬರುತ್ತಿದ್ದ ಮೊಣ್ಣಯ್ಯನವರನ್ನು ನೆನಪಿಸಿಕೊಂಡು "1948ರಲ್ಲಿ ನನ್ನ ಅವರ ವಿವಾಹವನ್ನು ಹಿರಿಯರು ನಿಶ್ಚಯಿಸಿದರು. ಆದರೆ ಅಷ್ಟರಲ್ಲಿ ತೆಲಂಗಾಣ ಹೋರಾಟದ ಸಂದರ್ಭ ಅವರು ಜೈಲಿಗೆ ಹೋಗಬೇಕಾಯಿತು. ಅವರು ಹೊರಬಂದದ್ದು 1952ರಲ್ಲಿ. ಅನಂತರ ನಮ್ಮ ವಿವಾಹವಾಗಿ ನಾವು ಗೋಣಿಕೊಪ್ಪಲಿನಲ್ಲಿ ಮನೆಮಾಡಿದೆವು. ಅವರು ಪಕ್ಷದ ಕೆಲಸಕ್ಕೆಂದು ಮೈಸೂರು, ಬೆಂಗಳೂರು, ಬಳ್ಳಾರಿಗಳಿಗೆಲ್ಲಾ ಹೋಗುತ್ತಿದ್ದರು" ಎಂದು ವಿವರಿಸಿದರು. ಆಶ್ಚರ್ಯಚಕಿತನಾಗಿ ನಾನು ಅವರನ್ನು ಕೇಳಿದೆ" 4 ವರ್ಷ ಅವರಿಗಾಗಿಯೇ ಕಾದಿರಾ? ಕಮ್ಯುನಿಸ್ಟನೆಂದರೆ ಇಂದಿಗೂ ಸಾಮಾನ್ಯವಾಗಿ ಹೆಣ್ಣುಮಕ್ಕಳು ಹೆದರುತ್ತಾರೆ. ಹಾಗಿರುವಾಗ ಅಂದಿನ ದಿನಗಳಲ್ಲಿ ಜೈಲು ಸೇರಿದ ಕಮ್ಯುನಿಸ್ಟನಿಗಾಗಿ ನೀವು ಹೇಗೆ ಕಾದಿರಿ? ಯಾಕಾಗಿ ಕಾದಿರಿ? ನಿಮಗೆ ಹೇಗೆ ಧೈರ್ಯ ಬಂತು?"


ನನ್ನ ಈ ಪ್ರಶ್ನೆಗೆ "ನನ್ನ ಮದುವೆ ಮೊದಲೇ ಆಗಿಬಿಟ್ಟಿದ್ದರೆ ಕಾಯಲೇಬೇಕಾಗುತ್ತಿತ್ತಲ್ಲ? ಆದರೆ ಈಗ ಕಾಯಬೇಕಾಗಿದೆ ಅಷ್ಟೆ ಎಂದು ನನ್ನ ಸಹೋದರರಿಗೂ ಬಂಧುಗಳಿಗೂ ಸಮಾಧಾನ, ಧೈರ್ಯ ನಾನೇ ಹೇಳಿ ಅವರ ಕೆಲಸ, ಅವರ ಬಗೆಗಿನ ಗೌರವ ನನ್ನಲ್ಲಿ ಅಚಲವಾಗಿತ್ತು" ಎಂದು ಉತ್ತರಿಸಿದರು ಈ ಧೀರೇ ಕೊಡವತಿ ಶ್ರೀಮತಿ ಸರಸ್ವತಿ.

ಮಕ್ಕಳೊಂದಿಗೆ

ಮೊಣ್ಣಯ್ಯನವರಿಗೆ ಮಕ್ಕಳೆಂದರೆ ತುಂಬಾ ಇಷ್ಟವಂತೆ. ಯಾರ ಮಕ್ಕಳನ್ನಾದರೂ ಸರಿ ಅವರೆಷ್ಟೇ ಗಲೀಜು ಮಾಡಿಕೊಂಡಿರಲಿ ಎತ್ತಿ ಮುದ್ದಾಡಿ ಸ್ನೇಹ ತೋರದೇ ಇರಲಾರರು. ಕೆಲಸಗಾರನೊಬ್ಬನ ಮಗುವಿನ ತಲೆಯಲ್ಲಿ ಹುಣ್ಣಾಗಿ ಹುಳುವಾಗಿ ವಾಸನೆ ಬರುತ್ತಿರುವಾಗ ಮೊಣ್ಣಯ್ಯನವರು ತಾನೇ ಮಗುವಿನ ತಲೆಕೂದಲನ್ನು ಕತ್ತರಿಸಿ ಶುಚಿಮಾಡಿ ಮದ್ದು ಹಾಕಿ ಚಿಕಿತ್ಸೆ ನೀಡಿದ್ದನ್ನು ಶ್ರೀಮತಿ ಸರಸ್ವತಿಯವರು ಹೆಮ್ಮೆಯಿಂದ ನೆನಪಿಸಿಕೊಂಡರು. ಮಾರ್ಕ್ಸ್‌ನ ಅನುಯಾಯಿಯಾದ ಮೊಣ್ಣಯ್ಯನವರ ಈ ಗುಣ ನಮಗೆ ಕಾರ್ಲ್ ಮಾರ್ಕ್ಸ್‌ನನ್ನು ನೆನಪಿಗೆ ತರುತ್ತದೆ. ಆತನೂ ಮಕ್ಕಳೊಂದಿಗೆ ಮಗುವಾಗಿ ಆಡುತ್ತಿದ್ದನೆಂದು ನಾವು ಓದುತ್ತೇವಲ್ಲವೆ?

ಮನೆಯಿಂದ ದಾಟು....!

ತನ್ನ ತಂದೆಯನ್ನು ಜ್ಞಾಪಿಸಿಕೊಳ್ಳುತ್ತಾ ಅವರ ಏಕಮಾತ್ರ ಪುತ್ರ ಚಕ್ಕೇರ ಮೊಣ್ಣಯ್ಯ ಅಚ್ಚಯ್ಯ (ಬಿಪಿನ್) ಒಂದು ಘಟನೆಯನ್ನು ವಿವರಿಸಿದರು- "ನಾನು ಕಾಲೇಜ್ ಮುಗಿಸಿ ಸ್ವತಂತ್ರವಾಗಿ ವ್ಯಾಪಾರ ಪ್ರಾರಂಭಿಸಿದೆ. ಒಂದು ಸಂದರ್ಭ ಒಂದು ತಪ್ಪು ಮಾಡಿದೆ. ಅದು ನನ್ನ ತಂದೆಗೆ ತಿಳಿಯಿತು. ಮಾರನೇ ದಿನ ತಂದೆ ನನ್ನನ್ನು ಕರೆದರು. ಕರೆದ ಧಾಟಿಯಲ್ಲೇ 'ಏನೋ ನನಗೆ ಕಾದಿದೆ' ಎಂದು ನನಗೆ ಭಾಸವಾಯಿತು. ನನಗೆ ಹೇಳಿದರು 'ನೀನು ಭಾರೀ ವ್ಯಾಪಾರ ಮಾಡುತ್ತೀಯಂತೆ? ಮಾಡು. ಆದರೆ ಒಂದು ತಪ್ಪು ಮಾಡಿದ್ದೀಯಾ. ಅದು ಸರಿಯಲ್ಲ. ಸಿ.ಬಿ.ಮೊಣ್ಣಯ್ಯನ ಮಗನಾಗಿ ನೀನು ಈ ಮನೆಯಲ್ಲಿರಬೇಕೆಂದಿದ್ದರೆ ಇಂಥಹಾ ತಪ್ಪು ಇನ್ನು ಮರುಕಳಿಸಬಾರದು. ಅದನ್ನು ಮುಂದುವರಿಸಬೇಕೆಂದಿದ್ದರೆ ಈಗಲೇ ಈ ಮನೆಯಿಂದ ದಾಟು. ನಿನಗಿಲ್ಲಿ ಸ್ಥಾನವಿಲ್ಲ.



ನೀನೆಲ್ಲಿದ್ದೀಯೆಂದು ನಾನೆಂದೂ ಕೇಳಲು ಬರಲಾರೆ."

ಎಂದೂ ಪ್ರೀತಿ, ವಾತ್ಸಲ್ಯಗಳ ಜೀವಂತ ಮೂರ್ತಿಯಾಗಿದ್ದ ತನ್ನ ತಂದೆ ತಾನು ತಪ್ಪಿತಸ್ಥನೆಂದಾದರೆ ಅದೆಷ್ಟು ಕಠೋರ ಹೃದಯಿಯಾಗಬಲ್ಲನೆಂದು ಆಗ ಆ ಮಗನಿಗೆ ಅರಿವಾಯಿತು. 'ಕುಸುಮಾದಪಿ ಮೃದೂನಿ, ವಜ್ರಾದಪಿ ಕಠೊರಣಿ' ತನ್ನ ತಂದೆ ಎಂದು ಅರ್ಥ ಮಾಡಿಕೊಂಡ ಮಗ ಮುಂದೆ ಎಂದೂ ತಂದೆಯ ಹೆಸರಿಗೆ ಕಳಂಕ ತರಬಹುದಾದ ತಪ್ಪು ಎಸಗಲೇ ಇಲ್ಲ.

ಏಕೀಕರಣದ ನಾಯಕ

ಭಾರತೀಯ ಜನತಾ ಪಕ್ಷದ ಭದ್ರ ಕೋಟೆಯಲ್ಲಿದ್ದೂ ಮತನಿರಪೇಕ್ಷ ಶಕ್ತಿಗಳ ಪ್ರತಿನಿಧಿಯಾಗಿಇಂದೂ ಜನಮಾನಸದಲ್ಲಿ ದುಡಿಯುತ್ತಿರುವ, ದೇವರಪುರ ಪಂಚಾಯತ್ ಅಧ್ಯಕ್ಷ ಶ್ರಿ. ಕೃಷ್ಣಕುಮಾರ್ (ಸರ್ವರಿಗೂ ಚಿರಪರಿಚಿತರಾದ ಚಿಪ್ಪಿಯವರು)ರವರು ತನ್ನ ಇಂದಿನ ಪುರೋಗಾಮಿ ವಿಚಾರಗಳು ಮತ್ತು ಅದನ್ನಾಧರಿಸಿದ ವರ್ತನೆಗಳಿಗೆ ಮೊಣ್ಣಯ್ಯನವರೇ ಕಾರಣರೆಂದು ವಿವರಿಸುತ್ತಾರೆ. ಮೊಣ್ಣಯ್ಯನವರು ತನ್ನನ್ನು ಸಭೆ ಸಮಾರಂಭಗಳಿಗೆ ಒಟ್ಟಿಗೆ ಕರೆದೊಯ್ಯುತ್ತಿದ್ದರು. ಪುಸ್ತಕಗಳನ್ನು ಓದಲು ಕೊಡುತ್ತಿದ್ದರು ಎಂದು ಹೆಮ್ಮೆಯಿಂದ ಹೇಳುತ್ತಾರೆ. ಮೊಣ್ಣಯ್ಯನವರು ಸ್ವಾತಂತ್ರ ಹೋರಾಟಗಾರ ಮತ್ತು ಕಮ್ಯುನಿಸ್ಟ ಮಾತ್ರವಲ್ಲ. ಕೊಡಗಿನಲ್ಲಿ ಕರ್ನಾಟಕ ಏಕೀಕರಣ ಚಳುವಳಿಯ ಮುಂಚೂಣಿಯಲ್ಲಿ ನಿಂತ ಅಗ್ರ ನಾಯಕನೂ ಹೌದು ಎನ್ನುತ್ತಾರೆ ಕೊಡಗು ಜಿಲ್ಲಾ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಡಾ.ಐ.ಆರ್.ಆಸ್ರಣ್ಣ.

ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಲು ಸ್ಥಾಪಿತವಾಗಿದ್ದ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕೊಡಗು ಶಾಖೆಯ ಇಬ್ಬರು ಉಪಾಧ್ಯಕ್ಷರುಗಳಲ್ಲಿ ಒಬ್ಬರು ಕಾ.ಮೊಣ್ಣಯ್ಯನವರಾಗಿದ್ದರು. ಇನ್ನೋರ್ವ ಉಪಾಧ್ಯಕ್ಷರಾಗಿದ್ದು ದಿ.ಡಿ.ಎನ್.ದೇವಶೆಟ್ಟಿ. ಅಧ್ಯಕ್ಷರಾಗಿ ಬಿ.ಡಿ.ಅಪ್ಪಯ್ಯ, ಬಿ.ಎ.ಬಿ.ಎಲ್ ಅವರಿದ್ದರೆ ಡಾ.ನಂಜುಂಡೇಶ್ವರ ಮತ್ತು ಡಾ.ಐ.ಆರ್.ಆಸ್ರಣ್ಣ ಗೌರವ ಕಾರ್ಯದರ್ಶಿಗಳಾಗಿದ್ದರು.

ರಾಜ್ಯ ಪುನರ್ಸಂಘಟನಾ ಸಮಿತಿಗೆ ಈ ಪರಿಷತ್ತು 18-5-1954ರಂದು ಒಂದು ಮನವಿ ಅರ್ಪಿಸಿತ್ತು. ಅಖಂಡ ಕರ್ನಾಟಕಕ್ಕಾಗಿ ಹೋರಾಟ ನಡೆಯುತ್ತಿದ್ದ ಅಂದಿನ ದಿನಗಳಲ್ಲಿ ಕೊಡಗಿನ ಪ್ರತ್ಯೇಕತೆಯನ್ನು ಪ್ರತಿಪಾದಿಸುವವರೂ ಇದ್ದರು. ಕಾ.ಮೊಣ್ಣಯ್ಯನವರು ತನ್ನ ದಿಟ್ಟ ನಿಲುವಿನಿಂದಾಗಿ ಇಂತಹವರಿಂದ ತೀವ್ರ ದ್ವೇಷಕ್ಕೆ ಒಳಗಾಗಿದ್ದರು. ಅವರ ಜೀವಾಪಹರಣದ ಭಯವನ್ನೂ ಒಡ್ಡಲಾಗಿತ್ತು. ಇದಾವುದನ್ನೂ ಲೆಕ್ಕಿಸದೆ ಅವರ ನೇತೃತ್ವದ ಏಕೀಕರಣದ ಚಳುವಳಿ ವಿಜಯದತ್ತ ಮುನ್ನಡೆಯಿತು.

ಡಾ. ಆಸ್ರಣ್ಣ ನೆನಪು

ಅಂದಿನ ಸಂದರ್ಭದಲ್ಲಿ ಸಿ.ಎಂ.ಪೂಣಚ್ಚನವರ ನಾಯಕತ್ವದ ಕಾಂಗ್ರೆಸ್ ಪಕ್ಷ ಸಂದರ್ಭಸಾಧಕ ಧೋರಣೆ ಪ್ರದರ್ಶಿಸಿತು. ಪೂಣಚ್ಚನವರ ನೇತೃತ್ವದಲ್ಲೇ 'ಕೊಡಗು ತಾತ್ಕಾಲಿಕವಾಗಿ ಪ್ರತ್ಯೇಕವಾಗಿಯೇ ಇರಲಿ'ಎಂಬ ಮನವಿಯನ್ನು ಮೇಲೆ ಹೇಳಿದ ಸಮಿತಿಗೆ ನೀಡಲಾಗಿತ್ತು" ಎಂಬ ತನ್ನ ಪ್ರಶ್ನೆಗೆ ಉತ್ತರವಾಗಿ ಪೂಣಚ್ಚನವರು "ಏಕೀಕರಣದ ವಿರೋಧಿಗಳನ್ನು ಸಮಾಧಾನಪಡಿಸಲು ಇದೊಂದು ತಂತ್ರ ಅಷ್ಟೆ. ನಿಜಲಿಂಗಪ್ಪನವರಿಗೆ ಇದನ್ನು ತಿಳಿಸಿದ್ದೇನೆ" ಎಂದು ಉತ್ತರಿಸಿದರೆಂದು ಡಾ.ಆಸ್ರಣ್ಣ ವಿವರಿಸುತ್ತಾರೆ.

ಒಂದು ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಸಹಾ ಹೀಗೆ ಸಂದರ್ಭಸಾಧಕ ಧೋರಣೆ ಅನುಸರಿಸುತ್ತಿರುವಾಗ ಸ್ಪಷ್ಟ, ದಿಟ್ಟ ನಿಲುಮೆ ಸ್ವೀಕರಿಸಿದ ಕಾ.ಮೊಣ್ಣಯ್ಯನವರ ನೇತೃತ್ವದ ಕಮ್ಯುನಿಸ್ಟ್ ಪಕ್ಷ ತನ್ನನ್ನು ಆಕರ್ಷಿಸಿತೆಂದೂ ತಾನು ಕಾಂಗ್ರೆಸ್ ಬಿಟ್ಟು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದೆನೆಂದೂ ಡಾ.ಆಸ್ರಣ್ಣ ಜ್ಞಾಪಿಸಿಕೊಳ್ಳುತ್ತಾರೆ.

ಏಕೀಕರಣ ಚಳುವಳಿಯ ಸಮಯದಲ್ಲಿ -ತಾವೆಲ್ಲಾ ಹಬ್ಬ ಜಾತ್ರೆಗಳು ನಡೆಯುವ ಜಾಗಗಳಲ್ಲಿ ನಿಂತು ಅಖಂಡ ಕರ್ನಾಟಕದ ಘೋಷಣೆ ಹಾಕುತ್ತಿದ್ದವೆಂದೂ ಆಗ ವಿರೋಧಿಗಳು ನಮ್ಮನ್ನು ದುರುಗುಟ್ಟಿ ನೋಡುತ್ತಿದ್ದರು, ಹೆದರಿಸುತ್ತಿದ್ದರು ಎನ್ನುತ್ತಾರೆ ಆಸ್ರಣ್ಣ.

(ಮುಂದುವರಿಯುವುದು)

ಎ.ಕೆ.ಸುಬ್ಬಯ್ಯನವರ ನೆನಪಿನ ಹಾಳೆಯಿಂದ

"ನಮ್ಮ ಬಾಲ್ಯದಲ್ಲೇ ಮೊಣ್ಣಯ್ಯನವರ ಹೆಸರು ಪರಿಚಿತವಾದದ್ದು. ಅಂದು ಶ್ರೀಯುತರ ಹೆಸರು ಹುದಿಕೇರಿ ಪ್ರದೇಶದಲ್ಲಿ ಮನೆಮಾತಾಗಿತ್ತು. ನಾನು ನನ್ನ ಸೋದರಮಾವನ ಮನೆಯಿಂದ (ಹರಿಹರದಿಂದ) ಶಾಲೆಗೆ ಹೋಗುತಿದ್ದೆ. ಆ ಸಮಯದಲ್ಲೇ ಹುತ್ತರಿ ಹಬ್ಬದ ಸಂದರ್ಭ ದಟ್ಟಿಕುಪ್ಪಸ ಧರಿಸಿ ಕೋಲಾಟದಲ್ಲಿ ಅವರು ಭಾಗವಹಿಸಿ ಕೋಲಾಡುತ್ತಿದ್ದಾಗ ಅಕ್ಕಪಕ್ಕದಲ್ಲಿ ನೋಡುತ್ತಾ ನಿಂತವರು 'ಅವರೇ ಚಕ್ಕೇರ ಮೊಣ್ಣಯ್ಯ, ಕಮ್ಯುನಿಸ್ಟ್ ಮೊಣ್ಣಯ್ಯ' ಎಂದು ಬೊಟ್ಟು ಮಾಡಿ ತೋರಿಸುತ್ತಿದ್ದರು. ಆಗಿನ ದಿನಗಳಲ್ಲಿ ಅವರು ಸಂಘಟನೆಗಾಗಿ ಹಳ್ಳಿ ಹಳ್ಳಿಗೆ ಹೋಗುತ್ತಿದ್ದರು.

ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೂ ಅವರನ್ನು ಗಮನಿಸಿದ್ದೇನೆ.

ಮುಂದೆ ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಘದವನಾದೆ, ಜನಸಂಘದವನಾದೆ.

ಒಂದು ಸಂದರ್ಭ ಶ್ರೀ ಎ.ಟಿ.ಭೀಮಯ್ಯನವರು ರಾ.ಸ್ವ.ಸೇ.ಸಂಘದ ವಿರುದ್ಧ 'ಶಕ್ತಿ' ಪತ್ರಿಕೆಯಲ್ಲಿ ಒಂದು ಲೇಖನ ಬರೆದರು. ಅದಕ್ಕೆ ನಾನು ಉತ್ತರ ಬರೆದೆ. ಅದು ತೀಕ್ಷ್ಣ ವ್ಯಾಗ್ಯುದ್ಧವಾಗಿ ಮುಂದುವರೆಯಿತು. ಆ ಸಂದರ್ಭದಲ್ಲಿ ನನ್ನನ್ನು ಒಮ್ಮೆ ಕಂಡ ಶ್ರೀ ಮೊಣ್ಣಯ್ಯನವರು 'ನಿನಗೆ ಒಳ್ಳೆ ಭವಿಷ್ಯವಿದೆ. ಆದರೆ ನೀನು ಇರಬೇಕಾದ ಕ್ಯಾಂಪಿನಲ್ಲಿಲ್ಲ. ತಪ್ಪು ಕ್ಯಾಂಪಿನಲ್ಲಿದ್ದೀಯಾ' ಎಂದು ಹೇಳಿ ಹೋದರು.

1962 ರ ಒಂದು ಚುನಾವಣಾ ಸಂದರ್ಭ ನಾಪೋಕ್ಲುವಿನಲ್ಲಿ ನಡೆದ ಒಂದು ಸಭೆಯಲ್ಲಿ ಮೊಣ್ಣಯ್ಯನವರು ಮಾಡಿದ ಭಾಷಣವನ್ನು ನಾನು ಶುರುವಿನಿಂದ ಕೊನೆಯುವರೆಗೆ ಕೇಳಿದ್ದೆ. 'ಕಮ್ಯುನಿಸ್ಟರು ದೇಶದ್ರೋಹಿಗಳು' ಎಂಬ ಆರೋಪಕ್ಕೆ ಉತ್ತರ ನೀಡಿ ಅವರು ಮಂಡಿಸಿದ ವಾದಸರಣಿಗೆ ಅಂದು ನನ್ನಲ್ಲಿ ಉತ್ತರವಿರಲಿಲ್ಲ ಇಂದೂ ಇಲ್ಲ.

ಅನಂತರದ ದಿನಗಳಲ್ಲಿ ಅವರ ನನ್ನ ಭೇಟಿ ಹೆಚ್ಚು ಹೆಚ್ಚಾಯಿತು. ನಮ್ಮ ಪಕ್ಷದೊಳಗೆ ನನ್ನ ಜಗಳ ಅವರಿಗೂ ತಿಳಿದಿರಬೇಕು. ಗೋಣಿಕೊಪ್ಪಲು ಬಸ್ ನಿಲ್ದಾಣದಲ್ಲಾಗಲೀ ಬೇರೆ ಎಲ್ಲಿಯೇ ಆಗಲಿ ನನ್ನನ್ನು ಕಂಡಲ್ಲೆಲ್ಲಾ ಅವರು ಬಳಿಗೆ ಬರುತ್ತಿದ್ದರು. ಮಾತನಾಡುತ್ತಿದ್ದರು. ಚರ್ಚಿಸುತಿದ್ದರು, ವಿವರಿಸುತ್ತಿದ್ದರು.

"ನೀನು ಇರುವ ಕ್ಯಾಂಪ್ ಸರಿ ಇಲ್ಲ" ಎಂದು ಅವರು ಪದೇ ಪದೇ ಹೇಳುತ್ತಿದ್ದುದರ ಅರ್ಥ ಕ್ರಮೇಣ ನನಗೆ ಅರ್ಥವಾಗತೊಡಗಿತು.

ಅನಂತರದ ದಿನಗಳಲ್ಲಿ ನಮ್ಮೊಳಗೆ ಸಾಕಷ್ಟು ಅನ್ಯೋನತೆ ಬೆಳೆದಿತ್ತು.

ಶ್ರೀ ಎ.ಕೆ.ಸುಬ್ಬಯ್ಯನವರ ನೆನಪಿನ ಪುಸ್ತಕದ ಒಂದು ಹಾಳೆಯಲ್ಲಿ ದಾಖಲಾಗಿರುವ ಅಂಶವಿದು.

‘ಸರ್ವಾಂಗೀಣ ಸಮೃದ್ಧ ಸಮಾಜದತ್ತ ನಡೆಯೋಣ’

ಚೀನಾ ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನ ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿದೆ. ಹೊಸ ಶತಮಾನದ ಹೊಸ್ತಿಲಲ್ಲಿ ಜರುಗಿದ ಮೊದಲ ಮಹಾಧಿವೇಶನವು ಮುಂದಿನ ಎರಡು ದಶಕಗಳ ಬೆಳವಣಿಗೆಯ ಕಣ್ಣೋಟವನ್ನು ರೂಪಿಸಿದೆ. ಬದಲಾದ ಜಾಗತಿಕ ಸನ್ನಿವೇಶದಲ್ಲಿ ಸಮಾಜವಾದವನ್ನು ಸದೃಢವಾಗಿ ಕಟ್ಟುವ ದಿಶೆಯಲ್ಲಿ ಅಧಿವೇಶನ ಅಂಗೀಕರಿಸಿದ ತೀರ್ಮಾನಗಳು ಅತ್ಯಂತ ಮಹತ್ವವವುಗಳಾಗಿವೆ.

ಚೀನಾದಲ್ಲಿ ಇತ್ತೀಚೆಗೆ ಸಫಲವಾಗಿ ನಡೆದ (ನವೆಂಬರ್ 7-14) ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನ, ಅತ್ಯಂತ ಮಹತ್ವದ ಘಟನೆ. ಚೀನಾದ ಜನತೆಗೆ ಮಾತ್ರವಲ್ಲ, ಇಡೀ ಜಗತ್ತಿನ ಜನತೆಗೆ. ಕಳೆದ ಎರಡು ದಶಕಗಳಲ್ಲಿ ಚೀನಾ ಸಮಾಜವಾದಿ ಆಧುನೀಕರಣದಲ್ಲಿ ಇಟ್ಟುಕೊಂಡ ಗುರಿಯನ್ನು ಚಾಚೂತಪ್ಪದೆ ಮುಟ್ಟುವ ಮೂಲಕ ಎಲ್ಲರನ್ನೂ ಚಕಿತಗೊಳಿಸಿದೆ. ಐವತ್ತು ವರ್ಷಗಳ ಹಿಂದೆ ಅತ್ಯಂತ ಹಿಂದುಳಿದ ಜನಬಾಹುಳ್ಯದ ದೇಶದಲ್ಲಿ ತನ್ನದೇ ಹಾದಿ ತುಳಿದು, ಕ್ರಾಂತಿ ಮಾಡಿ, ಜಗತ್ತಿನ ಐದು ಪ್ರಮುಖ ದೇಶಗಳ ಸಾಲಿಗೆ ಸೇರಿದ ಹಿಂದಿನ ವಿಕ್ರಮವನ್ನು ಇದು ಮೀರಿಸಿದೆ. ಸಮಾಜವಾದಿ ವ್ಯವಸ್ಥೆ ಸತ್ತುಹೋಯಿತು ಎಂದು



...ಹಾಧಿವೇಶನದ ಗ್ರೇಟ್ ...ಪಲ್ಸ್ ಹಾಲ್‌ನಲ್ಲಿ

ಆರಂಭವಾಗಿ, ಇಡೀ ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿನ ಚಕ್ರದಲ್ಲಿ ಸಿಲುಕಿ ಇದು ಜಗತ್ತು ನಲುಗುತ್ತಿದ್ದಾಗಿನ ಕಳೆದ ದಶಕದಲ್ಲಿ ತನ್ನ ಶೇಕಡಾ 8 ಸರಾಸರಿ ಬೆಳವಣಿಗೆ ಮುಂದುವರೆಸಿ ಜಗತ್ತಿನ ಅತ್ಯಂತ ಬಲಾಢ್ಯ (ಆರ್ಥಿಕವಾಗಿ, ರಾಜಕೀಯವಾಗಿ) ದೇಶವಾಗುವ ಹಾದಿಯಲ್ಲಿದೆ.

ಎರಡು ದಶಕಗಳ ಬೆಳವಣಿಗೆ ಕಣ್ಣೋಟ

ಅತಿದೊಡ್ಡ (ಸುಮಾರು ಆರುಕೋಟಿ ಸದಸ್ಯರಿರುವ) ಮತ್ತು ಅತ್ಯಂತ ದೀರ್ಘಕಾಲ ಆಳುವ ಪಕ್ಷವಾಗಿರುವ ಹೆಗ್ಗಳಿಕೆ ಹೊತ್ತಿರುವ ಚೀನಾ ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ನೆರೆದಿದ್ದರು. **ಮೂರನೇ ಪೀಳಿಗೆಯ ಹೊಸ ನಾಯಕತ್ವಕ್ಕೆ ಸುವ್ಯವಸ್ಥಿತವಾಗಿ ಅಧಿಕಾರ ಹಸ್ತಾಂತರ(ವಿವರಗಳಿಗೆ ಬಾಕ್ಸ್ ನೋಡಿ), ಮುಂದಿನ ಎರಡು ದಶಕಗಳ ಬೆಳವಣಿಗೆ ಕಣ್ಣೋಟ ರೂಪಿಸಿದ್ದು; ಸರ್ವಾಂಗೀಣ ಸಮೃದ್ಧ ಸಮಾಜದ ಆದರ್ಶ; ಪಕ್ಷದ, ದೇಶದ ಮುಂದಿಟ್ಟಿದ್ದು; ‘ಮೂರು ಪ್ರತಿನಿಧಿತ್ವ’ ಗಳ ಪಕ್ಷದ ಪಾತ್ರದ ಬಗೆಗಿನ ಹೊಸ ಕಣ್ಣೋಟದ ಅಂಗೀಕಾರ ಪಕ್ಷದಸ್ವರೂಪ, ಪಾತ್ರ, ಕಾರ್ಯಕ್ರಮದ ಪುನರ್ನವೀಕರಣಕ್ಕೆ ಸಹಾಯಕವಾಗುವ ಬದಲಾವಣೆಗಳನ್ನು ಪಕ್ಷದ ಸಂವಿಧಾನದಲ್ಲಿ ಮಾಡಿದ್ದು** - ಇವು 16ನೇ ಮಹಾಧಿವೇಶನದಲ್ಲಿ ಗಮನ ಸೆಳೆದ ಅಂಶಗಳು. ಮಹಾಧಿವೇಶನ ಹೊಸ 356 ಸದಸ್ಯರ ಕೇಂದ್ರ ಸಮಿತಿ ಮತ್ತು ಕೇಂದ್ರ ಶಿಸ್ತು ಕಮಿಷನ್‌ನ್ನು 121 ಸದಸ್ಯರ ಗುಪ್ತ ಮತದಾನದ ಮೂಲಕ ಆರಿಸಿತು. ಹಿಂದಿನ ಪ್ರಧಾನ ಕಾರ್ಯದರ್ಶಿ ಜಿಯಾಂಗ್ ಝುಮಿನ್ ಮಂಡಿಸಿದ ಕೇಂದ್ರ ಸಮಿತಿಯ ವರದಿ ಮತ್ತು ಪಕ್ಷದ ಸಂವಿಧಾನಕ್ಕೆ ತಂದ ತಿದ್ದುಪಡಿಗಳನ್ನು ಅನುಮೋದಿಸುವ ಸೂಚನೆಯನ್ನು ಮಹಾಧಿವೇಶನ ಅಂಗೀಕರಿಸಿತು.

ಝುಮಿನ್ ವರದಿ

ಜಿಯಾಂಗ್ ಝುಮಿನ್ ಮಂಡಿಸಿದ ವರದಿ ಸಮಾಜವಾದಿ ಆಧುನೀಕರಣದ ಮುಂದಿನ

ಮಹತ್ವಪೂರ್ಣ ಚೀನಾ ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನ

ಅವಧಿಯ ಮೊದಲ ಇಪ್ಪತ್ತು ವರ್ಷಗಳ ಕಣ್ಣೋಟ ರೂಪಿಸುವ ಅಂಶಗಳನ್ನು ಹೊಂದಿದೆ. ಇತ್ತೀಚಿನ ಅವಧಿಯ ಪಕ್ಷದ ಸಾಧನೆ, ಅನುಭವಗಳ ಸಾರವನ್ನು ಅದು ಹೊಂದಿತ್ತು. ಎರಡು ದಶಕಗಳ ಹಿಂದೆ ಪಕ್ಷ ತನ್ನ ಮೂವತ್ತು ವರ್ಷಗಳ ಚೀನಾವನ್ನು ಸಮಾಜವಾದಿ ಬೆಳವಣಿಗೆ ಪಥದಲ್ಲಿ ಒಯ್ಯುವ ಅನುಭವದ ಆಧಾರದ ಮೇಲೆ ರೂಪಿಸಿದ ಯೋಜನೆಯ ಮೊದಲ ಎರಡು ಹಂತಗಳನ್ನು ಸಮಯಕ್ಕೆ ಸರಿಯಾಗಿ ಸಾಧಿಸಿದೆ. 80 ರ ದಶಕದ ಕೊನೆ ಹೊತ್ತಿಗೆ ಎಲ್ಲಾ ಪ್ರಜೆಗಳಿಗೂ ಆಹಾರ, ಬಟ್ಟೆ ಒದಗಿಸುವ ಮತ್ತು ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ದ್ವಿಗುಣಗೊಳಿಸುವ ಗುರಿ ಮುಟ್ಟಿದೆ. 90 ರ ದಶಕದ ಕೊನೆ ಹೊತ್ತಿಗೆ ಎಲ್ಲಾ ಚೀನಿಯರು ಉತ್ತಮ ಜೀವನ ಮಟ್ಟವನ್ನು ಸಾಧಿಸುವ ಮತ್ತು ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಇನ್ನೊಮ್ಮೆ ದ್ವಿಗುಣಗೊಳಿಸುವ ಗುರಿಯನ್ನು ಮುಟ್ಟಿದೆ. ಮುಂದಿನ ಐವತ್ತು ವರ್ಷಗಳು ಅಭಿವೃದ್ಧಿ ಸಮಾಜವಾದಿ ದೇಶವಾಗುವ ಮೂರನೇ ಹಂತದ ಮೊದಲ ಭಾಗವಾಗಿ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಇನ್ನೊಮ್ಮೆ ನಾಲ್ಕು ಪಟ್ಟು ಮಾಡುವ ಮತ್ತು ಅದನ್ನು ಸಾಧಿಸುವ ವಿಧಾನಗಳ ಬಗ್ಗೆ ಝುಮಿನ್ ವರದಿಯಲ್ಲಿ ತಿಳಿಸಿದ್ದಾರೆ. ಸಾರ್ವಜನಿಕ ಒಡೆತನದ ಕ್ಷೇತ್ರ ಪ್ರಧಾನ ಪಾತ್ರವಹಿಸುತ್ತಾ, ಇತರ ಒಡೆತನದ ಕ್ಷೇತ್ರಗಳನ್ನು ಬೆಳೆಸುವುದು, ಸಮಾಜವಾದಿ ಮಾರುಕಟ್ಟೆಯ ಬೆಳವಣಿಗೆ, ಸಾರ್ವಜನಿಕ ಕ್ಷೇತ್ರದ ಮೂಲಭೂತ ಸುಧಾರಣೆ,


11ನೇ ...ನ್‌ಕ್ವಿನ್ ...ಮಾ ಉದ್ಘಾ...ನೆಯಲ್ಲಿಅತಿಥಿಯಾಗಿ

ಕೈಗಾರೀಕರಣವನ್ನು ತೀವ್ರಗೊಳಿಸುವುದು, ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನವನ್ನು ದೊಡ್ಡ ರೀತಿಯಲ್ಲಿ ಅನ್ವಯಿಸುವುದು, ಜನರ ಜೀವನ ಮಟ್ಟ ಸತತವಾಗಿ ಎತ್ತರಿಸುವುದು - ಇವುಗಳ ಬಗ್ಗೆ ವರದಿಯಲ್ಲಿ ಒತ್ತು ಕೊಡಲಾಗಿದೆ.

‘ಮೂರು ಪ್ರತಿನಿಧಿತ್ವಗಳು’ - ಪಕ್ಷದ ಪಾತ್ರ

ಸರ್ವಾಂಗೀಣ ಸಮೃದ್ಧ ಸಮಾಜ ಕಟ್ಟುವ ಆದರ್ಶವನ್ನು ಪಕ್ಷದ ಮುಂದಿಟ್ಟ ವರದಿ - ತೀವ್ರ ಆರ್ಥಿಕ ಬೆಳವಣಿಗೆ, ಸಮಾಜವಾದಿ ಪ್ರಜಾಪ್ರಭುತ್ವವನ್ನು ಆಳ ಮತ್ತು ವಿಸ್ತಾರಗೊಳಿಸುವುದು, ಜನರ ನೈತಿಕ ಮತ್ತು ಸಾಂಸ್ಕೃತಿಕ ಮಟ್ಟ ವಿಸ್ತಾರಗೊಳಿಸುವುದು - ಇದರ ಪ್ರಮುಖ ಅಂಶಗಳು ಎಂದಿದೆ. ಇದನ್ನು ಸಾಧಿಸಲು ಪಕ್ಷದ ನಾಯಕತ್ವ, ಪಾತ್ರದ ಬಗ್ಗೆ ‘ಮೂರು ಪ್ರತಿನಿಧಿತ್ವ’ಗಳ ಹೊಸ ಕಣ್ಣೋಟವನ್ನು ವರದಿ ಮುಂದಿಟ್ಟಿದೆ. ಪಕ್ಷ ಚೀನಾದ ಅತ್ಯಂತ ಅಭಿವೃದ್ಧಿ ಉತ್ಪಾದನಾ ಶಕ್ತಿಗಳು, ಅತ್ಯಂತ ಮುಂದುವರಿದ ಸಂಸ್ಕೃತಿ ಮತ್ತು ಚೀನಾದ ಬಹುಸಂಖ್ಯಾತ ಜನರ ಮೂಲಭೂತ ಹಿತಾಸಕ್ತಿಗಳನ್ನು ‘ಪ್ರತಿನಿಧಿ’ಸಬೇಕು ಎಂಬುದು ಈ ‘ಮೂರು ಪ್ರತಿನಿಧಿತ್ವ’ಗಳ ಸಾರ. ಇದು ಇಡೀ ಪಕ್ಷಕ್ಕೆ, ಎಲ್ಲಾ ಸದಸ್ಯರಿಗೆ ತಮ್ಮ ಪಾತ್ರ ವಹಿಸುವುದರಲ್ಲಿ ಮೂಲ ‘ಮಾರ್ಗದರ್ಶಕ ಸೂತ್ರ’ವಾಗಬೇಕು ಎಂದಿದೆ ವರದಿ.

ಪಕ್ಷದ ಸಂವಿಧಾನದಲ್ಲಿ ಬದಲಾವಣೆಗಳು


ನೂತನ ಕಾರ್ಯದರ್ಶಿ

ಸಮಾಜವಾದಿ ಆಧುನೀಕರಣವನ್ನು ಮುಂದೊಯ್ಯುವುದು, ತೈವಾನನ್ನು ಶಾಂತಿಯುತವಾಗಿ ಚೀನಾದ ಜತೆ ಪುನರೈಕ್ಯತೆಗೊಳಿಸುವುದು ಮತ್ತು ಜಾಗತಿಕ ಶಾಂತಿ ಮತ್ತು ಸರ್ವಾಂಗೀಣ ಪ್ರಗತಿಗೆ ಪೂರಕವಾಗಿ ಕೆಲಸ ಮಾಡುವುದು - ಪಕ್ಷದ ಮುಂದಿರುವ ಪ್ರಮುಖ ಕರ್ತವ್ಯಗಳು. ಇದನ್ನು ಪೂರೈಸಬಲ್ಲ ಪಕ್ಷ ಕಟ್ಟುವುದು ಎಲ್ಲಾ ಸದಸ್ಯರ ಕರ್ತವ್ಯ.

ಈ ಬಗ್ಗೆ ಪಕ್ಷದ ಸ್ವರೂಪ, ಪಾತ್ರ, ಕಾರ್ಯಕ್ರಮ, ಸದಸ್ಯರ ನಾಯಕರ ಕರ್ತವ್ಯಗಳನ್ನು ನಿರ್ದಿಷ್ಟವಾಗಿ ರೂಪಿಸಲಾಗಿದ್ದು - ಇದನ್ನು ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ರೂಪದಲ್ಲಿ ತರಲಾಯಿತು. ‘ಮೂರು ಪ್ರತಿನಿಧಿತ್ವಗಳ’ ಮಾರ್ಗದರ್ಶಕ ಸೂತ್ರವನ್ನು

> **ಸಿಪಿಐ(ಎಂ) ಕೇಂದ್ರ ಸಮಿತಿ ಅಭಿನಂದನೆ**
>
> ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್ 16ನೇ ಮಹಾಧಿವೇಶನದಲ್ಲಿ ಆಯ್ಕೆಯಾದ ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯನ್ನು ಅಭಿನಂದಿಸಿ ಸಂದೇಶ ಕಳಿಸಿದ್ದಾರೆ. 16ನೇ ಮಹಾಧಿವೇಶನದ ಸಫಲ ಮುಕ್ತಾಯಕ್ಕೆ ಅಭಿನಂದಿಸಿ ಚೀನಾವನ್ನು ಸಮಾಜವಾದಿ ಬೆಳವಣಿಗೆಯ ಹಾದಿಯಲ್ಲಿ ಇನ್ನಷ್ಟು ಮಹಾನ್ ಪ್ರಗತಿ ಸಾಧಿಸಲಿ ಎಂದು ಹಾರೈಸಿದ್ದಾರೆ.

ಅಳವಡಿಸುವುದು, ಪಕ್ಷದ ವರ್ಗಸ್ವರೂಪದ ಬಗ್ಗೆ ಸ್ಪಷ್ಟನೆ, ದೇಶದ ಆಧುನಿಕ ಉತ್ಪಾದಕ ಶಕ್ತಿಗಳನ್ನು ಪ್ರತಿನಿಧಿಸುವ ಹೊಸ ಸಾಮಾಜಿಕ ಗುಂಪುಗಳ ಮುಂದುವರಿದ ಶಕ್ತಿಗಳಿಗೆ ಪಕ್ಷದ ಸದಸ್ಯತ್ವದ ವಿಸ್ತರಣೆ, ಪಕ್ಷದ ಸದಸ್ಯರು, ನಾಯಕರ ಕರ್ತವ್ಯಗಳ ಬಗ್ಗೆ ವಿವರಣೆ - ಇವು ಪಕ್ಷದ ಸಂವಿಧಾನದಲ್ಲಿ ಸೇರಿಸಲಾದ ಕೆಲವು ಅಂಶಗಳು.

ಪಕ್ಷದ ಸದಸ್ಯರಲ್ಲಿ ಭ್ರಷ್ಟಾಚಾರದ ವಿರುದ್ಧ ದೃಢ ಹೋರಾಟ, ಆ ಬಗ್ಗೆ ನಿರ್ದಿಷ್ಟ ನಿರ್ದೇಶನಗಳ ಕ್ರಮಗಳನ್ನು ಮಹಾಧಿವೇಶನ ಅಂಗೀಕರಿಸಿತು. ಈಗಿರುವ ಅತಾರ್ಕಿಕ, ಅಸಮಾನತೆಯ ಅಂತರ್‌ರಾಷ್ಟ್ರೀಯ ಆರ್ಥಿಕ ರಾಜಕೀಯ ವ್ಯವಸ್ಥೆ ಬದಲಾಯಿಸುವುದು ನಮ್ಮ ಗುರಿ ಎಂದಿದೆ ವರದಿ.

- ಶರತ್ ಚಂದ್ರ

ಚೀನಾವನ್ನು ಇಪ್ಪತ್ತೊಂದನೇ ಶತಮಾನದಲ್ಲಿ ಮುನ್ನಡೆಸುವ ಹೊಸ ನಾಯಕತ್ವ

16ನೇ ಮಹಾಧಿವೇಶನ ಚೀನಾವನ್ನು ಇಪ್ಪತ್ತೊಂದನೇ ಶತಮಾನದಲ್ಲಿ ಮುನ್ನಡೆಸಬಲ್ಲ ಹೊಸ ನಾಯಕತ್ವವನ್ನು ಆರಿಸಿತು. ಮಹಾಧಿವೇಶನ ಆರಿಸಿದ ಹೊಸ ಕೇಂದ್ರ ಸಮಿತಿಯಲ್ಲಿ ಅರ್ಧದಷ್ಟು ಹೊಸಬರು. ಪಾಲಿಟ್‌ಬ್ಯೂರೋ ಸ್ಥಾಯಿ ಸಮಿತಿಯಲ್ಲಿ ಹೊಸದಾಗಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಹೊ ಜಿನ್‌ತಾವೋ ಬಿಟ್ಟರೆ ಮತ್ತೆಲ್ಲಾ ಹೊಸಬರು. ಮಾಜಿ ಪ್ರಧಾನ ಕಾರ್ಯದರ್ಶಿ ಮತ್ತು ದೇಶದ ಅಧ್ಯಕ್ಷ ಜಿಯಾಂಗ್ ಝುಮಿನ್, ಪ್ರಧಾನಿ ಜೂ ರೊಂಗ್‌ಜಿ, ಮಾಜಿ ಪ್ರದಾನಿ ಲಿ ಪೆಂಗ್ ಸೇರಿದಂತೆ ಐವರು ಕೇಂದ್ರ ಸಮಿತಿಯಿಂದ ನಿವೃತ್ತರಾದರು. ಇದರ ಜತೆ ಚೀನಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವವನ್ನು ಮೂರನೇ ಪೀಳಿಗೆ ವಹಿಸಿಕೊಂಡಂತಾಗಿದೆ. ಮಾವೋ, ಡೆಂಗ್ - ಶ್ಸಿಯಾವೋ- ಪಿಂಗ್, ಚೌ-ಎನ್-ಲಾಯ್ಸ್ ಮುಂತಾದವರೆಲ್ಲಾ ಮೊದಲ ಕ್ರಾಂತಿ-ಪೂರ್ವ ಪೀಳಿಗೆಯ ನಾಯಕರಾದರೆ, ಜಿಯಾಂಗ್ ಝುಮಿನ್, ಲಿಪೆಂಗ್ ಇತ್ಯಾದಿ ಎರಡನೆಯ ಪೀಳಿಗೆ ನಾಯಕರು. ಈ ನಾಯಕತ್ವ ಬದಲಾವಣೆ ಅತ್ಯಂತ ಸುವ್ಯವಸ್ಥಿತವಾಗಿ, ಸುಲಲಿತವಾಗಿ ಜರುಗಿದ್ದು ಅತ್ಯಂತ ಮಹತ್ವದ ಘಟನೆ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ. ಅತ್ಯಂತ ದೀರ್ಘಕಾಲ ಆಳುವ ಪಕ್ಷವಾಗಿರುವ ಹೆಗ್ಗಳಿಕೆಯ 81 ವರ್ಷದ ಚೀನಾ ಕಮ್ಯುನಿಸ್ಟ್ ಪಕ್ಷ ಪರಿಪಕ್ವವಾಗಿರುವುದರ ದ್ಯೋತಕ ಇದು ಎನ್ನಲಾಗಿದೆ.

ಜಿಯಾಂಗ್ ಝುಮಿನ್ ಕೇಂದ್ರೀಯ ಮಿಲಿಟರಿ ಕಮಿಷನ್ ಅಧ್ಯಕ್ಷರಾಗಿ ಪುನರಾಯ್ಕೆಯಾದರು. ಎರಡು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ಮಹಾಧಿವೇಶನ ಗುಪ್ತ ಮತದಾನದ ಮೂಲಕ ಕೇಂದ್ರ ಸಮಿತಿಯ ಚುನಾವಣೆ ಮಾಡಿತ್ತು. ಹೊಸಕೇಂದ್ರ ಸಮಿತಿಯ ಸರಾಸರಿ ಆಯಸ್ಸು 55 ಕ್ಕೆ ಇಳಿದಿದೆ. 70ನೇ ವಯಸ್ಸಿನ ನಂತರ ಕೇಂದ್ರ ಸಮಿತಿಯಿಂದ ನಿವೃತ್ತರಾಗುವ ಬದಲಾವಣೆ ಚೀನಾ ಕಮ್ಯುನಿಸ್ಟ್ ಪಕ್ಷ(ಹಲವು ವರ್ಷಗಳ ಹಿಂದೆ) ಈಗಾಗಲೇ ಜಾರಿಗೆ ತಂದಿದೆ.

ಜಾಗತೀಕರಣ ವಿರುದ್ಧ ಭಾರೀ ಜನಾಂದೋಲನಗಳು ಪ್ರಪಂಚದಾದ್ಯಂತ ಚಿಮ್ಮಿವೆ. ಜಾಗತೀಕರಣಕ್ಕೆ ಪರ್ಯಾಯವೇ ಇಲ್ಲ ಎಂಬಂತಹ ಕಟ್ಟು ಕಥೆಗಳನ್ನು ನುಚ್ಚು ನೂರಾಗಿಸಿ, ಇನ್ನೊಂದು ಜಗತ್ತು ಸಾಧ್ಯವಿದೆಯೆಂದು ಸಾರಿದ ಚಳುವಳಿ ಇದು. ಆ ಚಳುವಳಿಯ ಬೃಹತ್ ಸಮಾವೇಶವೊಂದು ಹೈದ್ರಾಬಾದ್‌ನಲ್ಲಿ ಸೇರುತ್ತಿದೆ. ಅದಕ್ಕಾಗಿ ಭಾರಿ ಸಿದ್ಧತೆ ಆರಂಭಗೊಂಡಿದೆ. ಅದರ ವಿವರಗಳನ್ನು ಬಿಜಿವಿಎಸ್ ನ ಪ್ರ.ಕಾರ್ಯದರ್ಶಿ ಇ.ಬಸವರಾಜು ಇಲ್ಲಿ ವಿವರಿಸಿದ್ದಾರೆ.

ಜಾಗತೀಕರಣದ ವಿರುದ್ಧ ಬೃಹತ್ ಸಮಾವೇಶ
ಏಶಿಯಾ ಸೋಷಿಯಲ್ ಫೋರಂ

ವಿಶ್ವ ಸಮಾಜ ವೇದಿಕೆ (World Social Forum) ಜಾಗತೀಕರಣಕ್ಕೆ ಪರ್ಯಾಯಗಳನ್ನು ಆಲೋಚಿಸುವ ಮತ್ತು ಪ್ರಕ್ರಿಯೆಯಲ್ಲಿ ಭಾಗವಹಿಸಲು ತಮ್ಮನ್ನು ಆಹ್ವಾನಿಸುತ್ತಿದ್ದೇವೆ.

ಸುಸ್ಥಿರ ಅಭಿವೃದ್ಧಿ ಮತ್ತು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯ ಜಾಗತೀಕರಣದಿಂದ ಸಿಗುವುದಿಲ್ಲ. ಅದು ದೊರೆಯುವುದು ಜನಕೇಂದ್ರಿತ ಮತ್ತು ಸ್ವಾವಲಂಬನೆಯ ಪ್ರಗತಿಯಲ್ಲಿ. ಇಂತಹ ಪ್ರಗತಿಯ ದಾರಿಯನ್ನು ಗುರ್ತಿಸಿ ಪ್ರದರ್ಶಿಸಲು ಜನರ ಚಳುವಳಿಗಳು ಪ್ರಪಂಚದಾದ್ಯಂತ ಕೆಲಸ ಮಾಡುತ್ತಿವೆ.

2001 ಮತ್ತು 2002 ರಲ್ಲಿ ಬ್ರೆಜಿಲ್‌ನ ಪೋರ್ಟೋ ಆಲೆಗ್ರೆಯಲ್ಲಿ ನಡೆದ ವಿಶ್ವ ಸಮಾಜ ವೇದಿಕೆ ಪ್ರಕ್ರಿಯೆ ಇಂತಹ ಬದಲಿ ಮಾರ್ಗಗಳನ್ನು ಸೂಚಿಸಿದೆ ಮತ್ತು ವಿಶ್ವ ಆರ್ಥಿಕ ವೇದಿಕೆಯ ಆಡಳಿತ ವೈಖರಿಯನ್ನು ಪ್ರಶ್ನಿಸಿದೆ. ಜನರ ವಾದವೆಂದರೆ ಮತ್ತೊಂದು ಪ್ರಪಂಚದ ಸಾಧ್ಯತೆಯಿದೆ. ಈ ವಾದವು ಕಲ್ಪನೆ ಮತ್ತು ವಾಸ್ತವದ ಆಧಾರದಲ್ಲಿದೆ. ಪ್ರಪಂಚದ ಹಲವಾರು ದೇಶಗಳಲ್ಲಿ ಬೆಳೆಯುತ್ತಿರುವ ಉದಾರ ಆರ್ಥಿಕ ನೀತಿಯನ್ನು ಪ್ರಶ್ನಿಸುವ ಹೋರಾಟಗಳಿಗೆ ಪ್ರತಿಕ್ರಿಯೆ ಎಂಬತೆ ವಿಶ್ವ ಸಮಾಜವೇದಿಕೆ ನಿರ್ಮಾಣಗೊಂಡಿದೆ.

ಬರುವ 2003ರಲ್ಲಿ ಪೋರ್ಟೋ ಆಲೆಗ್ರೆಯಲ್ಲಿಯೇ ವಿಶ್ವ ಸಮಾಜ ವೇದಿಕೆಯ ಮೂರನೇ ಅಂತರ ರಾಷ್ಟ್ರೀಯ ಸಮಾವೇಶ ಜರುಗಲಿದೆ. ಇದಕ್ಕೆ ಮುನ್ನ ವಿವಿಧ ಖಂಡಗಳ ಮಟ್ಟದಲ್ಲಿ ಸಮಾವೇಶಗಳು ನಡೆಯುತ್ತಿವೆ. ಈಗಾಗಲೇ ಯೂರೋಪ್ ಸೋಷಿಯಲ್ ಫೋರಂ ಇಟಲಿಯಲ್ಲಿ ಜರುಗಿದೆ. ಏಷಿಯಾ ಸಮಾಜ ವೇದಿಕೆ (Asia Social Forum) ಬರುವ ಜನವರಿ 2 ರಿಂದ 7 ರವರೆಗೆ ಭಾರತದ ಹೈದರಾಬಾದ್‌ನಲ್ಲಿ ನಡೆಯಲಿದೆ. ಭಾರತದ 6000 ಮತ್ತು ಏಷಿಯಾ ಖಂಡದ ಇತರ ದೇಶಗಳಿಂದ 2000 ಪ್ರತಿನಿಧಿಗಳೂ ಸೇರಿದಂತೆ ಒಟ್ಟು 8000 ಪ್ರತಿನಿಧಿಗಳು ಇಲ್ಲಿ ಭಾಗವಹಿಸಲಿದ್ದಾರೆ. ಮತ್ತೊಂದು ಪ್ರಪಂಚದ ಸಾಧ್ಯತೆಗಾಗಿ ಏಷಿಯಾ ಮಟ್ಟದಲ್ಲಿ ಒಂದು ಯೋಜನೆ ತಯಾರಿಸಲು ಇಲ್ಲಿ ನೂರಾರು, ಸಮ್ಮೇಳನ, ಕಾರ್ಯಾಗಾರಗಳು ನಡೆಯಲಿವೆ.

ಹೈದರಾಬಾದ್‌ನಲ್ಲಿ ನಡೆಯುವ ಸಮಾವೇಶದಲ್ಲಿ ಜಾಗತೀಕರಣದಿಂದುಂಟಾದ ಅಡ್ಡ ಪರಿಣಾಮಗಳ ಬಗ್ಗೆ ಮಾತ್ರ ಚರ್ಚಿಸುವುದಿಲ್ಲ. ಜಾಗತೀಕರಣದಿಂದಾಗಿ ಎಲ್ಲ ದೇಶಗಳಲ್ಲಿ ಉಂಟಾಗಿರುವ ಬಡತನ, ಅಸಮಾನತೆಗಳ ಬಗ್ಗೆಯೂ ಚರ್ಚಿಸಲಾಗುತ್ತದೆ. ಇಡೀ ಪ್ರಕ್ರಿಯೆಯಲ್ಲಿ ಜಾಗತೀಕರಣದಿಂದ ಜನರ ದಿನನಿತ್ಯದ ಜೀವನದ ಮೇಲಾಗಿರುವ ಪರಿಣಾಮಗಳ ಬಗ್ಗೆ ಚರ್ಚಿಸಲಾಗುವುದು. ಜಾಗತೀಕರಣಕ್ಕೆ ಪ್ರತಿರೋಧ ಹಾಗೂ ಬದಲಾವಣೆಗಳನ್ನು ಸ್ಥಳೀಯ ಸಾಂಸ್ಕೃತಿಕ ಪ್ರಕಾರಗಳ ಮೂಲಕ ಬಿಂಬಿಸಲಾಗುವುದು.

ಏಶಿಯಾ ಸಮಾಜ ವೇದಿಕೆ
(Asia Social Forum)

ಏಶಿಯಾ ಅತ್ಯಂತ ವೈವಿಧ್ಯಮಯ ದೇಶಗಳನ್ನು ಒಳಗೊಂಡಿದೆ. ಏಶಿಯಾ ಸಮಾಜ ವೇದಿಕೆ ಈ ದೇಶಗಳ ಜನರ ನಡುವೆ ಸಂಪರ್ಕ ಹಾಗೂ ಸಂವಾದಗಳನ್ನು ಹುಟ್ಟುಹಾಕಲಿದೆ. ಇದು ವಿವಿಧ ಸಾಂಸ್ಕೃತಿಕ ಹಿನ್ನೆಲೆ, ನಂಬಿಕೆ ಮತ್ತು ಪರಂಪರೆಗಳ ಸಮ್ಮಿಲನವಾಗಲಿದೆ. ಏಶಿಯಾದ ವಿವಿಧ ಭಾಗಗಳಿಂದ ಜನರು ಭಾಗವಹಿಸುವಂತೆ ಮಾಡಿ ಆದರಿಂದ ಶ್ರೀಮಂತ ಅನುಭವಗಳನ್ನು ಒಂದೆಡೆ ಕಲೆ ಹಾಕಲಿದೆ.

ಭಾರತದಲ್ಲಿ ವಿಶ್ವ ಸಮಾಜ ವೇದಿಕೆ (WSF) ಪ್ರಕ್ರಿಯೆ ಆರಂಭವಾಗಿದೆ. ಇದಕ್ಕಾಗಿ ಇಂಡಿಯಾ ವರ್ಕಿಂಗ್ ಕಮಿಟಿ (IWC) ರಚನೆಯಾಗಿದ್ದು ದೆಹಲಿಯಲ್ಲಿ ಕಛೇರಿ ತೆರೆದು ಕೆಲಸ ಆರಂಭಿಸಿದೆ. ಹೈದರಾಬಾದ್ ಸಮಾವೇಶದಲ್ಲಿ ಚರ್ಚಿಸುವ ವಿಷಯಗಳೆಂದರೆ;

* ಶಾಂತಿ ಮತ್ತು ಸುಭದ್ರತೆ



* ಸಾಲ, ಅಭಿವೃದ್ಧಿ, ವ್ಯಾಪಾರ, ಹಣಕಾಸು ಬಂಡವಾಳ
* ರಾಜ್ಯ, ಪ್ರಜಾಪ್ರಭುತ್ವ ಮತ್ತು ಕಡೆಗಣಿಸಲ್ಪಟ್ಟವರು
* ಸಾಮಾಜಿಕ ಮೂಲಸೌಕರ್ಯ
* ಪರಿಸರ, ಸಂಸ್ಕೃತಿ ಮತ್ತು ಜ್ಞಾನ
* ಬದಲಾವಣೆಗಳು ಮತ್ತು ಜನರ ಚಳುವಳಿಗಳು.


ಮೇಲಿನ ಒಂದೊಂದೂ ವಿಷಯದ ಅಡಿಯಲ್ಲಿ ಅನೇಕ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳು ನಡೆಯಲಿವೆ. ಇವುಗಳನ್ನು ಭಾಗವಹಿಸುವ ಸಂಘಟನೆಗಳು ನಡೆಸಿಕೊಡಲಿವೆ. ಇದನ್ನು ನಡೆಸಿಕೊಡಬೇಕಾದರೆ ಸಂಘಟಕರಿಗೆ ನಿರ್ದಿಷ್ಟ ಶುಲ್ಕವನ್ನು ನಿಗದಿತ ದಿನಾಂಕದೊಳಗೆ ತುಂಬಬೇಕು. ಅವರು ಸ್ಥಳಾವಕಾಶದ ವ್ಯವಸ್ಥೆ ಮಾಡಿಕೊಡುತ್ತಾರೆ. ಮಾತನಾಡುವ ಸಂಪನ್ಮೂಲ ವ್ಯಕ್ತಿಗಳನ್ನು ನಡೆಸಿಕೊಡುವ ಸಂಘಟನೆಯವರೇ ನಡೆಸಿಕೊಡಬೇಕಾಗುತ್ತದೆ.

ಇವುಗಳಲ್ಲದೇ ಪ್ರತ್ಯೇಕ ಮಹಿಳಾ ಸಮಾವೇಶ ಮತ್ತು ಯುವ ಜನರ ಸಮಾವೇಶಗಳೂ ನಡೆಯಲಿವೆ.

ರಾಜ್ಯದಲ್ಲಿ: ಕರ್ನಾಟಕದಲ್ಲಿ ಜಾಗತೀಕರಣ ಹಾಗೂ ಕೋಮುವಾದ ವಿರೋಧಿಸುವ ಎಲ್ಲ ಸಂಘಟನೆಗಳನ್ನೊಳಗೊಂಡ ವಿಶಾಲ ವೇದಿಕೆ ರಚಿಸಬೇಕಿದೆ. ಡಿಸೆಂಬರ್ ಮೊದಲ ವಾರದಲ್ಲಿ ಇದು ರಚನೆಯಾಗಲಿದ್ದು ನಂತರ ರಾಜ್ಯದಲ್ಲಿ ಈ ಬಗ್ಗೆ ಜನರಿಗೆ ವಿವರಿಸುವ ರಾಜ್ಯ/ ಜಿಲ್ಲಾಮಟ್ಟದ ಕಾರ್ಯಾಗಾರಗಳು, ಗುಂಪು ಚರ್ಚೆಗಳು ನಡೆಯಲಿವೆ. ಅಂತಿಮವಾಗಿ ಜಾಗತೀಕರಣದಿಂದ ರಾಜ್ಯದ ವಿವಿಧ ಜನ ಸಮೂಹದ ಮೇಲಾಗಿರುವ ದುಷ್ಪರಿಣಾಮಗಳ ವರದಿಯೊಂದಿಗೆ ರಾಜ್ಯದ ಪ್ರತಿನಿದಿಗಳು 2003 ರ ಜನವರಿ 1 ರಂದು ಹೈದರಾಬಾದ್‌ಗೆ ತೆರಳಬೇಕಿದೆ. ಹೈದರಾಬಾದ್‌ನಲ್ಲಿ ರಾಜ್ಯದ ಪ್ರತಿನಿದಿಗಳು ಒಟ್ಟಾಗಿ ಬೆರೆತು ತಾವು ಭಾಗವಹಿಸುವ ಸಮ್ಮೇಳನ/ ವಿಚಾರ ಸಂಕಿರಣ/ ಕಾರ್ಯಾಗಾರಗಳನ್ನು ಆಯ್ಕೆ ಮಾಡಿಕೊಂಡು ಭಾಗವಹಿಸಬೇಕಾಗುತ್ತದೆ.

ಗೌರೀಶರು ಕೊಟ್ಟ ಬೆಳಕಿನ ಬುತ್ತಿ

ಖ್ಯಾತ ಬರಹಗಾರ, ವಿಮರ್ಶಕ ಡಾ. ಗೌರೀಶ ಕಾಯ್ಕಿಣಿ ಇನ್ನಿಲ್ಲ. 90 ವಯಸ್ಸಿನ ಅವರು ನಿಧನರಾಗಿದ್ದಾರೆ. ಉತ್ತರ ಕನ್ನಡದಲ್ಲಿ ಪ್ರಮುಖವಾಗಿ ಆ ಮೂಲಕ ಕರ್ನಾಟಕದ ಉದ್ದಕ್ಕೆ ವೈಚಾರಿಕತೆ ಹಬ್ಬಿಸುವಲ್ಲಿ ಅವರ ಕೊಡುಗೆ ಸ್ಮರಣೀಯ. ಅವರು ಹಲವಾರು ಗಮನಾರ್ಹ ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲೂ ಅವರ 'ಲೋಕಾಯತ' ಗ್ರಂಥ ವೈಚಾರಿಕ ಪ್ರಖರತೆಯನ್ನು ಹೊಮ್ಮಿಸುವ ಮಹತ್ವದ ಕೃತಿ. ಗೌರೀಶ ಕಾಯ್ಕಿಣಿಯವರ ಸಂತಾಪ ಸಲ್ಲಿಕೆಯ ನೆನಪುಗಳು ಇಲ್ಲಿವೆ.



ನಮ್ಮ ಜನಕ್ಕೆ ವೈಜ್ಞಾನಿಕ ತಿಳಿವಳಿಕೆ ಬೇಕು. ಏನೆಲ್ಲ ಅವರು ಅರಿಯಬೇಕು ಎಂದು ಡಾ.ಶಿವರಾಮ ಕಾರಂತರು ಮಕ್ಕಳಿಗಾಗಿ, ಹಿರಿಯರಿಗಾಗಿ ವಿಜ್ಞಾನ ಹಾಗೂ ಬೌದ್ಧಿಕ ಸಾಹಿತ್ಯವನ್ನು ಎಷ್ಟೊಂದು ಗೀಳಿನಿಂದ ಬರೆದರು. ಅದನ್ನೆ ಡಾ. ಗೌರೀಶ ಕಾಯ್ಕಿಣಿಯವರು ಬೇರೊಂದು ರೀತಿಯಿಂದ ಮಾಡಿದರು.

"ಗಾಂಧೀ ಯುಗದಲ್ಲಿ ಧಾರ್ಮಿಕತೆ, ಗೂಢತೆ, ಮೂಢಭಾವನೆ, ಅಂಧಶ್ರದ್ಧೆ, ಬುದ್ಧಿಗೆ ನಿಲುಕದ ಹಟವಾದ - ಇವೆಲ್ಲವುಗಳಿಂದ ಯುಕ್ತವಾದ ಒಂದು ಭಾವೋದ್ರೇಕದ ವಾತಾವರಣ ಮಬ್ಬಿನಂತೆ ದೇಶದ ಚಿದಾಕಾಶದಲ್ಲಿ ಹಬ್ಬಿತು.... ನಮಗೆ ಇಂದು ಈ ಅಂಧಕಾರಯುಗದಿಂದ ಹೊರಬರಬೇಕಾಗಿದೆ" ಎಂದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೊದಲ ದಿನಗಳಲ್ಲೇ ಸಾರಿದ ಧೀರವ್ಯಕ್ತಿತ್ವ ಅವರದು. ಈ ಕಾರಣಕ್ಕಾಗಿ ಅವರು ಬರೆದ ಬರಹ, ಮಾಡಿದ ಭಾಷಣ, ನಡೆಸಿದ ಸಂಭಾಷಣೆ ಲೆಕ್ಕವಿಲ್ಲದಷ್ಟು. ಸ್ವತಃ ಉತ್ತಮ ಸೃಜನಶೀಲ ಲೇಖಕರಾದ ಅವರು ಅದನ್ನು ಹಿಂದಿಕ್ಕಿ ಅಥವಾ ಅದಕ್ಕೆ ಎರಡನೇ ಸ್ಥಾನ ಕೊಟ್ಟು ವೈಚಾರಿಕ, ವೈಜ್ಞಾನಿಕ ಸಾಹಿತ್ಯ ನಿರ್ಮಾಣದ ಕಡೆ ಹೆಚ್ಚಿನ ಗಮನ ಕೊಟ್ಟರು. ಅವರ ವೈಚಾರಿಕ ಹರಿತಕ್ಕೆ ಸಾಹಿತ್ಯಿಕ ಲಾವಣ್ಯಗುಣದ ಸಹಯೋಗ ದೊರಕಿದ್ದರಿಂದ ಗದ್ಯಶೈಲಿಗೆ ಬೇರೆಯದೇ ಆದ ಒಂದು ಶಕ್ತಿ ಮತ್ತು ಸೊಬಗು ಪ್ರಾಪ್ತವಾಯಿತು.

ನಮ್ಮ ಜನದೆದುರು ಜಗತ್ತಿನ ವೈಚಾರಿಕತೆಯ ವಿವಿಧ ಪ್ರಸ್ಥಾನಗಳನ್ನು ತೆರೆದಿಡಲು ಪ್ರಯತ್ನಿಸಿದರು. ಮಾರ್ಕ್ಸ್‌ವಾದ, ಮಾನವತಾವಾದ, ವಿಚಾರವಾದ, ನಾಸ್ತಿಕವಾದ, ಲೋಕಾಯುತವಾದ, ಬಾಳಿನಗುಟ್ಟು, ಪ್ರೀತಿ (ವೈಜ್ಞಾನಿಕ ವಿಶ್ಲೇಷಣೆ) ಒಂದೇ ಎರಡೇ! ಬೇಂದ್ರೆಯವರ ಕಾವ್ಯವನ್ನು ಹೇಗೆ ತಾದಾತ್ಮ್ಯತೆಯಿಂದ ಪರಿಭಾವಿಸ ಬಲ್ಲವರಾಗಿದ್ದರೋ, ಅಷ್ಟೇ ತಾದಾತ್ಮ್ಯತೆ ಯಿಂದ ಶಂ.ಬಾ. ಜೋಶಿಯವರ ಕಠಿಣತರವಾದ ಸಂಸ್ಕೃತಿ-ಸಂಶೋಧಕ ಚಿಂತನೆಯನ್ನೂ ಪರಿಭಾವಿಸಬಲ್ಲ ಸಮತೋಲನ ಅವರದ್ದು.

ಒಟ್ಟಾರೆಯಾಗಿ ಅವರ ಚಿಂತನೆಯ ಗುರಿ, ಒಳ ಸೆಳವು ಜೀವನವನ್ನು ಉತ್ತಮದ ಕಡೆಗೆ ನಡೆಸುವ ಪರಿಯುಳ್ಳದಾಗಿತ್ತು. 'ಸಂಸ್ಕೃತಿಯ ತಿರುಳು ಸಹಿಷ್ಣುತೆ. ಸ್ವಾತಂತ್ರ್ಯಕ್ಕೆ ಸಹಿಷ್ಣುತೆಯೇ ರಕ್ಷಾ ಕವಚ. ಅಂದರೆ ವಿಚಾರವಾದವು, ಬುದ್ಧಿ ಪ್ರಾಮಣ್ಯವು ಸ್ವಾತಂತ್ರ್ಯಕ್ಕೂ, ಸಂಸ್ಕೃತಿಗೂ, ನಾಗರೀಕತೆಗೂ ಮಾನವನ ಸುಖಶಾಂತಿಗೂ ಕೂಡಿಯೇ ಬೀಜ ಮಂತ್ರ' ಎನ್ನುತ್ತಾರೆ.

ಅವರು ಮಾನವನ ಆತ್ಮಸ್ವಾತಂತ್ರ್ಯಕ್ಕೆ ಆಧಾರವೆಂದು (ಕ್ಲಾಯಿವ್ ಬೆಲ್‌ನ) ಮೂರು ಮಾತುಗಳನ್ನು ಉದ್ಧರಿಸುತ್ತಾರೆ.

1) ನಾವು ನಂಬಿದ್ದೆಲ್ಲ ನಿಜವಿರಬೇಕೆಂದಿಲ್ಲ.
2) ನಾವು ಮೆಚ್ಚಿದ್ದೆಲ್ಲ ಒಳಿತಿರಬೇಕೆಂದಿಲ್ಲ.
3) ಎಲ್ಲ ಪ್ರಶ್ನೆಗಳಿಗೂ ಕೊನೆಯ ಉತ್ತರ ಸಿಕ್ಕಿದೆಯೆಂದಲ್ಲ.

ಇದು ಗೌರೀಶರು ನಮ್ಮ ಕೈಗೆ ಕೊಟ್ಟ ಬೆಳಕಿನ ಬುತ್ತಿ.

- ಡಾ. ಆರ್.ವಿ.ಭಂಡಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH